

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜೂನ್ 5 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 50 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಎನ್‌ಡಿಎ 292 ಇಂಡಿಯಾ 233





ಬಿಜೆಪಿ 240

ಮೂರನೇ ಬಾರಿಗೆ ಎನ್‌ಡಿಎ ಅಧಿಕಾರಕ್ಕೆ

ಬಿಜೆಪಿ ಪ್ರಧಾನ ಕಚೇರಿಯಲ್ಲಿ ಮೋದಿ ಭಾಷಣ

(ಪೂರ್ಣ ವರದಿ ಪುಟ–4)

ಎನ್‌ಡಿಎಗೆ ಸರಳ ಬಹುಮತ

ನವದೆಹಲಿ, ಜೂ.4–ವಿಶ್ವದ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದ 18ನೇ ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸರಳ ಬಹುಮತದೊಂದಿಗೆ ಹೊರ ಹೊಮ್ಮಿದೆ.

ಎನ್‌ಡಿಎ ಪಡೆದಿರುವ ಸ್ಥಾನಗಳನ್ನು ಗಮನಿಸಿದಾಗ ಈ ಮೈತ್ರಿಕೂಟವೇ ಕೇಂದ್ರ ಸರ್ಕಾರದ ಆಡಳಿತ ಚುಕ್ಕಾಣಿ ಹಿಡಿಯಲಿದ್ದು, 3ನೇ ಬಾರಿಗೆ ಮೋದಿ ಪ್ರಧಾನಿಯಾಗಲಿದ್ದಾರೆ ಎಂದು ಅನಿಸಿದರೂ, ಮತ್ತೊಂದೆಡೆ ಇಂಡಿಯಾ ಮೈತ್ರಿಕೂಟದ ನಾಯಕರು ನಾವೇ ಸರ್ಕಾರ ರಚಿಸುತ್ತೇವೆ ಎಂದು ಹೇಳುತ್ತಿರುವುದು ರಾಜಕೀಯ ಪಡಸಾಲೆಯಲ್ಲಿ ಕುತೂಹಲ ಮೂಡಿಸಿದೆ. ಭಾರತದ ಒಟ್ಟು 543 ಕ್ಷೇತ್ರಗಳ ಪೈಕಿ ಆಡಳಿತ ಚುಕ್ಕಾಣಿ ಹಿಡಿಯಲು ಕನಿಷ್ಠ ಪಕ್ಷ 272 ಕ್ಷೇತ್ರಗಳ ಅವಶ್ಯಕತೆ ಇದೆ. ಬಿಜೆಪಿ 240 ಸ್ಥಾನ ಪಡೆದಿದ್ದು, ಈ ಪಕ್ಷ ಅತೀ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದ್ದರೂ, ಸ್ಪಷ್ಟ ಬಹುಮತ ಗಳಿಸಿಲ್ಲ ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ 292 ಕ್ಷೇತ್ರಗಳಲ್ಲಿ ಜಯ ಗಳಿಸಿರುವುದರಿಂದ ಎನ್‌ಡಿಎ ಸರಳ ಬಹುಮತ ಪಡೆದಿದೆ ಎಂದು ಹೇಳಬಹುದು. ಮತ್ತೊಂದೆಡೆ ಕಾಂಗ್ರೆಸ್ 99 ಸ್ಥಾನಗಳಲ್ಲಿ ● 9ನೇ ಪುಟಕ್ಕೆ

ಇತರರು 18

ಕಾಂಗ್ರೆಸ್ 99

ಉತ್ತರಪ್ರದೇಶ ಜನತೆ ಸಂವಿಧಾನವನ್ನು ರಕ್ಷಿಸಿದ್ದಾರೆ

ರಾಹುಲ್ ಗಾಂಧಿ ಪ್ರತಿಕ್ರಿಯೆ

(ಪೂರ್ಣ ವರದಿ ಪುಟ–4)





ಗ್ಯಾರಂಟಿಗೆ ಮನ್ನಣೆ ನೀಡದ ರಾಜ್ಯದ ಮತದಾರರು; ಎನ್‌ಡಿಎ ಮೈತ್ರಿಕೂಟಕ್ಕೆ ಮಣೆ

28ರಲ್ಲಿ ಬಿಜೆಪಿ 17; ಕಾಂಗ್ರೆಸ್ 9; ಜೆಡಿಎಸ್ 2

● ಕುಟುಂಬ ರಾಜಕಾರಣ ಆಸರೆ, 1ರಿಂದ 9 ಸ್ಥಾನಕ್ಕೇರಿದ ಕಾಂಗ್ರೆಸ್ ● ಎಂಟು ಸ್ಥಾನ ಕಳೆದುಕೊಂಡ ಬಿಜೆಪಿ
● ಮೊದಲ ಹಂತದಲ್ಲಿನ 14ರಲ್ಲಿ 12–2; ಎರಡನೇ ಹಂತದ 14ರಲ್ಲಿ ತಲಾ 7 ಸ್ಥಾನ ಗಳಿಸಿದ ಎನ್‌ಡಿಎ–ಕಾಂಗ್ರೆಸ್



ಯದುವೀರ್



ಹೆಚ್.ಡಿ.ಕುಮಾರಸ್ವಾಮಿ



ಸುನೀಲ್ ಬೋಸ್ ಶ್ರೇಯಸ್ ಪಟೇಲ್



ರಾಧಾಕೃಷ್ಣ, ಪ್ರಹ್ಲಾದ್‌ಜೋಶಿ, ಜಗದೀಶ್‌ಶೆಟ್ಟರ್, ಬೊಮ್ಮಾಯಿ, ಕಾಗೇರಿ, ರಾಘವೇಂದ್ರ, ಕಾರಜೋಳ, ಸೋಮಣ್ಣ, ಜಿಗಜಿಣಗಿ, ಗದ್ದಿಗೌಡರ್, ಸುಧಾಕರ್, ಶೋಭಾ
ಮಂಜುನಾಥ್, ಮೋಹನ್, ತೇಜಸ್ವಿಸೂರ್ಯ, ಶ್ರೀನಿವಾಸ ಪೂಜಾರಿ, ಬ್ರಿಜೇಶ್ ಚೌಟ, ಮಲ್ಲೇಶ್‌ಬಾಬು, ಪ್ರಭಾ, ಪ್ರಿಯಾಂಕ, ಕುಮಾರನಾಯಕ್, ಸಾಗರ್ ಖಂಡ್ರೆ, ರಾಜಶೇಖರ, ತುಕಾರಾಂ

ಬೆಂಗಳೂರು, ಜೂನ್ 4(ಕೆಎಂಶಿ)– ವಿಧಾನಸಭಾ ಚುನಾವಣೆಯಲ್ಲಿ ಗ್ಯಾರಂಟಿಗೆ ಮತ ನೀಡಿ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತಂದಿದ್ದ ರಾಜ್ಯದ ಮತದಾರರು ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಮಣೆ ಹಾಕಿದ್ದಾರೆ.

ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಲ್ಲಿ, ಎರಡು ಹಂತದಲ್ಲಿ ನಡೆದ ಚುನಾವಣೆಯ ಮತ ಎಣಿಕೆ ಇಂದು ನಡೆಯಿತು. ಎನ್‌ಡಿಎ ಮೈತ್ರಿಕೂಟದ ಬಿಜೆಪಿ 17ರಲ್ಲೂ, ಜೆಡಿಎಸ್ ಎರಡರಲ್ಲೂ, ಆಡಳಿತಾರೂಢ ಕಾಂಗ್ರೆಸ್‌ಗೆ ಒಂಭತ್ತು ಸ್ಥಾನಗಳನ್ನು ಮತದಾರರು ನೀಡಿದ್ದಾರೆ.

ಎನ್‌ಡಿಎ ಮೈತ್ರಿಕೂಟವನ್ನು 19 ಕ್ಷೇತ್ರಗಳಲ್ಲಿ ಗೆಲ್ಲಿಸುವ ಮೂಲಕ ಮತದಾರರು ಒಟ್ಟು ಕ್ಷೇತ್ರಗಳಲ್ಲಿ ಸಿಂಹಪಾಲು ನೀಡಿದ್ದು, ಕಾಂಗ್ರೆಸ್ ಕಳೆದ ಬಾರಿ ಗಳಿಸಿದ್ದ ಒಂದು ಸ್ಥಾನದಿಂದ ಒಂಭತ್ತು ಸ್ಥಾನಗಳಿಗೆ ಬಡ್ತಿ ಪಡೆದಿದೆ. ಕಳೆದ ಲೋಕಸಭಾ ಚುನಾವಣೆಗೆ ಹೋಲಿಕೆ ಮಾಡಿದರೆ, ಬಿಜೆಪಿ 8 ಸ್ಥಾನಗಳನ್ನು ಕಳೆದುಕೊಂಡಿದೆ.

ಮೊದಲ ಹಂತದಲ್ಲಿ ನಡೆದ ಹಳೇ ಮೈಸೂರು ಭಾಗದ ● 9ನೇ ಪುಟಕ್ಕೆ



ಮೈಸೂರು ಮಿತ್ರ ಬುಧವಾರ 5 ಜೂನ್ 2024

ಶತ್ರು ಭೈರವಿ ಯಾಗದಿಂದ ಗೆದ್ದಿಲ್ಲ; ಕಾರ್ಯಕರ್ತರ ಪರಿಶ್ರಮದಿಂದ ಗೆದ್ದಿದ್ದೇವೆ!

ಮಂಡ್ಯದಲ್ಲಿ ಜಯಭೇರಿ ಬಾರಿಸಿದ ನಂತರ ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಮಾಜಿ ಸಿಎಂ ಕುಮಾರಸ್ವಾಮಿ ಟಾಂಗ್



ಮಾಜಿ ಮುಖ್ಯಮಂತ್ರಿ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರದ ವಿಜೇತ ಎನ್‌ಡಿಎ ಅಭ್ಯರ್ಥಿ ಹೆಚ್.ಡಿ. ಕುಮಾರಸ್ವಾಮಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಬೆಂಗಳೂರು, ಜೂ. 4(ಕೆಎಂಶಿ)– ಜನರ ಆಶೀರ್ವಾದ ಹಾಗೂ ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ಪರಿಶ್ರಮ ದಿಂದ ಬೆಂಗಳೂರು ಗ್ರಾಮಾಂತರ ಕ್ಷೇತ್ರವನ್ನು ಗೆದ್ದಿದ್ದೇವೆಯೇ ಹೊರತು, ಶತ್ರು ಭೈರವಿ ಯಾಗ ಮಾಡಿ ಅಲ್ಲ ಎಂದು ಮಾಜಿ ಸಿಎಂ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರದ ವಿಜೇತ ಎನ್‌ಡಿಎ ಅಭ್ಯರ್ಥಿ ಹೆಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ತಿಳಿಸಿದ್ದಾರೆ.

ಮಂಡ್ಯ ಲೋಕಸಭೆ ಕ್ಷೇತ್ರದಿಂದ ಜಯಭೇರಿ ಬಾರಿಸಿ, ಸಂಭ್ರಮಾಚರಣೆ ಸಂದರ್ಭದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ಕುರಿ, ಮೇಕೆ, ಎಮ್ಮೆ ಕಡಿದು ಗೆದ್ದಿಲ್ಲ, ಕಾರ್ಯಕರ್ತರ ಶ್ರಮದಿಂದ ಗೆದ್ದಿದ್ದೇವೆ. ರಾಜ್ಯದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಕ್ಷೇತ್ರಗಳಲ್ಲಿಯೇ ಕಾಂಗ್ರೆಸ್ ಅಭ್ಯರ್ಥಿಗಳು ಸೋತಿದ್ದಾರೆ ಎಂದು ತಿರುಗೇಟು ನೀಡಿದರು.

ಸೂರ್ಯ ಚಂದ್ರ ಇರುವುದು ಎಷ್ಟು ಸತ್ಯವೋ ಕುಮಾರಸ್ವಾಮಿ ಸೋಲುವುದೂ ಅಷ್ಟೇ ಸತ್ಯ ಎಂದು ಮಂಡ್ಯದಲ್ಲಿ ಮುಖ್ಯಮಂತ್ರಿ ಹೇಳಿದ್ದರು. ಈಗ ಸೂರ್ಯ ಹುಟ್ಟುತ್ತಾನೋ ಇಲ್ಲವೋ ನೋಡೋಣ ಎಂದು ಕುಟುಕಿದರು.

ಮಂಡ್ಯ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಜನರು ಆಶೀರ್ವಾದ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷ ಹಣದ ಹೊಳೆ ಹರಿಸಿ ಅಧಿಕಾರ ದುರುಪಯೋಗ ಮಾಡಿಕೊಂಡರೂ ಜನರು ಲೆಕ್ಕಕ್ಕೆ ತೆಗೆದುಕೊಂಡಿಲ್ಲ, ಪ್ರೀತಿ, ವಿಶ್ವಾಸಕ್ಕೆ ಮನ್ನಣೆ ನೀಡಿದ್ದಾರೆ, ನನಗೆ ರಾಜಕೀಯವಾಗಿ ಶಕ್ತಿ ತುಂಬಿದ ಮಂಡ್ಯ ಯಾವತ್ತೂ ನನ್ನ ಕೈ ಬಿಡಲ್ಲ, ಬಿಡುವುದೂ ಇಲ್ಲ ಎಂದು ಭಾವುಕರಾಗಿ ನುಡಿದರು.

ಕೋಲಾರ ಕ್ಷೇತ್ರದಲ್ಲಿ ಜೆಡಿಎಸ್ ಗೆಲುವು ಸಾಧಿಸಿದೆ, ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ಸಂಘಟಿತ ಶ್ರಮದಿಂದ ಜೆಡಿಎಸ್ ಅಭ್ಯರ್ಥಿ ಮಲ್ಲೇಶ್ ಬಾಬು ಜಯ ಗಳಿಸಿದ್ದಾರೆ. ಜನರು ನಮ್ಮನ್ನು ಆಶೀರ್ವದಿಸಿದ್ದಾರೆ. ಅವರ ನಂಬಿಕೆಯನ್ನು ಹುಸಿ ಮಾಡುವುದಿಲ್ಲ, ನಾಡಿನ ಅಭಿವೃದ್ಧಿಗೆ ನರೇಂದ್ರ ಮೋದಿ ಅವರ ಜತೆಗೂಡಿ ಕೆಲಸ ಮಾಡುತ್ತೇವೆ. ಮೋದಿ ಅವರು ಕಳೆದ ಎರಡೂವರೆ ತಿಂಗಳು ಗೆಲುವಿಗೆ ಶ್ರಮಿಸಿದ್ದಾರೆ. ಇಡೀ ದ'ೀಶ'ವ'ನ'್ನ ಸುತ್ತಿದ್ದಾರೆ. ಎನ್‌ಡಿಎ ಸಾಧನೆಯಲ್ಲಿ ಅವರ ಪಾತ್ರ ದೊಡ್ಡದು.

ಎಕ್ಸಿಟ್ ಪೋಲ್‌ನಲ್ಲಿ ಬಂದ ಸಮೀಕ್ಷೆಗಳು ಸ್ವಲ್ಪ ಏರುಪೇರಾಗಿದೆ. ಈ ಬಗ್ಗೆ ಯಾರನ್ನೂ ದೂರಲು ಹೋಗಲ್ಲ.

ನಾನು ನೂರಾ ಮೂವತ್ತಾರು ಸ್ಥಾನ ಗೆದ್ದಿದ್ದೀನಿ. ಜೆಡಿಎಸ್ ಕೇವಲ ಹತ್ತೊಂಬತ್ತು ಸ್ಥಾನ ಮಾತ್ರ ಗೆದ್ದಿದೆ ಎಂಬ ದುರಹಂಕಾರದ ಮಾತುಗಳನ್ನು ಒಬ್ಬರು ಆಡಿದ್ದರು. ಅದಕ್ಕೆ ಉತ್ತರವಾಗಿ ಈ ಫಲಿತಾಂಶ ಬಂದಿದೆ. ಬೆಂಗಳೂರು ಗ್ರಾಮಾಂತರ, ಮಂಡ್ಯ, ಕೋಲಾರ ಕ್ಷೇತ್ರಗಳ ಮತದಾರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಮೈತ್ರಿಕೂಟದ ಪರವಾಗಿ ಮತ ಹಾಕಿರುವ ಪ್ರತಿಯೊಬ್ಬರಿಗೂ ವಂದಿಸುತ್ತೇನೆ. ಗ್ಯಾರಂಟಿ ಯೋಜನೆಗಳಿಂದ ಕಾಂಗ್ರೆಸ್ಸಿಗೆ ಗೆಲುವಾಗಿದೆ ಎಂದು ಹೇಳಲ್ಲ. ನಮ್ಮ ಮೈತ್ರಿಯನ್ನು ಜನ ಒಪ್ಪಿದ್ದಾರೆ ಎಂದು ಕುಮಾರಸ್ವಾಮಿ ತಿಳಿಸಿದರು.

ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಸರಳ ಆಚರಣೆ



ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಅಂಗವಾಗಿ ಮಂಗಳವಾರ ಜಿಲ್ಲಾಡಳಿತದ ವತಿಯಿಂದ ಕೆ.ಆರ್.ವೃತ್ತದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಮನ ಸಲ್ಲಿಸಿದರು.

ಮೈಸೂರು, ಜೂ.4(ಜಿಎ)–ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಲೋಕಸಭಾ ಚುನಾವಣೆಯ ಚುನಾವಣೆ ಫಲಿತಾಂಶದ ದಿನವಾದ ಇಂದು ನೀತಿ ಸಂಹಿತೆ ಜಾರಿ ಇದ್ದ ಹಿನ್ನೆಲೆಯಲ್ಲಿ ಅದ್ದೂರಿಯಾಗಿ ಜಯಂತಿ ಆಚರಣೆ ಮಾಡದೆ, ಸರಳವಾಗಿ ನಗರದ ಕೆ.ಆರ್. ವೃತ್ತದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಜಿಲ್ಲಾಡಳಿತದ ವತಿಯಿಂದ ಮೈಸೂರು ನಗರಪಾಲಿಕೆ ಆಯುಕ್ತೆ ಡಾ.ಮಧು ಮಾಲಾರ್ಪಣೆ ಮಾಡಿ ನಮನ ಸಲ್ಲಿಸಿದರು.

ವಿವಿಧ ಸಂಘ–ಸಂಸ್ಥೆಯವರು ನಮನ ಸಲ್ಲಿಸಿ, ನಾಲ್ವಡಿ ಕೃಷ್ಣರಾಜ ಒಡೆಯರ್ ನಾಡಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಆದರೆ, ಅವರ ಜಯಂತಿಯನ್ನು ಇಷ್ಟು ಸರಳವಾಗಿ ಆಚರಿಸುತ್ತಿರುವುದು ಸರಿಯಲ್ಲ. ಪಾಲಿಕೆ ಆಯುಕ್ತೆ ಮಾಲಾರ್ಪಣೆ ಮಾಡಿ ಫೋಟೋ ತೆಗೆಸಿಕೊಂಡು ತೆರಳುತ್ತಿದ್ದಾರೆ. ನಾಲ್ವಡಿ ಅವರ ಕುರಿತು ಒಂದೆರಡು ಮಾತನಾಡಬೇಕಿತ್ತು. ಇಲ್ಲವಾದರೆ, ಅವರ ಗೀತೆ ಕೇಳಬೇಕಿತ್ತು ಎಂದು ಬೇಸರ ವ್ಯಕ್ತಪಡಿಸಿದರು.

ಸಂಘ–ಸಂಸ್ಥೆಯವರು ಬೇಸರ ವ್ಯಕ್ತಪಡಿಸಿದ ನಂತರ ನಗರಪಾಲಿಕೆ ಆಯುಕ್ತೆ ಮಧು ಅವರೊಟ್ಟಿಗೆ ಮಾತನಾಡಿ ಸಮಾಧಾನಪಡಿಸಿದರು. ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ್, ವಲಯ ಕಚೇರಿ–6ರ ಅಧಿಕಾರಿ ವಾಣಿ ಆಳ್ವಾ, ಸಾಮಾಜಿಕ ಕಾರ್ಯಕರ್ತ ಅರವಿಂದ ಶರ್ಮ, ಇತಿಹಾಸ ತಜ್ಞ ಪ್ರೊ.ನಂಜರಾಜ ಅರಸ್, ಒಕ್ಕಲಿಗ ವಿಕಾಸ ವೇದಿಕೆಯ ಯಮುನಾ, ಅರಸು ಮಂಡಳಿಯ ಹೆಚ್‌ಎಂಟಿ ಲಿಂಗರಾಜ್ ಸೇರಿದಂತೆ ಮತ್ತಿತರರಿದ್ದರು.

ಐದನೇ ಬಾರಿಯೂ ಲಕ್ಷ್ಮಣ್‌ಗೆ ಕೈಕೊಟ್ಟ ಅದೃಷ್ಟ!



ಎಂ. ಲಕ್ಷ್ಮಣ ಬೆಂಬಲಿಗರೊಂದಿಗೆ ಮತ ಎಣಿಕಾ ಕೇಂದ್ರದಿಂದ ನಿರ್ಗಮಿಸುತ್ತಿರುವುದು.

ಮೈಸೂರು, ಜೂ.4(ಬಿಎಲ್‌ಯು)– ರಾಜಕಾರಣದಲ್ಲಿ ಚತುರತೆ, ಪರಿಶ್ರಮ, ಆಯ್ಕೆಗಿಂತ ಅದೃಷ್ಟ ಅಧಿಕಾರ ತಂದು ಕೊಡುವುದೇ ಜಾಸ್ತಿ. ಅದಿಲ್ಲದಿದ್ದರೆ ಉಳಿದೆಲ್ಲವೂ ನಗಣ್ಯ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣಗೆ ಈ ಬಾರಿಯೂ ಅದೃಷ್ಟ ಕೈಕೊಟ್ಟಿದೆ.

ಲಕ್ಷ್ಮಣ ಈ ತನಕ ಐದು ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದಾರೆ ಆದರೆ ಐದರಲ್ಲೂ ಸೋತಿದ್ದು, ತೀವ್ರ ರಾಜಕೀಯ ಹಿನ್ನಡೆಯಾಗಿದೆ. ಮೊದಲ ಬಾರಿಗೆ ಮೈಸೂರು ನಗರ ಪಾಲಿಕೆ ಚುನಾವಣೆಯಲ್ಲಿ ಯಾದವಗಿರಿಯಿಂದ ಲಕ್ಷ್ಮಣ ಸ್ಪರ್ಧೆ ಮಾಡಿ ಸೋಲುಂಡಿದ್ದರು. ತರುವಾಯ ಚಾಮರಾಜ ವಿಧಾನ ಸಭಾ ಕ್ಷೇತ್ರದಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಹಿನ್ನಡೆ ಅನುಭವಿಸಿದ್ದರು.

ಇದಾದ ನಂತರ ಮೈಸೂರು ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧೆ ಮಾಡಿ ಸೋತಿದ್ದರು. ಈ ಎಲ್ಲಾ ಸೋಲಿನಿಂದ ಎದೆಗುಂದದ ಲಕ್ಷ್ಮಣ ಪ್ರಯತ್ನ ಮಾಡುತ್ತಲೇ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲೂ ಸ್ಪರ್ಧಿಸಿದ್ದರು. ಆದರೆ ಆ ಚುನಾವಣೆಯಲ್ಲೂ ಮತದಾರ ಪ್ರಭು ಕೈ ಹಿಡಿಯಲಿಲ್ಲ. ಈ ಬಾರಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧೆ ಮಾಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಾದ ಕಾರಣ ಅವರ ವರ್ಚಸ್ಸಿನಿಂದ ಲಕ್ಷ್ಮಣ ಗೆಲ್ಲುತ್ತಾರೆ ಎಂಬ ನಿರೀಕ್ಷೆ ಇತ್ತು.

ಜೊತೆಗೆ ಗ್ಯಾರಂಟಿ ಪ್ರಭಾವ, ಜಾತಿ ಸಮೀಕರಣದಲ್ಲಿ ಅಹಿಂದ ಮತಗಳು ಕಾಂಗ್ರೆಸ್ ಕೈ ಹಿಡಿಯುವುದರಿಂದ ಲಕ್ಷ್ಮಣ ಈ ಬಾರಿ ಗೆದ್ದೇ ಗೆಲ್ಲುತ್ತಾರೆ ಎಂಬ ಲೆಕ್ಕಾಚಾರವಿತ್ತು ಆದರೆ ಈ ಎಲ್ಲಾ ನಿರೀಕ್ಷೆ ಲೆಕ್ಕಾಚಾರಗಳು ಉಲ್ಟಾ ಹೊಡೆದು ಲಕ್ಷ್ಮಣ ಐದನೇ ಬಾರಿಯೂ ಸೋಲುಂಡಿದ್ದಾರೆ.

ಫಲಿತಾಂಶಕ್ಕೂ ಮುನ್ನ ನಿರ್ಗಮಿಸಿದ ಲಕ್ಷ್ಮಣ

ಫಲಿತಾಂಶ ಪ್ರಕಟ ಆಗುವುದಕ್ಕೂ ಮುನ್ನ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಸೇರಿದಂತೆ ಅವರ ಬೆಂಬಲಿಗರು ಮತ ಎಣಿಕಾ ಕೇಂದ್ರದಿಂದ ನಿರ್ಗಮಿಸಿದರು.

ಮತ ಎಣಿಕೆಯ ಆರಂಭದಿಂದಲೂ ಲಕ್ಷ್ಮಣ ಮತ ಎಣಿಕಾ ಕೇಂದ್ರದಲ್ಲೇ ಇದ್ದರು. ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಮುಂದೆ ಕುಳಿತು ಪ್ರತಿ ಸುತ್ತಿನ ಮತಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದರು.

ಆದರೆ ಆರಂಭಿಕ ಸುತ್ತಿನಿಂದ ಕೊನೆತನಕ ಲಕ್ಷ್ಮಣ್‌ಗೆ ಲೀಡ್ ಬರಲೇ ಇಲ್ಲ. ಪ್ರತಿ ಸುತ್ತಿನಲ್ಲಿ ಯದುವೀರ್ ಅವರೇ ಲೀಡ್ ಪಡೆಯುತ್ತಾ ಹೋದರು.

ತಮಗೆ ಸೋಲು ಖಚಿತ ಎಂಬ ತೀರ್ಮಾನಕ್ಕೆ ಬಂದ ಲಕ್ಷ್ಮಣ, ಇನ್ನು ಎರಡು ಸುತ್ತು ಇರುವಾಗಲೇ ಬೆಂಬಲಿಗರ ಜೊತೆಗೂಡಿ ಮತ ಎಣಿಕಾ ಕೇಂದ್ರದಿಂದ ನಿರ್ಗಮಿಸಿದರು. ತರುವಾಯ ಮತ ಎಣಿಕಾ ಕೇಂದ್ರದಲ್ಲಿದ್ದ ಕಾಂಗ್ರೆಸ್ ಏಜೆಂಟ್‌ಗಳು ಕೂಡ ಒಬ್ಬೊಬ್ಬರಾಗಿ ನಿರ್ಗಮಿಸಿದರು.

ಯದುವೀರ್ ಕೈ ಹಿಡಿದ ಪ್ರಜಾಪ್ರಭುತ್ವ

ಪ್ರಸಕ್ತ ರಾಜಕೀಯದಲ್ಲಿ ಅಭ್ಯರ್ಥಿ ಆಯ್ಕೆಗೆ ನಾನಾ ಮಾನದಂಡಗಳಿರುತ್ತವೆ. ಜಾತಿ, ಹಣ, ಅಧಿಕಾರ, ಇನ್ನಿತರೆ ಲೆಕ್ಕಾಚಾರದಲ್ಲೇ ರಾಜಕೀಯ ಪಕ್ಷಗಳು ಅಭ್ಯರ್ಥಿಗಳಿಗೆ ಟಿಕೆಟ್ ನೀಡುತ್ತವೆ. ಆದರೆ ರಾಜಪ್ರಭುತ್ವದ ಹಿನ್ನೆಲೆಯುಳ್ಳ ಯದುವೀರ್‌ಗೆ ಪ್ರಜಾಪ್ರಭುತ್ವದಲ್ಲಿ ಮನ್ನಣೆ ದೊರೆತಿದೆ. ಪೂರ್ವಜರ, ಜನಪರ, ಜನ ಮನ್ನಣೆ ಆಡಳಿತ, ಈಗ ಅವರ ಕೈ ಹಿಡಿದಿದೆ.

ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇದೇ ಮೊದಲ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದರು. ಅವರ ಪೂರ್ವಜರ ಜನ ಕಲ್ಯಾಣ ಕಾರ್ಯ ಅವರ ನೆರವಿಗೆ ಬಂದಿದೆ. ಅವರ ತಂದೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ನಾಲ್ಕು ಬಾರಿ ಸಂಸದರಾಗಿದ್ದರು.

5 ಸುತ್ತಿನ ಭದ್ರತೆ, ಅಚ್ಚುಕಟ್ಟಾದ ವ್ಯವಸ್ಥೆ




ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತ ಎಣಿಕಾ ಕಾರ್ಯ ಮೈಸೂರಿನ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯ ಮಹಾರಾಣಿ ಕಾಲೇಜಿನಲ್ಲಿ ನಡೆಯಿತು. ಮತ ಎಣಿಕಾ ಕೇಂದ್ರಕ್ಕೆ ಹೋಗಲು 5 ಸುತ್ತಿನ ಭದ್ರತಾ ವ್ಯವಸ್ಥೆ ಮಾಡಲಾಗಿತ್ತು. ಅಧಿಕಾರಿಗಳು, ರಾಜಕೀಯ ಪಕ್ಷಗಳ ಏಜೆಂಟರು ಹಾಗೂ ಮಾಧ್ಯಮದವರ ಪಾಸ್ ಪರಿಶೀಲಿಸಿ ಒಳಗೆ ಬಿಡುತ್ತಿದ್ದರು. ಎಣಿಕಾ ಕೇಂದ್ರದ ಗೇಟ್ ಬಳಿ ಹಾಗೂ ಪ್ರವೇಶ ದ್ವಾರದ ಬಳಿ ಮೆಟಲ್ ಡಿಟೆಕ್ಟರ್ ಮೂಲಕ ಪ್ರವೇಶ ಕಲ್ಪಿಸಲಾಗಿತ್ತು.

ಮತ ಎಣಿಕಾ ಕೇಂದ್ರದ ಸುತ್ತ ಬ್ಯಾರಿಕೇಡ್‌ಗಳನ್ನು ಅಳವಡಿಸಿ ವಾಹನ ಸಂಚಾರ ಹಾಗೂ ಸಾರ್ವಜನಿಕರ ಪ್ರವೇಶವನ್ನು ಸಂಪೂರ್ಣ ನಿಷೇಧಿಸಲಾಗಿತ್ತು.

ಮಾಧ್ಯಮದವರನ್ನು ಹೊರತುಪಡಿಸಿ ಅಧಿಕಾರಿಗಳು, ಸಿಬ್ಬಂದಿ ಹಾಗೂ ರಾಜಕೀಯ ಪಕ್ಷಗಳ ಏಜೆಂಟರಿಗೆ ಮೊಬೈಲ್ ಬಳಕೆಯನ್ನು ನಿರ್ಬಂಧಿಸಲಾಗಿತ್ತು.

ಚುನಾವಣಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮೊಬೈಲ್ ಇಡಲು ತಾಲೂಕುವಾರು ಕೌಂಟರ್ ಮಾಡಲಾಗಿತ್ತು. ಗೊಂದಲಕ್ಕೆ ಆಸ್ಪದ ನೀಡದಂತೆ ವ್ಯವಸ್ಥೆ ಮಾಡಲಾಗಿತ್ತು.

ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಕುಮಾರ್ ನಾಯಕ್ ಈಗ ಸಂಸದ



ಮೈಸೂರು, ಜೂ.4(ಬಿಎಲ್‌ಯು)– ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಜಿ.ಕುಮಾರ್ ನಾಯಕ್ ಈಗ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ರಾಯಚೂರು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕುಮಾರ್ ನಾಯಕ್ ಜಯಭೇರಿ ಬಾರಿಸಿದ್ದಾರೆ. ಕುಮಾರ್ ನಾಯಕ್ ಅವರಿಗೂ ಮೈಸೂರಿಗೂ ನಂಟಿದೆ. ಮೈಸೂರಿನ ರಾಮಕೃಷ್ಣ ವಿದ್ಯಾಶಾಲಾದಲ್ಲಿ ಕುಮಾರ್ ನಾಯಕ್ ವ್ಯಾಸಂಗ ಮಾಡಿದ್ದರು.

1990ರಲ್ಲಿ ಐಎಎಸ್ ಅಧಿಕಾರಿಯಾಗಿ ಆಯ್ಕೆಯಾದ ಕುಮಾರ್ ನಾಯಕ್ ಮೈಸೂರು ಜಿಲ್ಲೆ ಹುಣಸೂರು ಉಪವಿಭಾಗಾಧಿಕಾರಿಯಾಗಿ ಕೆಲಸ ಮಾಡಿದ್ದರು. ತರುವಾಯ ಕರ್ನಾಟಕದ ವಿವಿಧ ಭಾಗಗಳಲ್ಲಿ ಕೆಲಸ ಮಾಡಿದ್ದ ಕುಮಾರ್ ನಾಯಕ್ ಅವರನ್ನು 2002ರಲ್ಲಿ ಮೈಸೂರು ಜಿಲ್ಲಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿತ್ತು.

ಮೂರು ವರ್ಷಗಳ ಕಾಲ ಮೈಸೂರು ಜಿಲ್ಲಾಧಿಕಾರಿಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದರು. ರಾಯಚೂರು ಜಿಲ್ಲಾಧಿಕಾರಿಯಾಗಿಯೂ ಕೆಲಸ ಮಾಡಿದ್ದ ಕುಮಾರ್ ನಾಯಕ್ ಸ್ವಯಂ ನಿವೃತ್ತಿ ಪಡೆದು ಕಾಂಗ್ರೆಸ್ ಪಕ್ಷದಿಂದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದರು. ಈಗ ಕುಮಾರ್ ನಾಯಕ್ ರಾಯಚೂರು ಲೋಕಸಭಾ ಕ್ಷೇತ್ರದಿಂದ ಬಿಜೆಪಿಯ ರಾಜ ಅಮರೇಶ್ ನಾಯಕ್ ಅವರನ್ನು ಸೋಲಿಸಿ, ಆಯ್ಕೆಯಾಗಿದ್ದಾರೆ.

ಅಂತೂ ಯದುವೀರ್ ಸಂಸದರಾದರು, ಮುಂದೆ...

ಮೈಸೂರು, ಜೂ.4(ಬಿಎಲ್‌ಯು)–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೂತನ ಸಂಸದರಾಗಿದ್ದಾರೆ. ಆದರೆ, ಮುಂದೆ ಅವರಿಗೆ ಸವಾಲುಗಳ ಸರಮಾಲೆಯೇ ಎದುರಾಗಲಿದೆ.

ರಾಜವಂಶಸ್ಥರಾಗಿರುವ ಯದುವೀರ್ ಸಂಸದರಾಗಿ ಆಯ್ಕೆಯಾದರೆ ಅರಮನೆ ಬಿಟ್ಟು ಹೊರಗೆ ಬರುವುದಿಲ್ಲ ಎಂದು ಕಾಂಗ್ರೆಸ್ ದೂರಿತ್ತು. ಆದರೆ ಕಾಂಗ್ರೆಸ್ ಆರೋಪವನ್ನು ನಯವಾಗಿ ತಿರಸ್ಕರಿಸಿದ ಯದುವೀರ್ ಅರಮನೆ ಹೊರಗೆ ಕಚೇರಿ ತೆರೆಯುತ್ತೇನೆ. ಅಲ್ಲಿ ಜನಸಾಮಾನ್ಯರನ್ನು ಭೇಟಿ ಮಾಡುತ್ತೇನೆ ಎಂದು ಭರವಸೆ ನೀಡಿದ್ದರು. ಈಗ ಯದುವೀರ್ ಸಂಸದರಾಗಿ ಆಯ್ಕೆಯಾಗಿದ್ದಾರೆ. ಹೇಳಿದಂತೆ ಮುಂದೆ ಸಾಮಾನ್ಯರಿಗೆ ಸುಲಭವಾಗಿ ಸಿಗಬೇಕಿದೆ. ಜನರ ಸಮಸ್ಯೆ ಪರಿಹಾರ ಮಾಡಬೇಕಿದೆ. ಮೈಸೂರು ಹಾಗೂ ಕೊಡಗು ಜಿಲ್ಲೆಯ ಅಭಿವೃದ್ಧಿ ಸಂಬಂಧ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಸಭೆ ನಡೆಸಬೇಕಿದೆ, ಪ್ರತಿದಿನ ಹತ್ತಾರು ಸಭೆ–ಸಮಾರಂಭಗಳಲ್ಲಿ ಭಾಗವಹಿಸಬೇಕಿದೆ. ಇದನ್ನೆಲ್ಲಾ ಯದುವೀರ್ ಹೇಗೆ ನಿಭಾಯಿಸುತ್ತಾರೆ ಎಂಬ ಕುತೂಹಲ ಜನಸಾಮಾನ್ಯರಲ್ಲಿದೆ.

ಜ್ಯೋತಿರಾದಿತ್ಯ ಸಿಂಧಿಯಾ, ಮಾಧವರಾವ್ ಸಿಂಧಿಯಾ ಸೇರಿದಂತೆ ಉತ್ತರ ಭಾರತದ ಬಹಳಷ್ಟು ರಾಜ ಮನೆತನದವರು ರಾಜಕಾರಣಕ್ಕೆ ಬಂದು ಜನಪ್ರತಿನಿಧಿಯಾಗಿ ಆಯ್ಕೆಯಾಗಿದ್ದಾರೆ. ಅವರೆಲ್ಲಾ ನಿರಂತರವಾಗಿ ಜನರ ಸಂಪರ್ಕದಲ್ಲಿರುವ ಕಾರಣ ಹತ್ತಾರು ವರ್ಷಗಳಿಂದ ಜನಪ್ರತಿನಿಧಿಯಾಗಿ ಆಯ್ಕೆಯಾಗುತ್ತಾ ಬಂದಿದ್ದಾರೆ. ಈಗ ಯದುವೀರ್ ಕೂಡ ಅದೇ ನಿಟ್ಟಿನಲ್ಲಿ ಸಾಗುತ್ತಾರೋ ಇಲ್ಲ ಕಾಂಗ್ರೆಸ್ ಆಪಾದಿಸಿದಂತೆ ನಡೆದುಕೊಳ್ಳುತ್ತಾರೋ ಕಾದು ನೋಡಬೇಕಿದೆ.

ಎನ್‌ಆರ್, ಪಿರಿಯಾಪಟ್ಟಣ ಹೊರತುಪಡಿಸಿ ಉಳಿದೆಲ್ಲಾ ಕ್ಷೇತ್ರಗಳಲ್ಲೂ ಯದುವೀರ್‌ಗೆ ಮುನ್ನಡೆ

ಮೈಸೂರು, ಜೂ. 4(ಆರ್‌ಕೆ)– ಮೈಸೂರಿನ ಎನ್‌ಆರ್ ಹಾಗೂ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರ ಹೊರತುಪಡಿಸಿ ಮೈಸೂರು ಮತ್ತು ಕೊಡಗು ಜಿಲ್ಲೆಯ ಉಳಿದೆಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಮೈತ್ರಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮುನ್ನಡೆ ಸಾಧಿಸಿದ್ದಾರೆ. ಇಲ್ಲೆಲ್ಲಾ ಅತೀ ಹೆಚ್ಚು ಮತಗಳು ಲಭಿಸಿವೆ.

ನರಸಿಂಹರಾಜ ಕ್ಷೇತ್ರದಲ್ಲಿ ಯದು ವೀರ್ 40,784 ಮತ ಪಡೆದರೆ, ಕಾಂಗ್ರೆಸ್‌ನ ಎಂ. ಲಕ್ಷ್ಮಣ 1,21,739 ಮತ ಗಳಿಸಿ 80,955 ಮತಗಳ ಮುನ್ನಡೆ ಸಾಧಿಸಿದ್ದಾರೆ. ಅದೇ ರೀತಿ ಪಿರಿಯಾಪಟ್ಟಣದಲ್ಲಿ ಬಿಜೆಪಿಗೆ 71,237, ಕಾಂಗ್ರೆಸ್‌ಗೆ 82,981 ಮತ ಲಭಿಸಿದ್ದು, ಲಕ್ಷ್ಮಣ 11,744 ಮತಗಳ ಲೀಡ್ ಗಳಿಸಿದರು. ಆದರೆ, ಹುಣಸೂರಲ್ಲಿ ಯದುವೀರ್ 84,436 ಮತ ಪಡೆದರೆ, ಲಕ್ಷ್ಮಣ 80, 340 ಮತ ಗಳಿಸಿದರು. ಚಾಮುಂಡೇಶ್ವರಿಯಲ್ಲಿ 1,03,112 ಮತ ಗಳಿಸಿದ ಬಿಜೆಪಿ ಅಭ್ಯರ್ಥಿಯು ಲಕ್ಷ್ಮಣರಿಗಿಂತ 38,144 ಅಧಿಕ ಮತ ಗಳಿಸಿದ್ದಾರೆ. ಕೃಷ್ಣರಾಜದಲ್ಲೂ ಬಿಜೆಪಿಗೆ 92,449, ಕಾಂಗ್ರೆಸ್‌ಗೆ 45,703 ಮತ ಲಭಿಸಿದ್ದು, ಇಲ್ಲಿಯೂ ಯದುವೀರ 46,746 ಮತಗಳ ಅಂತರ ಸಾಧಿಸಿದರು.

ಚಾಮರಾಜ ಕ್ಷೇತ್ರದಲ್ಲಿ ಬಿಜೆಪಿಗೆ 1,01,166 ಮತ ಲಭಿಸಿದರೆ, ಕಾಂಗ್ರೆಸ್‌ಗೆ 47,434 ಮತಗಳು ಬಂದಿದ್ದು, 53,732 ಮತಗಳಿಂದ ಯದುವೀರ್ ಮುನ್ನಡೆ ಸಾಧಿಸಿದರು. ಹುಣಸೂರಲ್ಲಿ ಬಿಜೆಪಿಯು 84,436 ಮತ ಗಳಿಸಿದ್ದು, ಲಕ್ಷ್ಮಣರಿಗಿಂತ 4,096 ಅಧಿಕ ಮತ ಗಳಿಸಿದರು.

ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಯದುವೀರ್‌ಗೆ 92,949, ಲಕ್ಷ್ಮಣ್‌ಗೆ 56,490 ಮತಗಳು ಲಭಿಸಿದ್ದು, ಬಿಜೆಪಿಯು 36,459 ಲೀಡ್ ಬಂದಿದೆ. ವಿರಾಜಪೇಟೆಯಲ್ಲಿ 87,310 ಮತ ಗಳಿಸಿದ ಯದುವೀರ್, ಕಾಂಗ್ರೆಸ್‌ನ ಲಕ್ಷ್ಮಣರಿಗಿಂತ 27,378 ಹೆಚ್ಚು ಮತ ಗಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.06.2024 ಬುಧವಾರ, ಮಳೆ ನಕ್ಷತ್ರ: ರೋಹಿಣಿ, 25.05.2024 ರಿಂದ 07.06.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ದಕ್ಷಿಣ ನೈರುತ್ಯ ರೈಲ್ವೆ, ಅರಣ್ಯ ಇಲಾಖೆ :** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬೈಸಿಕಲ್ ರ್‍ಯಾಲಿ, ಸ್ಥಳ: ಮೈಸೂರು ಅರಮನೆ ಉತ್ತರ ದ್ವಾರ, ಬೆಳಗ್ಗೆ 7.30 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ದೈಹಿಕ ಶಿಕ್ಷಣ ವಿಭಾಗ :** ಮಹಿಳಾ ಕ್ರಿಕೆಟ್ ಪಂದ್ಯಾವಳಿ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಸಿ. ವೆಂಕಟೇಶ್, ಮುಖ್ಯ ಅತಿಥಿಗಳು : ಕೆಎಸ್‌ಸಿಎ ಸಂಚಾಲಕ ಹರಿಕೃಷ್ಣ ಕುಮಾರ್, ಜೆಎಸ್‌ಎಸ್ ದೈಹಿಕ ಶಿಕ್ಷಣ ವಿಭಾಗದ ಡಾ. ಸಿ. ರೇವಣ್ಣ, ಸ್ಥಳ: ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರಿಕೆಟ್ ಮೈದಾನ, ಬೆಳಗ್ಗೆ 7.30ಕ್ಕೆ.

■ **ಭಾರತೀಯ ಜೈನ ಸಂಘಟನೆಯ ಪರಿಸರ ಬಳಗ, ಪಿಂಜ್ರಾಪೋಲ್ ಸೊಸೈಟಿ, ಕ್ಲೀನ್ ಮೈಸೂರು ಫೌಂಡೇಷನ್:** ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ, ಭಾಗವಹಿಸುವವರು : ಕಾಳೇಗೌಡ ನಾಗವಾರ, ಕೆ. ಕಾಳಚನ್ನೇಗೌಡ, ಸುಮತಿಲಾಲ್ ಪಗಾರಿಯಾ, ಪ್ರವೀಣ್ ಲುಂಕರ್, ರಾಗಿಣಿ ಆಲನಹಳ್ಳಿ, ಸ್ಥಳ: ಪಿಂಜ್ರಾಪೋಲ್ ಸೊಸೈಟಿ ಆವರಣ, ಬೆಳಗ್ಗೆ 8.30ಕ್ಕೆ.

■ **ಕಾವೇರಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಡಾ. ಚಂದ್ರಶೇಖರ್ ಫೌಂಡೇಷನ್ :** ವಿಶ್ವ ಪರಿಸರ ದಿನಾಚರಣೆ, ಗಿಡ ನೆಡುವ ಕಾರ್ಯಕ್ರಮ, ಸ್ಥಳ: ಡಿಸಿ ಕಚೇರಿ ಮುಂಭಾಗದ ರಸ್ತೆ, ಮೈಸೂರು–ಬನ್ನೂರು ರಸ್ತೆ, ಬೆಳಗ್ಗೆ 9ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್‌ಎಲ್‌ಎಚ್‌ಪಿ) :** ವಿಶ್ವ ಪರಿಸರ ದಿನಾಚರಣೆ, ಉದ್ಘಾಟನೆ : ಮಹಾನಗರ ಪಾಲಿಕೆ ಆಯುಕ್ತ ಡಾ. ಎನ್.ಎನ್. ಮಧು, ಅಧ್ಯಕ್ಷತೆ : ಪರಿಸರವಾದಿ ಪ್ರೊ. ರವಿಕುಮಾರ್, ಮುಖ್ಯ ಅತಿಥಿಗಳು : ಆರ್‌ಎಲ್‌ಎಚ್‌ಪಿ ಕಾರ್ಯದರ್ಶಿ ಪ್ರೊ. ವಿ.ಕೆ. ಜೋಸ್, ನಿರ್ದೇಶಕರಾದ ಶ್ರೀಮತಿ ಸರಸ್ವತಿ, ಸ್ಥಳ: ಚಿಕ್ಕಗಡಿಯಾರ ಆವರಣ, ಬೆಳಗ್ಗೆ 9.30ಕ್ಕೆ.

■ **ಭೀಮಾ ಗೋಲ್ಡ್ ಅಂಡ್ ಡೈಮಂಡ್ಸ್ :** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಾರ್ವಜನಿಕರಿಗೆ ಸಸಿ ವಿತರಣೆ, ಸ್ಥಳ: ಭೀಮಾ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್. ರಸ್ತೆ, ಬೆಳಗ್ಗೆ 10.30ಕ್ಕೆ


■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ವಿಶ್ವ ಪರಿಸರ ದಿನಾಚರಣೆ, ಮುಖ್ಯ ಅತಿಥಿಗಳು : ಕೋಟಿ ವೃಕ್ಷ ಪ್ರತಿಷ್ಠಾನ ಅಧ್ಯಕ್ಷ ಶ್ರೀಕಾಂತ್ ಭಟ್, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಉಪಸ್ಥಿತರು : ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಪೂಜಾ ಭಾಗವತ್ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಸಿ.ಕೆ. ರೇಣುಕಾರ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಸ್ಥಳ: ಸುಬ್ಬಲಕ್ಷ್ಮಿ ಸಭಾಂಗಣ, ಬೆಳಗ್ಗೆ 10.40ಕ್ಕೆ

■ **ಸುಯೋಗ್ ಆಸ್ಪತ್ರೆ, ಸುಯೋಗ್ ವೈದ್ಯಕೀಯ ಸಮೂಹ ಶಿಕ್ಷಣ ಸಂಸ್ಥೆಗಳು :** ವಿಶ್ವ ಪರಿಸರ ದಿನಾಚರಣೆ, ಸುಯೋಗ್ ಆಸ್ಪತ್ರೆ ಕೈ ತೋಟದಲ್ಲಿ ಹೂ ಗಿಡ ನೆಡುವ ಕಾರ್ಯಕ್ರಮ, ಪ್ರಾಸ್ತಾವಿಕ ನುಡಿ : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಹೂ ಗಿಡ ನೆಡುವ ಮೂಲಕ ಉದ್ಘಾಟನೆ : ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್ ಪತ್ರಿಕೆಗಳ ಸಂಸ್ಥಾಪಕ ಸಂಪಾದಕ ಡಾ. ಕೆ.ಬಿ. ಗಣಪತಿ, ಉಪಸ್ಥಿತರು : ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಮೈಸೂರು ವಿವಿ ಪ್ರಸಾರಾಂಗ ನಿವೃತ್ತ ನಿರ್ದೇಶಕ ಕೆ.ಟಿ. ವೀರಪ್ಪ, ಹಿರಿಯ ಉದ್ಯಮಿ ಡಾ. ಬಿ.ಆರ್. ಪೈ, ಅಧ್ಯಕ್ಷತೆ : ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ. ಮರೀಗೌಡ, ಪ್ರಶಸ್ತಿ ಪ್ರದಾನ : ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಜಿಲ್ಲಾ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಹರಿಶಂಕರ್, ಮುಖ್ಯ ಅತಿಥಿಗಳು : ಕೆನರಾ ಬ್ಯಾಂಕ್ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ರಾಜೀವ್ ರಂಜನ್‌ಕುಮಾರ್, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 11ಕ್ಕೆ.

■ **ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಶ್ರೀ ರಾಜೇಂದ್ರ ತೀರ್ಥಿಯ ಪೂರ್ವಾದಿ ಮಠ, ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ) ಶ್ರೀವ್ಯಾಸತೀರ್ಥ ವಿದ್ಯಾಪೀಠ:** ಶ್ರೀ ಮದ್ಬ್ರಹ್ಮ ಸೂತ್ರ–ಶ್ರೀಮದನು ವ್ಯಾಖ್ಯಾನ–ಸಹಿತ ಶ್ರೀ ಮನ್ನ್ಯಾಯ ಸುಧಾ ಮಂಗಳ ಮಹೋತ್ಸವ ಶ್ರೀಮನ್ನ್ಯಾಯ ಸುಧಾ ಪರೀಕ್ಷೆ ಹಾಗೂ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದರ ಸಹಸ್ರಚಂದ್ರ ದರ್ಶನ ಶಾಂತಿ ಮಹೋತ್ಸವ, ಬೆಳಗ್ಗೆ 6ಕ್ಕೆ ಸಂಸ್ಥಾನ ಪೂಜೆ, ಮಧ್ಯಾಹ್ನ 12.30ಕ್ಕೆ ತೀರ್ಥಪ್ರಸಾದ, ಬೆಳಗ್ಗೆ 9 ರಿಂದ 12 ಮತ್ತು ಮಧ್ಯಾಹ್ನ 2.30 ರಿಂದ ರಾತ್ರಿ 8 ರವರೆಗೆ ಶ್ರೀಮನ್ನ್ಯಾಯಸುಧಾಪರೀಕ್ಷೆ, ವಿದ್ವಾಂಸರಿಂದ ಉಪನ್ಯಾಸ, ಪೀಠಾಧಿಪತಿಗಳಿಂದ ಅನುಗ್ರಹ ಸಂದೇಶ, ಸ್ಥಳ: ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ.

■ **ಬದುಕು ಟ್ರಸ್ಟ್, ರಂಗಾಂತರಂಗ, ಮಹಾಬೆಳಕು, ಬಾರುಕೋಲು ಪತ್ರಿಕಾ ಬಳಗ :** ವಿಚಾರವಾದಿ ಬಿ.ಆರ್. ರಂಗಸ್ವಾಮಿ ಅವರ 40ನೇ ಹುಟ್ಟುಹಬ್ಬದ ಪ್ರಯುಕ್ತ ಸೈದ್ಧಾಂತಿಕ ವರ್ಸಸ್ ಅಧಿಕಾರ ರಾಜಕಾರಣ ಕುರಿತು ವಿಚಾರ ಸಂಕಿರಣ, ಪ್ರಸ್ತಾವನೆ : ಸಾಮಾಜಿಕ ಕಾರ್ಯಕರ್ತ ಪ್ರಮೋದ್, ವಿಷಯ ಮಂಡನೆ : ಚಿಂತಕ ನಾ. ದಿವಾಕರ, ಅಧ್ಯಕ್ಷತೆ : ಸಂಸ್ಕೃತಿ ಚಿಂತಕ ಪ್ರೊ. ಕಾಳೇಗೌಡ ನಾಗವಾರ, ಸ್ಥಳ: ರಂಗಾಂತರಂಗ, ಜೆಎಸ್‌ಎಸ್ ಕಾನೂನು ಕಾಲೇಜು ಹಿಂಭಾಗ, ಕುವೆಂಪುನಗರ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಬದುಕು ಬದಲಿಸಿದ ಶೋಧ' ಬಾನುಲಿ ಸರಣಿ, ಪ್ರಸ್ತುತಿ– ಎನ್.ಎನ್. ಸುರೇಂದ್ರನಾಥ್ ಸಾತ್ವಿಕ್, 6.40 'ನಾನು ನ. ರತ್ನ' ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ. ನ. ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಂದನ, ಮನೋನಂದನ, ಪ್ರಾಯೋಜಕರು: ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ ಮೈಸೂರು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಪಂಡಿತ್. ಬಸವರಾಜ ರಾಜಗುರು, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ; 12.30ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು ಪಿ. ಎಸ್. ವಸಂತ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಾಲಾಜಿ ಶಂಕರ್–ಗಾಯನ, 4.00 ಮಹಿಳಾರಂಗ –ಹೀಗಿದೆ ನೋಡಿ ನಮ್ ಜೋಡಿ, ವಾಸ್ತು ಶಿಲ್ಪಿ ಮರಿನಾ ಪ್ರಸಾದ್ ಹಾಗೂ ರಂಗಕರ್ಮಿ ಪ್ರಸಾದ್ ಕುಂದೂರು ಅವರೊಂದಿಗೆ ಸಂವಾದ, ಪ್ರಸ್ತುತಿ: ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಡಾ. ಜಯಂತಿ ಪ್ರಸಾದ್ ನೌಟಿಯಾಲ್, 5.45 'ನಾನು ನ. ರತ್ನ' ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ.ನ. ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ, 6.55 ಕೃಷಿರಂಗ–ಸಾವಯವ ಸಂಪದ–ಸಾವಯವ ಕೃಷಿ ಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ–ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರ ಅಭಿವೃದ್ಧಿ ಪಡಿಸಿರುವ ತಳಿ ಹಾಗೂ ತಾಂತ್ರಿಕತೆಗಳನ್ನು ಕುರಿತು ಸಂಸ್ಥೆಯ ಸಹ ಸಂಶೋಧನಾ ನಿರ್ದೇಶಕರಾದ ಡಾ. ಎನ್. ಶಿವಕುಮಾರ್ ಅವರೊಂದಿಗೆ ನೇರ ಫೋನ್ ಇನ್ ಕಾರ್ಯಕ್ರಮ. ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ನಾಟಕ: 'ನಾಗಾನಂದ' ಮೂಲ ಸಂಸ್ಕೃತ: ಶ್ರೀಹರ್ಷ, ಹಿಂದಿ ರೇಡಿಯೋ ರೂಪಾಂತರ: ಸತ್ಯೇಂದ್ರ ಶರತ್, ಕನ್ನಡ ಅನುವಾದ : ಡಾ. ವಿ. ಸೌಭಾಗ್ಯಲಕ್ಷ್ಮಿ, ನಿರ್ಮಾಣ: ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು.

ವಾರಣಾಸಿಯಲ್ಲಿ ಪ್ರಧಾನಿ ಮೋದಿ ಸತತ ಮೂರನೇ ಬಾರಿಗೆ ಗೆಲುವು



ನವದೆಹಲಿ: ಉತ್ತರ ಪ್ರದೇಶದ ವಾರಣಾಸಿ ಲೋಕಸಭಾ ಕ್ಷೇತ್ರದಿಂದ ಪ್ರಧಾನಿ ನರೇಂದ್ರ ಮೋದಿ ಸತತ ಮೂರನೇ ಬಾರಿಗೆ ಗೆಲುವು ಸಾಧಿಸಿದ್ದಾರೆ. ತಮ್ಮ ಸಮೀಪದ ಕಾಂಗ್ರೆಸ್ ಅಭ್ಯರ್ಥಿ ಅಜಯ್ ರೈ ಅವರನ್ನು1.5 ಲಕ್ಷ ಮತಗಳ ಅಂತರದಿಂದ ಸೋಲಿಸಿದ್ದಾರೆ. ಆರಂಭದ ಕೆಲ ಸುತ್ತುಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅಜಯ್ ರೈ ಮುನ್ನಡೆ ಕಾಯ್ದುಕೊಂಡಿದ್ದರು. ಆದರೆ, ತದನಂತರ ಸುತ್ತುಗಳಲ್ಲಿ ಪ್ರಧಾನಿ ಮೋದಿ ಹೆಚ್ಚಿನ ಮತಗಳನ್ನು ಗಳಿಸುವ ಮೂಲಕ ಗೆಲುವಿನ ನಗೆ ಬೀರಿದರು. 2014 ಹಾಗೂ 2019ರ ಲೋಕಸಭಾ ಚುನಾವಣೆಯಲ್ಲಿಯೂ ಈ ಕ್ಷೇತ್ರದಿಂದ ಗೆದ್ದಿದ್ದರು. ಈ ಮೂಲಕ ಹ್ಯಾಟ್ರಿಕ್ ಗೆಲುವನ್ನು ತಮ್ಮದಾಗಿಸಿಕೊಂಡಿದ್ದಾರೆ. ಉತ್ತರ ಪ್ರದೇಶದಲ್ಲಿ ಈ ಬಾರಿ ಕಮಲ್ ಮಾಡುವಲ್ಲಿ ಬಿಜೆಪಿ ಸೋತಿದೆ. ದೇಶದಲ್ಲಿಯೇ ಅತಿ ಹೆಚ್ಚು 80 ಸ್ಥಾನಗಳನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿ ಬಿಜೆಪಿ 32 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದು, ಕಾಂಗ್ರೆಸ್– ಸಮಾಜವಾದಿ ಮೈತ್ರಿಕೂಟ 44 ಕ್ಷೇತ್ರಗಳಲ್ಲಿ ಜಯ ಗಳಿಸಿದೆ.

ಗಾಂಧಿನಗರದಲ್ಲಿ 7 ಲಕ್ಷ ಮತಗಳ ಅಂತರದಿಂದ ಅಮಿತ್ ಶಾ ಗೆಲುವು



ಗಾಂಧಿನಗರ: ಲೋಕಸಭೆ ಚುನಾವಣೆಯ ಫಲಿತಾಂಶ ಅಂತಿಮ ಘಟ್ಟ ತಲುಪಿದ್ದು, ಭಾರತೀಯ ಜನತಾ ಪಕ್ಷದ(ಬಿಜೆಪಿ) ಹಿರಿಯ ನಾಯಕ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗಾಂಧಿನಗರದಲ್ಲಿ 7 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ. ಗಾಂಧಿನಗರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರತಿಸ್ಪರ್ಧಿ ಸೋನಾಲ್ ಪಟೇಲ್ ಅವರ ವಿರುದ್ಧ ಅಮಿತ್ ಶಾ ಗೆಲುವು ಸಾಧಿಸಿದ್ದಾರೆ. ರಾಜ್ಯದ 25 ಲೋಕಸಭಾ ಕ್ಷೇತ್ರಗಳಿಗೆ ಬೆಳಗ್ಗೆ 8 ಗಂಟೆಯಿಂದ ಮತ ಎಣಿಕೆ ಆರಂಭವಾಗಿದ್ದು, ಬಿಜೆಪಿ 23 ರಲ್ಲಿ ಮುನ್ನಡೆ ಕಾಯ್ದುಕೊಂಡಿದ್ದು, ಎರಡು ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಕಾಂಗ್ರೆಸ್ ಒಂದು ಕ್ಷೇತ್ರದಲ್ಲಿ ಮುನ್ನಡೆ ಕಾಯ್ದುಕೊಂಡಿದೆ.

2019ರ ಚುನಾವಣೆಯಲ್ಲಿ ಅಮಿತ್ ಶಾ 5.57 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಈ ಹಿಂದೆ ಬಿಜೆಪಿಯ ಪ್ರಮುಖ ಲಾಲ್ ಕೃಷ್ಣ ಅಡ್ವಾಣಿ ಅವರು ಗಾಂಧಿನಗರ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು.

ಶಾಂತವಾಗಿದ್ದುಕೊಂಡೇ ಸಾಧನೆ ಮಾಡಿದ ಶ್ರೇಯಸ್

ತಾತ-ತಾಯಿ, ತಮ್ಮ ಸೋಲಿಗೆ ಸೇಡು ತೀರಿಸಿಕೊಂಡ ಕೈ ಯುವ ನಾಯಕ



ಹಾಸನ, ಜೂ.4– ತೀವ್ರ ಜಿದ್ದಾಜಿದ್ದಿನಿಂದ ಕೂಡಿದ್ದ ಹಾಸನ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಎಂ.ಪಟೇಲ್ ಭರ್ಜರಿ ಗೆಲುವು ಸಾಧಿಸುವ ಮೂಲಕ ಹೊಸ ದಾಖಲೆ ನಿರ್ಮಾಣ ಮಾಡಿದ್ದಾರೆ.

1999ರ ನಂತರ ಹಾಸನದಲ್ಲಿ ಕಾಂಗ್ರೆಸ್ ಗೆಲ್ಲಿಸಿದ ಕೀರ್ತಿ ಶ್ರೇಯಸ್ ಅವರ ಪಾಲಾಗಿದೆ ಅಷ್ಟೇ ಅಲ್ಲ ಹಿಂದಿನ ಚುನಾವಣೆಗಳಲ್ಲಿ ತಮ್ಮ ತಾತ ಜಿ.ಪುಟ್ಟಸ್ವಾಮಿಗೌಡ, ತಾಯಿ ಅನುಪಮಾ ಹಾಗೂ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಹೊಳೆನರಸೀಪುರದಿಂದ ತಮ್ಮನ್ನು ಸೋಲಿಸಿದ್ದ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಪುತ್ರನಿಗೆ ಸೋಲಿನ ರುಚಿ ತೋರಿಸುವ ಮೂಲಕ ಹಲವು ಸೋಲುಗಳಿಗೆ ಸೇಡು ತೀರಿಸಿಕೊಂಡಿದ್ದಾರೆ.


ಮತ್ತೊಂದು ಗಮನಿಸಬೇಕಾದ ಸಂಗತಿ ಎಂದರೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ವಿಧಾನಸಭೆ ಮತ್ತು 1999ರ ಲೋಕಸಭೆ ಚುನಾವಣೆಯಲ್ಲಿ ಪುಟ್ಟಸ್ವಾಮಿಗೌಡರು ಸೋಲಿಸಿದ್ದರು. ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಸದರು ಗೆದ್ದಿದ್ದು 1999 ಕೊನೆಯಾಗಿತ್ತು. ಇದೇ ಮೊದಲ ಬಾರಿಗೆ ದೊಡ್ಡವರ ಮೊಮ್ಮಕ್ಕಳ ನಡುವಿನ ಕಾಳಗದಲ್ಲಿ ಶ್ರೇಯಸ್ ಪಟೇಲ್ ಗೆದ್ದಿ ಬಿಗಿದ್ದಾರೆ.

ರಾಜಕೀಯ ಹಿನ್ನೆಲೆ: ಶ್ರೇಯಸ್ ಪಟೇಲ್ ಈ ಮೊದಲು (2016) ಚನ್ನರಾಯಪಟ್ಟಣ ತಾಲೂಕು ದಂಡಿಗನಹಳ್ಳಿ ಕ್ಷೇತ್ರದಿಂದ ಸ್ಪರ್ಧೆ ಮಾಡಿ ಜಿಪಂ ಸದಸ್ಯರಾಗಿದ್ದರು. ನಂತರ 2023ರ ವಿಧಾನಸಭೆ ಚುನಾವಣೆಯಲ್ಲಿ ಹೊಳೆನರಸೀಪುರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲು ಕಂಡಿದ್ದರು. ಇದೀಗ ಚೊಚ್ಚಲ ಬಾರಿಗೆ ಲೋಕಸಭೆ ಚುನಾವಣೆಯಲ್ಲೂ ಅದೃಷ್ಟ ಪರೀಕ್ಷೆಗಿಳಿದು ಪಾಸಾಗಿದ್ದಾರೆ.

ಶ್ರೇಯಸ್ ನಡೆದು ಬಂದ ದಾರಿ: ಜಿ.ಪುಟ್ಟಸ್ವಾಮಿಗೌಡರ ಮೊಮ್ಮಗ ಶ್ರೇಯಸ್, 2006ರಲ್ಲಿ ತಾತನ ನಿಧನದ ನಂತರ 2008 ಮತ್ತು 2013 ವಿಧಾನಸಭೆ ಚುನಾವಣೆಯಲ್ಲಿ ಹೊಳೆನರಸೀಪುರ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ತಾಯಿ ಅನುಪಮಾ ಮಹೇಶ್ ಅವರೊಂದಿಗೆ ಓಡಾಡಿದ್ದರು.

2016 ರಲ್ಲಿ ಚನ್ನರಾಯಪಟ್ಟಣ ತಾಲೂಕು ದಂಡಿಗನಹಳ್ಳಿ ಜಿಪಂ ಕ್ಷೇತ್ರದಿಂದ ಸ್ಪರ್ಧಿಸಿ ಮೊದಲ ಬಾರಿಗೆ ಗೆದ್ದಿದ್ದರು. 2023 ರಲ್ಲಿ ಪ್ರಥಮ ಬಾರಿಗೆ ಅದೇ ಹೊಳೆನರಸೀಪುರ ಕ್ಷೇತ್ರದಿಂದ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ವಿರುದ್ಧ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿ ಕೇವಲ 3152 ಮತಗಳ ಅಂತರದಿಂದ ಸೋತಿದ್ದರು. ಇದೀಗ ಪ್ರಥಮ ಬಾರಿಗೆ ಲೋಕಸಭೆ ಪ್ರವೇಶ ಮಾಡುವ ಮೂಲಕ ವಿಶೇಷ ಸಾಧನೆ ಮಾಡಿದ್ದಾರೆ.

ಯದುವೀರ್‌ಗೆ ಅಭಿನಂದನೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮೈಸೂರು–ಕೊಡಗು ಕ್ಷೇತ್ರದ ನೂತನ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಮಾಜಿ ಉಪಮೇಯರ್ ಶೈಲೇಂದ್ರ ಅಭಿನಂದಿಸಿದರು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮತ್ತಿತರರು ಚಿತ್ರದಲ್ಲಿದ್ದಾರೆ.

ಇನ್ನು ಕೆಲವೇ ಗಂಟೆಗಳಲ್ಲಿ ಶಾಸಕ ಪ್ರದೀಪ್ ಈಶ್ವರ್ ರಾಜೀನಾಮೆ?



ಬೆಂಗಳೂರು: ಕರ್ನಾಟಕ ಲೋಕಸಭೆ ಚುನಾವಣೆಯ ಫಲಿತಾಂಶ ಹೊರಬಿದ್ದಿದೆ. 28 ಕ್ಷೇತ್ರಗಳ ಪೈಕಿ ಬಿಜೆಪಿ 17, ಕಾಂಗ್ರೆಸ್ 9 ಮತ್ತು ಜೆಡಿಎಸ್ 2 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. ಈ ಮಧ್ಯೆ ಚಿಕ್ಕಬಳ್ಳಾಪುರದಲ್ಲಿ ಮಾಜಿ ಸಚಿವ ಡಾ. ಕೆ ಸುಧಾಕರ್ ಗೆದ್ದರೆ ತಾವು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಪ್ರದೀಪ್ ಈಶ್ವರ್ ಮಾಧ್ಯಮಗಳ ಮುಂದೆ ಮಾತನಾಡಿದ್ದರು.

ಚಿಕ್ಕಬಳ್ಳಾಪುರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಖಚಿತವಾಗಿ ಗೆಲ್ಲುತ್ತಾರೆ. ನಮ್ಮ ಅಭ್ಯರ್ಥಿಗಿಂತ ಡಾ. ಸುಧಾಕರ್ 1 ಮತ ಹೆಚ್ಚಿಗೆ ಪಡೆದರೆ ನಾನು ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಘಂಟಾಘೋಷವಾಗಿ ಹೇಳಿದ್ದರು.

ಇದೀಗ ಚಿಕ್ಕಬಳ್ಳಾಪುರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಡಾ. ಕೆ ಸುಧಾಕರ್ ಅವರು 8,19,588 ಮತಗಳನ್ನು ಪಡೆದು 1,62,099 ಮತಗಳ ಅಂತರದಿಂದ ಬೃಹತ್ ಗೆಲುವು ಸಾಧಿಸಿದ್ದಾರೆ. ಇನ್ನು ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ 6,57,489 ಮತಗಳನ್ನು ಪಡೆದು ಸೋಲು ಕಂಡಿದ್ದಾರೆ.

ನೀಟ್ ಮೊದಲ ರ್‍ಯಾಂಕ್‌ನ 100 ವಿದ್ಯಾರ್ಥಿಗಳಲ್ಲಿ ಕರ್ನಾಟಕದ ಆರು ಮಂದಿ ಟಾಪರ್ಸ್

ಬೆಂಗಳೂರು, ಜೂನ್ 4: ಕಳೆದ ತಿಂಗಳು ಮೇ 5ರಂದು ನಡೆದಿದ್ದ ನೀಟ್ ಪರೀಕ್ಷೆಯ (NEET UG 2024) ಫಲಿತಾಂಶ ಇಂದು ಪ್ರಕಟವಾಗಿದೆ. ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಡೆಸಿದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ ದೇಶದಲ್ಲಿ ಮೊದಲ ರ್‍ಯಾಂಕ್ ಪಡೆದ ಟಾಪ್ 100 ವಿದ್ಯಾರ್ಥಿಗಳ ಪೈಕಿ 6 ವಿದ್ಯಾರ್ಥಿಗಳು ಮೊದಲ ಸ್ಥಾನವನ್ನು ಪಡೆದಿದ್ದಾರೆ.

ಕರ್ನಾಟಕದ ವಿ.ಕಲ್ಯಾಣ್, ಶ್ಯಾಮ್ ಶ್ರೇಯಸ್ ಜೋಸೆಫ್, ಅರ್ಜುನ್ ಕಿಶೋರ್, ಪದ್ಮನಾಭ್ ಮೆನನ್, ಪ್ರಜ್ಞಾ ಪಿ.ಶೆಟ್ಟಿ, ಋಷಿ ಮಗನೂರ್ ಎಂಬ ವಿದ್ಯಾರ್ಥಿಗಳು ಶೇ.99.98 ಅಂಕಗಳನ್ನು ಗಳಿಸುವ ಮೂಲಕ ಮೊದಲ ರ್‍ಯಾಂಕ್ ಪಡೆದಿದ್ದಾರೆ.

ದೇಶದಾದ್ಯಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗಾಗಿ ನಡೆದಿದ್ದ ನೀಟ್ ಪರೀಕ್ಷೆಯ ಫಲಿತಾಂಶವು ಪ್ರಕಟಗೊಂಡಿದ್ದು, ಉತ್ತರ ಪತ್ರಿಕೆಗಳ ಮರುಪರಿಶೀಲನೆ ಅಥವಾ ಮರುಮೌಲ್ಯಮಾಪನಕ್ಕೆ ಅವಕಾಶವಿಲ್ಲ ಎನ್ನಲಾಗಿದೆ. ಇನ್ನೂ ನೀಟ್ ಪರೀಕ್ಷೆಯ ತಾತ್ಕಾಲಿಕ ಕೀ ಉತ್ತರಗಳನ್ನು ಮೇ 29 ರಂದು ಬಿಡುಗಡೆ ಮಾಡಲಾಗಿತ್ತು. ಇದಕ್ಕೆ ಆಕ್ಷೇಪಣೆ ಸಲ್ಲಿಸಿದ ಬಳಿಕ ಅಂತಿಮ ಕೀ ಉತ್ತರಗಳನ್ನು ಜೂನ್ 3 ರಂದು ಬಿಡುಗಡೆ ಮಾಡಲಾಗಿತ್ತು. ಈಗಾಗಲೇ ಬಿಡುಗಡೆಯಾಗಿರುವ ಅಂತಿಮ ಕೀ ಉತ್ತರಗಳ ಆಧಾರದ ಮೇಲೆ ನೀಟ್ ಯುಜಿ 2024ರ ಫಲಿತಾಂಶವನ್ನು ಪ್ರಕಟಿಸಲಾಗಿದೆ.

ಫಲಿತಾಂಶ ಪಡೆಯುವುದ್ಹೇಗೆ

ಅಧಿಕೃತ ವೆಬ್‌ಸೈಟ್ exams.nta.ac.in/NEETಗೆ ಭೇಟಿ ನೀಡಿ, ಮುಖಪುಟದಲ್ಲಿ ಲಭ್ಯವಿರುವ NEET UG ಫಲಿತಾಂಶ 2024 ಲಿಂಕ್ ಅನ್ನು ಕ್ಲಿಕ್ ಮಾಡಿ, ಲಾಗಿನ್ ವಿವರಗಳನ್ನು ನಮೂದಿಸಿ ಕ್ಲಿಕ್ ಮಾಡಿ, ನಿಮ್ಮ ಫಲಿತಾಂಶ ಪರದೆಯ ಮೇಲೆ ಕಾಣಬಹುದು, ನಂತರ ಫಲಿತಾಂಶವನ್ನು ಪರಿಶೀಲಿಸಿ ಮತ್ತು ಅದನ್ನು ಡೌನ್‌ಲೋಡ್ ಮಾಡಿಕೊಳ್ಳಿ

ದೇಶಾದ್ಯಂತ 571 ನಗರಗಳಲ್ಲಿ ಹಾಗೂ ಹೊರಗಿನ 14 ನಗರಗಳು ಸೇರಿದಂತೆ 4750 ವಿವಿಧ ಕೇಂದ್ರಗಳಲ್ಲಿ 05 ಮೇ 2024 ರಂದು ನೀಟ್ ಯುಜಿ ಪರೀಕ್ಷೆಯನ್ನು ನಡೆಸಲಾಗಿತ್ತು ಪರೀಕ್ಷೆಯನ್ನು 13 ಭಾಷೆಗಳಲ್ಲಿ (ಅಸ್ಸಾಮಿ, ಬಂಗಾಳಿ, ಇಂಗ್ಲಿಷ್, ಗುಜರಾತಿ, ಹಿಂದಿ, ಕನ್ನಡ, ಮಲಯಾಳಂ, ಮರಾಠಿ, ಒಡಿಯಾ, ಪಂಜಾಬಿ, ತಮಿಳು, ತೆಲುಗು, ಮತ್ತು ಉರ್ದು) ನಡೆಸಲಾಗಿತ್ತು. ನೀಟ್ ಪರೀಕ್ಷೆಗೆ 24,06,079 ಅಭ್ಯರ್ಥಿಗಳ ನೋಂದಾಯಿಸಿಕೊಂಡಿದ್ದರು. ಅದರಲ್ಲಿ 23,33,297 ಪರೀಕ್ಷೆ ಹಾಜರಾಗಿದ್ದು, 72782 ಗೈರು ಹಾಜರಾಗಿದ್ದರು. ಇದರಲ್ಲಿ ಬಾಲಕರು 10,29,154 ಹಾಗೂ ಬಾಲಕಿಯರು 13,76,831, ತೃತೀಯ ಲಿಂಗಿಗಳು 18 ಮಂದಿ ಪರೀಕ್ಷೆಯನ್ನು ಬರೆದಿದ್ದರು.

ನೀಟ್‌ನಲ್ಲಿ ಮೈಸೂರು ವೈದ್ಯ ದಂಪತಿ ಪುತ್ರ ಅರ್ಜುನ್ ಕಿಶೋರ್ ಪ್ರಥಮ ರ್‍ಯಾಂಕ್



ಮೈಸೂರು, ಜೂ.4(ಎಸ್‌ಬಿಡಿ)– ವೈದ್ಯಕೀಯ ಮತ್ತು ದಂತವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಸುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ(ನೀಟ್–ಯುಜಿ)ಯಲ್ಲಿ ಮೈಸೂರಿನ ವೈದ್ಯ ದಂಪತಿ ಪುತ್ರ ಪ್ರಥಮ ರ್‍ಯಾಂಕ್ ಪಡೆಯುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾನೆ.

ಮಂಗಳವಾರ ನೀಟ್ ಫಲಿತಾಂಶ ಪ್ರಕಟಗೊಂಡಿದ್ದು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಔಷಧಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕ ಡಾ.ಎಂ.ಎಸ್.ಕಿಶೋರ್ ಹಾಗೂ ಪ್ರಸೂತಿ ತಜ್ಞೆ ಡಾ.ರಶ್ಮಿ ದಂಪತಿ ಪುತ್ರ ಅರ್ಜುನ್ ಕಿಶೋರ್ 720ಕ್ಕೆ 720 ಅಂಕ(99.9971285 ಪರ್ಸೆಂಟೇಜ್)ಗಳಿಸಿ, ಅಖಿಲ ಭಾರತ ಮಟ್ಟದಲ್ಲಿ ಪ್ರಥಮ ರ್‍ಯಾಂಕ್ ಪಡೆದಿದ್ದಾನೆ. ಅರ್ಜುನ್ ಸೇರಿದಂತೆ ದೇಶದ 89 ವಿದ್ಯಾರ್ಥಿಗಳು ಪ್ರಥಮ ರ್‍ಯಾಂಕ್ ಪಡೆದಿದ್ದಾರೆ.

ಡಾ.ಕಿಶೋರ್ ಹಾಗೂ ಡಾ.ರಶ್ಮಿ ದಂಪತಿ ಮೈಸೂರಿನ ಗೋಕುಲಂನಲ್ಲಿ ನೆಲೆಸಿದ್ದು, ಇವರ ಪುತ್ರ ಅರ್ಜುನ್ ಕಿಶೋರ್ ಎಸ್‌ಎಸ್‌ಎಲ್‌ಸಿ ವರೆಗೆ ವಿಜಯನಗರದ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಮಾಡಿ, ಪಿಯುಸಿಗೆ ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜಿಗೆ ಸೇರಿದ್ದರು. ಆ ಸಂಸ್ಥೆಯಲ್ಲೇ ನೀಟ್‌ಗೂ ತರಬೇತಿ ಪಡೆದಿದ್ದರು. ದ್ವಿತೀಯ ಪಿಯುಸಿಯಲ್ಲಿ ಶೇ.96ರಷ್ಟು ಅಂಕ ಗಳಿಸಿದ್ದ ಅರ್ಜುನ್, ನೀಟ್‌ನಲ್ಲಿ ಉತ್ತಮ ಸಾಧನೆ ಮಾಡಿದ್ದಾನೆ.

ಈ ಬಗ್ಗೆ ಸಂತಸ ವ್ಯಕ್ತಪಡಿಸಿದ ಅರ್ಜುನ್ ಕಿಶೋರ್, ನೀಟ್‌ನಲ್ಲಿ ಪ್ರಥಮ ರ್‍ಯಾಂಕ್ ಬಂದಿರುವುದು ಖುಷಿಯಾಗಿದೆ. ನವದೆಹಲಿಯ ಏಮ್ಸ್‌ನಲ್ಲಿ ಎಂಬಿಬಿಎಸ್ ಕೋರ್ಸ್ ಮಾಡಬೇಕೆಂದುಕೊಂಡಿದ್ದೇನೆ. ಕಾಲೇಜಿನಲ್ಲಿ ಸಂಪೂರ್ಣ ಸಹಕಾರ ಸಿಕ್ಕಿತು. ಉಪನ್ಯಾಸಕರ ಮಾರ್ಗದರ್ಶನದಿಂದ ಈ ಸಾಧನೆ ಮಾಡಲು ಸಾಧ್ಯವಾಯಿತು. ಬಾಲ್ಯದಿಂದಲೂ ವೈದ್ಯನಾಗಬೇಕೆಂಬ ಆಸೆಯಿರುವುದರಿಂದ ಹೆಚ್ಚಿನ ಪರಿಶ್ರಮದಿಂದ ಓದಲು ಸಾಧ್ಯವಾಯಿತು. ಮುಂದೆ ಸರ್ಜನ್ ಆಗಬೇಕೆಂಬ ಗುರಿ ಇದೆ ಎಂದರು.

ಕುಮಾರಸ್ವಾಮಿ ಜನನಾಯಕ ಎಂಬುದನ್ನು ಲೋಕಸಭಾ ಫಲಿತಾಂಶ ಸಾಬೀತು ಮಾಡಿದೆ



ಮಂಡ್ಯದ ನೂತನ ಸಂಸದ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿನಂದಿಸಿದರು.

ಮೈಸೂರು, ಜೂ.4– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಜನನಾಯಕ ಎಂಬುದು ಲೋಕಸಭಾ ಚುನಾವಣೆ ಫಲಿತಾಂಶದೊಂದಿಗೆ ಮತ್ತೊಮ್ಮೆ ಸಾಬೀತಾಗಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಬಣ್ಣಿಸಿದ್ದಾರೆ.

ಮಂಡ್ಯ ಲೋಕಸಭಾ ಕ್ಷೇತ್ರದ ಮತದಾರರು ನಿಜವಾದ ಜನನಾಯಕನನ್ನು ಸಂಸದರಾಗಿ ಆಯ್ಕೆ ಮಾಡಿದ್ದಾರೆ. ಇದು ಸತ್ಯಕ್ಕೆ ಸಂದ ಜಯವಾಗಿದೆ. ಕುಮಾರಸ್ವಾಮಿ ಅವರಿಗೆ ಸದಾ ಜನ ಬೆಂಬಲ ಇರುತ್ತದೆ ಎಂಬುದು ಸಾಬೀತಾಗಿದೆ. ಇವರನ್ನು ಸೋಲಿಸಲು ಕಾಣದ ಕೈಗಳು ಕುತಂತ್ರ ನಡೆಸಿದ್ದವು. ಅಂತಹವರಿಗೆ ಕಾಂಗ್ರೆಸ್ ಸರ್ಕಾರ ಬೆಂಬಲವಾಗಿತ್ತು. ಆದರೆ ಜನರ ಆಶೀರ್ವಾದದ ಮುಂದೆ ಯಾವ ಮಂತ್ರ–ತಂತ್ರ, ಕುತಂತ್ರವೂ ಫಲ ನೀಡಿಲ್ಲ. ಜನರ ಮನಸ್ಸಿನಲ್ಲಿ ಹೆಚ್‌ಡಿಕೆ ಗಳಿಸಿರುವ ಶಾಶ್ವತ ಸ್ಥಾನವನ್ನು ಯಾರಿಂದಲೂ ಅಳಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಕರ್ನಾಟಕದ ಆಸ್ತಿ. ಇವರ ರಾಜಕೀಯ ಜೀವನಕ್ಕೆ ಕಪ್ಪು ಚುಕ್ಕೆ ಬಳಿಯಬೇಕೆಂದು ಹಲವು ಷಡ್ಯಂತ್ರ ನಡೆದವು. ಆದರೆ ಜನರು ಅದ್ಯಾವುದಕ್ಕೂ ಸೊಪ್ಪು ಹಾಕದೆ ಮತ್ತೊಮ್ಮೆ ಗೌಡರ ಕುಟುಂಬಕ್ಕೆ ಆಶೀರ್ವದಿಸಿದ್ದಾರೆ. ಮಂಡ್ಯ ಜೆಡಿಎಸ್‌ನ ಭದ್ರಕೋಟೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಅಲ್ಲದೆ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಒಗ್ಗಟ್ಟಿನಿಂದ ಶ್ರಮಿಸಿದ್ದಾರೆ. ಮಾಜಿ ಸಚಿವ ಸಾ.ರಾ.ಮಹೇಶ್ ಅವರೂ ಹಗಲಿರುಳು ಶ್ರಮಿಸಿದ್ದಾರೆ. ಈ ಗೆಲುವು ಹಲವು ಹೊಸತಿಗೆ ನಾಂದಿಯಾಗಿದೆ. ಮುಖ್ಯಮಂತ್ರಿಯಾಗಿ ಜನರ ಮನೆ ಬಾಗಿಲಿಗೆ ಹೋಗಿ ಸೇವೆ ಮಾಡಿದ ಕುಮಾರಸ್ವಾಮಿ ಅವರು ಮೋದಿ ಅವರ ಸಚಿವ ಸಂಪುಟದಲ್ಲಿ ಸ್ಥಾನ ಪಡೆಯುವುದು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ಮೋದಿ ವಿರುದ್ಧ ಜನಾದೇಶ: ಖರ್ಗೆ



ನವದೆಹಲಿ: ಲೋಕಸಭೆ ಚುನಾವಣೆ ಫಲಿತಾಂಶ ಭಾರತದ ಜನತೆಯ ಗೆಲುವಾಗಿದ್ದು, ತಮ್ಮ ಹೆಸರಲ್ಲಿ ಬಿಜೆಪಿಗೆ ಮತ ಕೇಳಿದ್ದ ಪ್ರಧಾನಿ ನರೇಂದ್ರ ಮೋದಿ ವಿರುದ್ಧದ ಜನಾದೇಶವಾಗಿದೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ಹೇಳಿದ್ದಾರೆ.

ಎಐಸಿಸಿ ಕಚೇರಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದು ಪ್ರಕಟವಾಗಿರುವ ಚುನಾವಣಾ ಫಲಿತಾಂಶ ಸಾರ್ವಜನಿಕರ ಫಲಿತಾಂಶವಾಗಿದ್ದು, ಪ್ರಜಾಪ್ರಭುತ್ವದ ಗೆಲುವು ಆಗಿದೆ. ಇದು ಪ್ರಧಾನಿ ಮೋದಿ ಮತ್ತು ಜನರ ನಡುವಿನ ಯುದ್ಧ ಎಂದು ನಾವು ಹೇಳುತ್ತಿದ್ದೆವು ಎಂದರು.

ಜನಾದೇಶವನ್ನು ಅತ್ಯಂತ ಗೌರವಯುತದಿಂದ ಸ್ವೀಕರಿಸುತ್ತೇವೆ. ಈ ಬಾರಿ ಜನರು ಯಾವುದೇ ಒಂದು ಪಕ್ಷಕ್ಕೆ ಸಂಪೂರ್ಣ ಬಹುಮತ ನೀಡಿಲ್ಲ. ಅದರಲ್ಲೂ ಬಿಜೆಪಿ 'ಒಬ್ಬ ವ್ಯಕ್ತಿ ಒಂದು ಮುಖ' ಎಂಬ ಆಧಾರದ ಮೇಲೆ ಮತ ಕೇಳಿತ್ತು. ಈ ಚುನಾವಣಾ ಫಲಿತಾಂಶ ಅವರ ರಾಜಕೀಯ ಮತ್ತು ನೈತಿಕತೆಯ ಸೋಲು ಎಂದು ಹೇಳಿದರು.

ಇದೇ ವೇಳೆ ಮಾತನಾಡಿದ ರಾಹುಲ್ ಗಾಂಧಿ, ಉತ್ತರ ಪ್ರದೇಶದ ಜನತೆ ದೇಶದ ರಾಜಕೀಯ ಮತ್ತು ಸಂವಿಧಾನ ಅಪಾಯದಲ್ಲಿದೆ ಎಂಬುದನ್ನು ಅರ್ಥ ಮಾಡಿಕೊಂಡಿದ್ದಾರೆ. ಅವರು ಸಂವಿಧಾನವನ್ನು ರಕ್ಷಿಸಿದ್ದಾರೆ.ಅವರ ಕಾಂಗ್ರೆಸ್ ಮತ್ತು ವಿಪಕ್ಷಗಳ ಮೈತ್ರಿಕೂಟ ಬೆಂಬಲಿಸಿದ್ದಕ್ಕಾಗಿ ಅವರಿಗೆ ಧನ್ಯವಾದ ಸಲ್ಲಿಸುವುದಾಗಿ ತಿಳಿಸಿದರು.

ಕಾಂಗ್ರೆಸ್ ಮತ್ತು ಇಂಡಿಯಾ ಮೈತ್ರಿಕೂಟ 18 ನೇ ಲೋಕಸಭೆ ಚುನಾವಣೆಯಲ್ಲಿ 'ಅತ್ಯಂತ ಪ್ರತಿಕೂಲ ವಾತಾವರಣದಲ್ಲಿ ಹೋರಾಡಿತು. ಸರ್ಕಾರಿ ಯಂತ್ರ ಪ್ರತಿ ಹಂತದಲ್ಲೂ ಅಡೆತಡೆಗಳನ್ನು ಸೃಷ್ಟಿಸಿತ್ತು. ಬ್ಯಾಂಕ್ ಖಾತೆ ಸ್ಥಗಿತದಿಂದ ಹಿಡಿದು ಅನೇಕ ವಿಪಕ್ಷ ನಾಯಕರ ವಿರುದ್ಧ ದಾಳಿ ನಡೆಸಲಾಗಿತ್ತು. ಆರಂಭದಿಂದ ಅಂತ್ಯದವರೆಗೂ ಕಾಂಗ್ರೆಸ್ ಪ್ರಚಾರ ಸಕಾರಾತ್ಮಕ ವಾಗಿತ್ತು. ಹಣದುಬ್ಬರ, ನಿರುದ್ಯೋಗ, ಕೃಷಿ ಬಿಕ್ಕಟ್ಟು ಮತ್ತು ಸಾಂವಿಧಾನಿಕ ಸಂಸ್ಥೆಗಳ ಮೇಲಿನ ದಾಳಿಯ ಸಮಸ್ಯೆ ಗಳನ್ನು ಪ್ರಸ್ತಾಪಿಸಿದ್ದೇವು ಎಂದ ಖರ್ಗೆ, ಪ್ರಧಾನಿ ಮೋದಿ ನಡೆಸಿದ ಪ್ರಚಾರ ಇತಿಹಾಸದಲ್ಲಿ ದೀರ್ಘಕಾಲ ನೆನಪಿನಲ್ಲಿ ಉಳಿಯುತ್ತದೆ ಎಂದು ಹೇಳಿದರು.

ಕೇರಳದಲ್ಲಿ ಕೊನೆಗೂ ಖಾತೆ ತೆರೆದ ಬಿಜೆಪಿ; ತ್ರಿಶೂರ್‌ನಲ್ಲಿ ಸುರೇಶ್ ಗೋಪಿ ಭರ್ಜರಿ ಜಯ!



ತಿರುವನಂತಪುರಂ: ಕೊನೆಗೂ ಕೇರಳದಲ್ಲಿ ಖಾತೆ ತೆರೆಯುವ ಬಿಜೆಪಿ ಕನಸು ನನಸಾಗಿದ್ದು, ತ್ರಿಶೂರ್ ಲೋಕಸಭಾ ಕ್ಷೇತ್ರದಲ್ಲಿ ಸುರೇಶ್ ಗೋಪಿ ಭರ್ಜರಿ ಗೆಲುವು ಸಾಧಿಸಿದ್ದಾರೆ. ಕೇರಳದಲ್ಲಿ ಮೊದಲ ಬಾರಿಗೆ ಖಾತೆ ತೆರೆದಿದ್ದು, ತ್ರಿಶೂರ್‌ನಲ್ಲಿ ನಟ, ಬಿಜೆಪಿ ಅಭ್ಯರ್ಥಿ ಸುರೇಶ್ ಗೋಪಿ ಜಯ ಗಳಿಸಿದ್ದಾರೆ. ಸುರೇಶ್ ಗೋಪಿ ಕಾಂಗ್ರೆಸ್‌ನ ಕೆ. ಮುರಳೀಧರನ್ ಮತ್ತು ಸಿಪಿಐಯ ವಿ.ಎಸ್. ಸುನೀಲ್ ಕುಮಾರ್ ಅವರನ್ನು ಸೋಲಿಸಿ ಐತಿಹಾಸಿಕ ಸಾಧನೆ ಮಾಡಿದ್ದಾರೆ ಸುರೇಶ್ ಗೋಪಿ ಬರೋಬ್ಬರಿ 69 ಸಾವಿರಕ್ಕೂ ಅಧಿಕ ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದು, ಇದು ಕೇರಳದಲ್ಲಿ ಬಿಜೆಪಿಯ ಮೊಟ್ಟ ಮೊದಲ ಗೆಲುವಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಮುರಳೀಧರನ್ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ.

ವಿಪಕ್ಷಗಳು ಕ್ಷುಲ್ಲಕವಾಗಿ ಕಂಡಿದ್ದವು; ಎನ್‌ಡಿಎ ಬಿಟ್ಟು ಎಲ್ಲೂ ಹೋಗಲ್ಲ



ಪಾಟ್ನಾ: ಕೇಂದ್ರದಲ್ಲಿ ಸರ್ಕಾರ ರಚನೆಗೆ ಇಂಡಿಯಾ ಒಕ್ಕೂಟದ ನಾಯಕರು ಬಿಹಾರ ಮುಖ್ಯಮಂತ್ರಿ ಹಾಗೂ ಜೆಡಿಯು ಪಕ್ಷದ ಮುಖ್ಯಸ್ಥ ನಿತೀಶ್ ಕುಮಾರ್ ಅವರನ್ನು ಸಂಪರ್ಕಿಸಲು ಯತ್ನಿಸುತ್ತಿರುವಂತೆಯೇ ಇತ್ತ ತಾವು ಎನ್‌ಡಿಎ ಮೈತ್ರಿಕೂಟ ಬಿಟ್ಟು ಎಲ್ಲೂ ಹೋಗಲ್ಲ ಎಂದು ಜೆಡಿಯು ಸ್ಪಷ್ಟಪಡಿಸಿದೆ.

ಹಾಲಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಬಾರದ ಹಿನ್ನೆಲೆಯಲ್ಲಿ ಇದೀಗ ಆ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯಲು ಮಿತ್ರಪಕ್ಷಗಳ ಮೇಲೆ ಅವಲಂಬಿತವಾಗಬೇಕಾದ ಅನಿವಾರ್ಯತೆ ಎದುರಾಗಿರುವಂತೆಯೇ ಬಿಹಾರದ ಜೆಡಿಯು ಪಕ್ಷದ ನಿತೀಶ್ ಕುಮಾರ್ ಮತ್ತು ಆಂಧ್ರ ಪ್ರದೇಶದ ತೆಲುಗುದೇಶಂ ಪಕ್ಷದ ಚಂದ್ರಬಾಬು ನಾಯ್ಡು ಇದೀಗ ಕಿಂಗ್ ಮೇಕರ್‌ಗಳಾಗಿ ಪರಿವರ್ತನೆಯಾಗಿದ್ದಾರೆ.

ಲೋಕಸಭೆಗೆ 272 ಸ್ಥಾನಗಳು ಸರಳ ಬಹುಮತವಾಗಿದ್ದು ಎನ್‌ಡಿಎ ಮೈತ್ರಿಕೂಟ 296 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ಇನ್ನು 228 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿರುವ ಇಂಡಿಯಾ ಮೈತ್ರಿಕೂಟಕ್ಕೆ ಸರಳ ಬಹುಮತಕ್ಕೆ ಇನ್ನು 44 ಸ್ಥಾನಗಳು ಬೇಕಿರುವುದರಿಂದ ಸ್ವತಂತ್ರವಾಗಿ ನಿಂತು ಗೆದ್ದಿರುವ ಅಭ್ಯರ್ಥಿಗಳನ್ನು ಹಾಗೂ ಎನ್‌ಡಿಎ ಮೈತ್ರಿಕೂಟದಲ್ಲಿರುವ ಅಭ್ಯರ್ಥಿಗಳನ್ನು ತಮ್ಮತ್ತ ಸೆಳೆಯಲು ಕಸರತ್ತು ನಡೆಸುತ್ತಿದೆ.

ಲೋಕಸಭೆ ಚುನಾವಣೆಯಲ್ಲಿ ಆಂಧ್ರ ಪ್ರದೇಶದಲ್ಲಿ ಟಿಡಿಪಿ 16 ಸ್ಥಾನ ಹೊಂದಿದ್ದರೆ ಬಿಹಾರದಲ್ಲಿ ಜೆಡಿಯು 14 ಸ್ಥಾನಗಳಲ್ಲಿ ಮುನ್ನಡೆ ಕಾಯ್ದುಕೊಂಡಿದೆ. ಎನ್‌ಡಿಎ ಮೈತ್ರಿಕೂಟದಲ್ಲಿ ಈ ಎರಡು ಪಕ್ಷಗಳೇ ಪ್ರಮುಖ ಪಕ್ಷವಾಗಿದೆ.

ಈ ಹಿನ್ನೆಲೆಯಲ್ಲಿ ಚಂದ್ರಬಾಬು ನಾಯ್ಡು ಮತ್ತು ನಿತೀಶ್ ಕುಮಾರ್‌ರನ್ನು ತನ್ನತ್ತ ಸೆಳೆಯಲು INDIA ಮೈತ್ರಿಕೂಟ ಯತ್ನಿಸುತ್ತಿದೆ. ಹೀಗಿರುವಾಗಲೇ ಅತ್ತ ಜೆಡಿಯು ತಾನು ತನ್ನನಿರ್ಧಾರಕ್ಕೆ ಬದ್ಧವಾಗಿದ್ದು, ಎನ್ ಡಿಎ ಮೈತ್ರಿಕೂಟ ಬಿಟ್ಟು ಎಲ್ಲೂ ಹೋಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ವಿಪಕ್ಷಗಳು ಕ್ಷುಲ್ಲಕವಾಗಿ ಕಂಡಿದ್ದವು: ಈ ಬಗ್ಗೆ ಮಾತನಾಡಿರುವ ಜೆಡಿಯು ವಕ್ತಾರ ಕೆ.ಸಿ. ತ್ಯಾಗಿ, ನಮ್ಮ ನಾಯಕರು ಯಾವುದೇ ನಿರ್ಧಾರ ತೆಗೆದುಕೊಂಡರೂ ನಾವು ಅವರ ನಡೆಯನ್ನು ಅನುಸರಿಸುತ್ತೇವೆ ಮತ್ತು ಗೌರವಿಸುತ್ತೇವೆ. ನಿತೀಶ್ ಕುಮಾರ್ ಅವರು ಬಿಹಾರದ ಜನರಿಗಾಗಿ ಯಾವಾಗಲೂ ಯೋಚಿಸುತ್ತಾರೆ ಮತ್ತು ಅವರ ನಿರ್ಧಾರವು ಸರ್ವೋಚ್ಚವಾಗಿರುತ್ತದೆ.

ವಿಪಕ್ಷಗಳು ಜೆಡಿಯು ಪಕ್ಷವನ್ನು ಕ್ಷುಲ್ಲಕವಾಗಿ ಕಂಡಿದ್ದವು. ಅಂತೆಯೇ ನಾವು ನಮ್ಮ ಹಿಂದಿನ ನಿಲುವನ್ನು ಮುಂದುವರಿಸುತ್ತೇವೆ. ನಿತೀಶ್ ಕುಮಾರ್ ನೇತೃತ್ವದಲ್ಲಿ ಜೆಡಿಯು ಮತ್ತೊಮ್ಮೆ ಎನ್‌ಡಿಎಗೆ ತನ್ನ ಬೆಂಬಲವನ್ನು ವ್ಯಕ್ತಪಡಿಸುತ್ತದೆ ನಾವು ಎನ್‌ಡಿಎ ಜೊತೆಗಿದ್ದೇವೆ, ನಾವು NDA ಜೊತೆಗೇ ಮುಂದುವರಿಯುತ್ತೇವೆ ಎಂದು ಹೇಳಿದ್ದಾರೆ.

ಇದೇ ಮಾತನ್ನು ಜೆಡಿಯು ಸಚಿವರಾದ ಮದನ್ ಸಹಾನಿ ಕೂಡ ಹೇಳಿದ್ದು, ನಾವು ಎನ್‌ಡಿಎ ಜೊತೆ ದೃಢವಾಗಿ ಇದ್ದೇವೆ. ಕೇಂದ್ರದಲ್ಲಿ ಸರ್ಕಾರ ರಚನೆ ಮಾಡುತ್ತೇವೆ ಎಂದು ಹೇಳಿದ್ದಾರೆ.

ಇಂದು ದೆಹಲಿಯಲ್ಲಿ ಇಂಡಿಯಾ ನಾಯಕರ ಸಭೆ

ಮುಂಬೈ: ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ ನಿರೀಕ್ಷಿತ ಸ್ಥಾನಗಳಲ್ಲಿ ಗೆಲುವು ಸಾಧಿಸುವಲ್ಲಿ ವಿಫಲವಾಗಿದ್ದು, ಸರ್ಕಾರ ರಚನೆಯಲ್ಲಿ ಜೆಡಿಯು ನಾಯಕ ನಿತೀಶ್‌ಕುಮಾರ್ ಹಾಗೂ ಟಿಡಿಪಿ ಮುಖಂಡ ಚಂದ್ರಬಾಬು ನಾಯ್ಡು ಅವರ ಪಾತ್ರ ಮಹತ್ವದ್ದಾಗಿದೆ. ಈ ಹಿನ್ನೆಲೆಯಲ್ಲಿ ಅವರನ್ನು ಸೆಳೆಯಲು ಬಿಜೆಪಿ ಹಾಗೂ ವಿಪಕ್ಷಗಳ ಮೈತ್ರಿಕೂಟದ ನಾಯಕರು ಮುಂದಾಗಿದ್ದಾರೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಮುಂದಿನ ಕಾರ್ಯತಂತ್ರ ಕುರಿತು ಚರ್ಚಿಸಲು ನಾಳೆ ದೆಹಲಿಯಲ್ಲಿ ಇಂಡಿಯಾ ಬಣ ನಾಯಕರ ಸಭೆ ನಡೆಯಲಿದೆ ಎಂದು ತಿಳಿಸಿದರು. ಅಲ್ಲದೇ, ವಿಪಕ್ಷಗಳ ಕೂಟ ಸರ್ಕಾರ ರಚಿಸುವ ಸಾಧ್ಯತೆಯಿಲ್ಲ. ಮಾಧ್ಯಮಗಳಲ್ಲಿ ಬರುತ್ತಿರುವಂತೆ ನಾನು ಜೆಡಿಯು ನಾಯಕ ನಿತೀಶ್ ಕುಮಾರ್ ಅಥವಾ ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಅವರೊಂದಿಗೆ ಮಾತನಾಡಿಲ್ಲ ಎಂದರು.

ಮಲ್ಲಿಕಾರ್ಜುನ ಖರ್ಗೆ ಮತ್ತು ಸೀತಾರಾಂ ಯೆಚೂರಿ ಅವರೊಂದಿಗೆ ಮಾತನಾಡಿದ್ದೇನೆ. ನಾಳೆ ದೆಹಲಿಯಲ್ಲಿ ಇಂಡಿಯಾ ಮೈತ್ರಿಕೂಟ ಸಭೆ ನಡೆಯುವ ಸಾಧ್ಯತೆಯಿದೆ. ದೆಹಲಿಗೆ ತೆರಳುತ್ತೇನೆ ಎಂದು ಅವರು ಹೇಳಿದರು.

ಮುಂದಿನ ಪ್ರಧಾನಿ ಯಾರಾಗಬಹುದು ಎಂಬ ಪ್ರಶ್ನೆಗೆ ಉತ್ತರಿಸಿದ ಪವಾರ್, ನಾವು ಈ ಬಗ್ಗೆ ಯಾವುದೇ ಚಿಂತನೆ ನಡೆಸಿಲ್ಲ. ಇಂಡಿಯಾ ಮೈತ್ರಿಕೂಟ ಸರ್ಕಾರ ರಚಿಸಬಹುದೇ ಎಂಬ ಬಗ್ಗೆ ಖಚಿತತೆ ಇಲ್ಲ. ನಾವು ನಾಳೆ ಸಭೆ ಸೇರಿ ಮುಂದಿನ ಕ್ರಮದ ಬಗ್ಗೆ ಸರ್ವಾನುಮತದ ನಿರ್ಧಾರ ಕೈಗೊಳ್ಳುತ್ತೇವೆ ಎಂದರು.

ಯದುವೀರ್ ಗೆಲುವು ; ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಅಭಿನಂದನೆ

ಆಡಳಿತ ಪಕ್ಷದ ಅಬ್ಬರದ ಸುಳ್ಳಿನ ನಡುವೆಯೂ ಬಿಜೆಪಿಗೆ ಜನ ಮನ್ನಣೆ ; ನಾಗೇಂದ್ರ



ಮೈಸೂರು,ಜೂ.4(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಭಾರಿ ಅಂತರದಲ್ಲಿ ಗೆಲುವು ಸಾಧಿಸಿದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಬಿಜೆಪಿ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಅಭಿನಂದನೆ ಸಲ್ಲಿಸಿದ್ದಾರೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರವು ಬಿಜೆಪಿ ಭದ್ರಕೋಟೆಯಾಗಿದೆ. ಯದುವೀರ್ ಅವರ ಗೆಲುವು ಕ್ಷೇತ್ರದ ಪ್ರತಿಯೊಬ್ಬ ಮತದಾರರ ಗೆಲುವಾಗಿದೆ ಆಡಳಿತ ಪಕ್ಷದ ಅಬ್ಬರದ ಸುಳ್ಳಿನ ನಡುವೆಯೂ ನರೇಂದ್ರ ಮೋದಿಯವರ ಭ್ರಷ್ಟಾಚಾರ ರಹಿತ ಆಡಳಿತಕ್ಕೆ ಜನರು ಮನ್ನಣೆ ನೀಡಿದ್ದಾರೆ. ಕ್ಷೇತ್ರದ ಮತದಾರರಿಗೆ ನಾವು ಕೃತಜ್ಞತೆ ಸಲ್ಲಿಸುತ್ತೇವೆ ಎಂದು ತಿಳಿಸಿದ್ದಾರೆ.

ಮೈಸೂರು ಹಾಗೂ ಈ ನಾಡಿಗೆ ಮೈಸೂರು ಅರಸರ ಕೊಡುಗೆ ಅಪಾರ. ಜನರ ಮನಸ್ಸಿನಲ್ಲಿ ಇಂದಿಗೂ ಅವರ ಬಗ್ಗೆ ಅಪಾರ ಗೌರವ ಇದೆ. ಈ ನಿಟ್ಟಿನಲ್ಲಿ ಜನರು ಯಾವುದೇ ಊಹಾಪೋಹಗಳು ಹಾಗೂ ಆಮಿಷಗಳಿಗೆ ಬಲಿಯಾಗದೆ ಯದುವೀರ್ ಅವರನ್ನು ಗೆಲ್ಲಿಸಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರು. ಹಾಗಾಗಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಅವರಿಗೆ ಪ್ರತಿಷ್ಠೆಯಾಗಿತ್ತು. ಈ ಕ್ಷೇತ್ರವನ್ನು ಗೆದ್ದೇ ಗೆಲ್ಲಬೇಕು ಎನ್ನುವ ನಿಟ್ಟಿನಲ್ಲಿ ನಾನಾ ವಾಮ ಮಾರ್ಗಗಳನ್ನು ಆಡಳಿತ ಪಕ್ಷದವರು ಹಿಡಿದಿದ್ದರು. ಆದರೆ ಮತದಾರ ಪ್ರಭು ಮಾತ್ರ ಒಡೆಯರ್ ಅವರಿಗೆ ಬೆಂಬಲ ನೀಡಿದರು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಮತ್ತೆ ಅಧಿಕಾರ ಹಿಡಿಯುವುದು ಶತಸಿದ್ಧವಾಗಿದೆ. ಮೋದಿ ಅವರ ಮುಂದಾಳ್ವತದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳು ಮೈಸೂರು–ಕೊಡಗು ಕ್ಷೇತ್ರದಲ್ಲೂ ಆಗಲಿದೆ ಎಂದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : "ರೀ, ಉಪವಾಸ ಮಾಡುವುದರಿಂದ ಏನೇನು ಲಾಭ ಉಂಟಾಗುತ್ತೆ?"

ಮಂಕ : "ಬೇರೆ ಏನು ಲಾಭ ಆಗುತ್ತೋ ಗೊತ್ತಿಲ್ಲ. ಆ ಒಂದು ದಿನವಾದರೂ ನಾನು ಅಡುಗೆ ಮಾಡೋದು ತಪ್ಪುತ್ತೆ!"


ಮೈಸೂರು ಮಿತ್ರ
ಬುಧವಾರ, 5 ಜೂನ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಆನಂದದಾಯಕ ಮಾತುಗಳು ಚಂದ್ರ ಕಿರಣದಂತೆ ಮನಸ್ಸಿನತ್ತ ಪ್ರವಹಿಸುತ್ತವೆ.–ಅವ್ವೈಯಾರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೀಸ್ನಾರ್ದ ಮುಕ್ಕಂಗೆ ಬಿಸಿ ಹಿಟ್ಟಿಲ್ಲ, ಕುಟ್ನಾರ್ದ ಮುಕ್ಕಂಗೆ ಕೂಳಿಲ್ಲ

ಮೂರನೇ ಬಾರಿಗೆ ಎನ್‌ಡಿಎ ಅಧಿಕಾರಕ್ಕೆ



ನವದೆಹಲಿ, ಜೂ.4– ದೇಶದಲ್ಲಿ ಎನ್‌ಡಿಎ ಸರ್ಕಾರ ಮೂರನೇ ಬಾರಿಗೆ ಅಧಿಕಾರಕ್ಕೆ ಮರಳುತ್ತಿದೆ. ಎನ್‌ಡಿಎ ಹಾಗೂ ಬಿಜೆಪಿ ಮೇಲೆ ನಂಬಿಕೆ ಇಟ್ಟಿರುವ ಜನತೆಗೆ ನಾವು ಆಭಾರಿಯಾಗಿದ್ದೇವೆ ಎಂದು ನರೇಂದ್ರ ಮೋದಿ ಹೇಳಿದ್ದಾರೆ.

ಲೋಕಸಭಾ ಚುನಾವಣೆ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ಹೆಚ್ಚಿನ ಸೀಟ್ ಗಳಿಸಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸರ್ಕಾರ ರಚನೆಗೆ ಸಿದ್ಧವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, ಸುಡು ಬಿಸಿಲಿನಲ್ಲೂ ಕೆಲಸ ಮಾಡಿದ ಪಕ್ಷದ ಕಾರ್ಯಕರ್ತರಿಗೆ ಧನ್ಯವಾದ. ಇಂದು ಬಡಾ ಮಂಗಲ್(ಶುಭ ಮಂಗಳವಾರ). ಎನ್‌ಡಿಎ ಸರ್ಕಾರ ಮೂರನೇ ಬಾರಿಗೆ ಅಧಿಕಾರಕ್ಕೆ ಮರಳುತ್ತಿದೆ. ಎನ್‌ಡಿಎ ಮತ್ತು ಬಿಜೆಪಿಯಲ್ಲಿ ನಂಬಿಕೆ ಇಟ್ಟಿರುವ ಜನತೆಗೆ ನಾವು ಆಭಾರಿಯಾಗಿದ್ದೇವೆ. ಇಂದಿನ ಗೆಲುವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವದ ಗೆಲುವು. ಇದು 140 ಕೋಟಿ ಜನರ ಗೆಲುವು ಎಂದು ವಿಶ್ಲೇಷಿಸಿದರು. ಚುನಾವಣಾ ಆಯೋಗ ಯಶಸ್ವಿಯಾಗಿ ಚುನಾವಣೆ ನಡೆಸಿದೆ. 100 ಕೋಟಿ ಮತದಾರರು, 11 ಲಕ್ಷ ಮತಗಟ್ಟೆಗಳು, 1.5 ಕೋಟಿ ಚುನಾವಣಾಧಿಕಾರಿಗಳು, 50 ಲಕ್ಷ ಇವಿಎಂಗಳ ನಿರ್ವಹಣೆ ಸುಲಭದ ಮಾತಲ್ಲ. ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿಭಾಯಿಸಿದರು. ಭದ್ರತಾ ಸಿಬ್ಬಂದಿ ಆದರ್ಶಪ್ರಾಯವಾಗಿ ಕಾರ್ಯನಿರ್ವಹಿಸಿದರು. ಪ್ರತಿಯೊಬ್ಬ ಭಾರತೀಯನು ಚುನಾವಣಾ ವ್ಯವಸ್ಥೆ ಮತ್ತು ಅದರ ವಿಶ್ವಾಸಾರ್ಹತೆಯ ಬಗ್ಗೆ ಹೆಮ್ಮೆಪಡುತ್ತಾನೆ. ಇದರ ದಕ್ಷತೆಯು ಪ್ರಪಂಚದ ಬೇರೆಲ್ಲಿಯೂ ಹೊಂದಿಕೆಯಾಗುವುದಿಲ್ಲ. ನಾನು ಇನ್‌ಫ್ಲೂಯೆನ್ಸರ್‌ಗಳಿಗೆ ಹೇಳಲು ಬಯಸುವ ವಿಷಯ ಏನೆಂದರೆ, ಇದು ಹೆಮ್ಮೆಯ ವಿಷಯ. ಇದು ಭಾರತದ ಖ್ಯಾತಿಯನ್ನು ಹೆಚ್ಚಿಸುತ್ತದೆ. ಇದನ್ನು ಜನರ ಹೆಮ್ಮೆಯಿಂದ ಪ್ರಪಂಚದ ಮುಂದೆ ಪ್ರಸ್ತುತಪಡಿಸಬೇಕು ಎಂದು ಮೋದಿ ತಿಳಿಸಿದರು. ಈ ಬಾರಿ ಮತ ಚಲಾಯಿಸಿದ ಜನರು ಅನೇಕ ಪ್ರಜಾಪ್ರಭುತ್ವ ರಾಷ್ಟ್ರಗಳ ಜನಸಂಖ್ಯೆಗಿಂತ ಹೆಚ್ಚು ಎನ್ನುವುದು ಗಮನಾರ್ಹ. ಜಮ್ಮು ಮತ್ತು ಕಾಶ್ಮೀರದಲ್ಲಿ ದಾಖಲೆಯ ಮತದಾನವಾಗಿದ್ದು, ಭಾರತವನ್ನು ಟೀಕಿಸುವ ಜನರಿಗೆ ಹಕ್ಕು ಚಲಾಯಿಸುವ ಮೂಲಕ ತಕ್ಕ ಉತ್ತರ ನೀಡಿದ್ದಾರೆ. ಈ ಚುನಾವಣೆಗಳಲ್ಲಿ ಹಲವು ಅಂಶಗಳಿವೆ. 1962ರ ನಂತರ ಸರ್ಕಾರವು ಮೂರನೇ ಬಾರಿಗೆ ಅಧಿಕಾರಕ್ಕೆ ಮರಳುತ್ತಿರುವುದು ಇದೇ ಮೊದಲು ಎಂದು ಪ್ರಧಾನಿ ಹೇಳಿದರು.

ಒಡಿಶಾದಲ್ಲಿ ಸರ್ಕಾರ ರಚಿಸುವ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ ಪ್ರಧಾನಿ ಮೋದಿ, ಒಡಿಶಾದಲ್ಲಿ ಬಿಜೆಪಿ ಉತ್ತಮ ಪ್ರದರ್ಶನ ನೀಡಿದೆ. ಮಹಾಪ್ರಭು ಜಗನ್ನಾಥನ ನಾಡಿನಲ್ಲಿ ಬಿಜೆಪಿ ಸಿಎಂ ಆಗುತ್ತಿರುವುದು ಇದೇ ಮೊದಲು. ತೆಲಂಗಾಣದಲ್ಲಿ ನಮ್ಮ ಸಂಖ್ಯೆ ದ್ವಿಗುಣಗೊಂಡಿದೆ. ಮಧ್ಯಪ್ರದೇಶ, ಗುಜರಾತ್, ಛತ್ತೀಸ್‌ಗಢ, ದೆಹಲಿ, ಉತ್ತರಾಖಂಡ, ಹಿಮಾಚಲ ಪ್ರದೇಶದಲ್ಲಿ ನಮ್ಮ ಪಕ್ಷ ಭರ್ಜರಿ ಗೆಲುವು ಸಾಧಿಸಿದೆ ಎಂದರು.

2014ರಲ್ಲಿ, ದೇಶವು ಹತಾಶೆ ಮತ್ತು ನಿರಾಶೆಯಲ್ಲಿ ಕಳೆದುಹೋಯಿತು. ಪ್ರತಿದಿನ ಪತ್ರಿಕೆಗಳು ಹಗರಣಗಳ ಮುಖ್ಯಾಂಶಗಳಿಂದ ತುಂಬಿದ್ದವು. ಯುವಕರು ಭ್ರಮನಿರಸನಗೊಂಡಿದ್ದರು. ಆ ಸಮಯದಲ್ಲಿ ನಾವು ದೇಶವನ್ನು ಹತಾಶೆಯಿಂದ ಹೊರತರುವ ಕೆಲಸವನ್ನು ಮಾಡಿದ್ದೇವೆ. ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇವೆ. 2019ರಲ್ಲಿ ದೇಶ ನಮಗೆ ಎರಡನೇ ಬಾರಿ ಅವಕಾಶ ನೀಡಿತು. ಇದೀಗ 2024ರಲ್ಲಿ ಎನ್‌ಡಿಎಗೆ ಸಿಕ್ಕ ಆಶೀರ್ವಾದದೊಂದಿಗೆ ನಾವು ಹಿಂತಿರುಗಿದ್ದೇವೆ ಎಂದು ಮೋದಿ ಹೇಳಿದರು.

ಮೋದಿ ಪ್ರಧಾನಿಯಾಗಲಿದ್ದಾರೆ: ಇದಕ್ಕೂ ಮುನ್ನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಮಾತನಾಡಿ, ಎನ್‌ಡಿಎ ಮೇಲೆ ನಂಬಿಕೆ ಇಟ್ಟ ಮತದಾರರಿಗೆ ಧನ್ಯವಾದ. ನರೇಂದ್ರ ಮೋದಿ ಮೂರನೇ ಬಾರಿಗೆ ಪ್ರಧಾನಿಯಾಗಲಿದ್ದಾರೆ. ದೇಶದ ಜನರು ಪ್ರಧಾನಿ ಮೋದಿಯವರೊಂದಿಗೆ ನಿಂತಿದ್ದಾರೆ. ಇನ್ನು ಕೆಲವರು ಸ್ವಾರ್ಥಕ್ಕಾಗಿ ಮಾತ್ರ ಸಮ್ಮಿಶ್ರ ರಚನೆ ಮಾಡುತ್ತಾರೆ. ಅವರು 30–40 ಸ್ಥಾನಗಳನ್ನು ಗೆದ್ದ ನಂತರ ಸಂಭ್ರಮಿಸಲು ಪ್ರಾರಂಭಿಸಿದ್ದಾರೆ. ಆದರೆ ದೇಶವು ಮೋದಿಯವರೊಂದಿಗೆ ನಿಂತಿದೆ ಎಂಬುದನ್ನು ಅವರು ಮರೆತುಬಿಟ್ಟಿದ್ದಾರೆ. ಈ ಹಿಂದೆ ಒಂದೇ ಒಂದು ಸೀಟು ಇಲ್ಲದ ಕೇರಳದಲ್ಲಿ ಬಿಜೆಪಿ ತನ್ನ ಖಾತೆಯನ್ನು ತೆರೆದಿದೆ. ಒಡಿಶಾದಲ್ಲಿ ನಾವು ನಿರ್ಣಾಯಕ ಬಹುಮತದೊಂದಿಗೆ ಸರ್ಕಾರ ರಚಿಸುತ್ತಿದ್ದೇವೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಕಾರ್ಯಕ್ರಮಕ್ಕೆ ಆಗಮಿಸಿದ ಸಂದರ್ಭದಲ್ಲಿ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಸೇರಿದಂತೆ ಬಿಜೆಪಿ ನಾಯಕರು, ಪಕ್ಷದ ಕಾರ್ಯಕರ್ತರು ಹೂಮಳೆಗರೆದು ಸ್ವಾಗತಿಸಿದರು.

ಬಿಜೆಪಿ ಪ್ರಧಾನ ಕಚೇರಿಯಲ್ಲಿ ಮೋದಿ ಭಾಷಣ

3ನೇ ಅವಧಿಯಲ್ಲಿ ದೊಡ್ಡ ನಿರ್ಧಾರ; ಮೋದಿ ಗ್ಯಾರಂಟಿ

ನವದೆಹಲಿ, ಜೂ.4– ಮೂರನೇ ಅವಧಿಯಲ್ಲಿ ಸರ್ಕಾರ ಅತೀ ದೊಡ್ಡ ನಿರ್ಧಾರ ತೆಗೆದುಕೊಳ್ಳಲಿದೆ. ಇದು ಮೋದಿ ಗ್ಯಾರಂಟಿ ಎಂದು ನರೇಂದ್ರ ಮೋದಿ ಹೇಳಿದ್ದಾರೆ. ಇಂಡಿಯಾ ಒಕ್ಕೂಟ ಒಟ್ಟಿಗೆ ಸೇರಿ ಬಿಜೆಪಿ ಗೆದ್ದಷ್ಟು ಸ್ಥಾನ ಗೆಲ್ಲಲು ಸಾಧ್ಯವಾಗಿಲ್ಲ. ಈ ದೇಶದ ಜನತೆಯ ಪ್ರಯಾಸ, ಬೆವರಿನ ಶ್ರಮ ನನಗೆ ಪ್ರೇರಣೆ ನೀಡುತ್ತದೆ. ನೀವು 10 ಗಂಟೆ ಕೆಲಸ ಮಾಡಿದರೆ ನಿಮಗಾಗಿ ನಾನು 18 ಗಂಟೆ ಕೆಲಸ ಮಾಡುತ್ತೇನೆ. ನಾವು ಭಾರತೀಯರು ಜೊತೆಯಾಗಿ ಸಾಗೋಣ, ದೇಶವನ್ನು ಅಭಿವೃದ್ಧಿಯತ್ತ ಮುನ್ನಡೆಸೋಣ. ದೊಡ್ಡ ನಿರ್ಧಾರವನ್ನು ಈ ಮೂರನೇ ಅವಧಿಯಲ್ಲಿ ತೆಗೆದುಕೊಳ್ಳಲಿದ್ದೇವೆ. ಇದು ಮೋದಿ ಗ್ಯಾರಂಟಿ ಎಂದರು.

ಎನ್‌ಡಿಎ ಸರ್ಕಾರ 25 ಕೋಟಿಗೂ ಹೆಚ್ಚು ಜನರನ್ನು ಬಡತನದಿಂದ ಹೊರತಂದಿದೆ. ಇದರಲ್ಲಿ ಎಸ್‌ಸಿ, ಎಸ್‌ಟಿ ಹಾಗೂ ಓಬಿಸಿ ಸಂಖ್ಯೆ ಹೆಚ್ಚಿದೆ. ಮಹಿಳಾ ಸಬಲೀಕರಣ ನಮ್ಮ ಸರ್ಕಾರದ ಆದ್ಯತೆ. ಬಾಹ್ಯಾಕಾಶ, ಕೈಗಾರಿಕೆ, ಉದ್ಯಮ, ಸ್ಟಾರ್ಟ್‌ಅಪ್‌ಗಳಿಗೆ ನಾವು ನೆರವು ನೀಡಿದ್ದೇವೆ. ಏಮ್ಸ್, ಮೆಡಿಕಲ್ ಕಾಲೇಜುಗಳ ಸಂಖ್ಯೆಗಳು ದುಪ್ಪಟ್ಟಾಗಿದೆ. ಭಾರತ, ವಿಶ್ವದ 2ನೇ ಅತೀ ದೊಡ್ಡ ಮೊಬೈಲ್ ಉತ್ಪಾದನಾ ಕೇಂದ್ರವಾಗಿದೆ. ಸೆಮಿಕಂಡಕ್ಟರ್ ಉತ್ಪಾದನೆ ಮಾಡುತ್ತಿದ್ದೇವೆ. ಡಿಫೆನ್ಸ್ ಉತ್ಪಾದನೆ ಮಾಡಿ ವಿದೇಶಕ್ಕೆ ರಫ್ತು ಮಾಡುತ್ತಿದ್ದೇವೆ. ಯುವ ಸಮೂಹಕ್ಕೆ ಶಿಕ್ಷಣ ಉದ್ಯೋಗ ನೀಡಿ ಎಲ್ಲಾ ಕ್ಷೇತ್ರದಲ್ಲಿ ಅವಕಾಶಗಳನ್ನು ಒದಿಸುತ್ತಿದ್ದೇವೆ. ಕೃಷಿ, ರೈತರಿಗೆ ನೆರವು ನೀಡುವ ಮೂಲಕ ಅವರನ್ನು ಸಮರ್ಥ ಹಾಗೂ ಆತ್ಮನಿರ್ಭರ ಮಾಡುತ್ತೇವೆ. ನಮ್ಮ ಸರ್ಕಾರ ಪ್ರಗತಿ, ಪ್ರಕೃತಿ ಹಾಗೂ ಸಂಸ್ಕೃತಿಯ ಸಮಾಗಮವಾಗಿದೆ. ಭಾರತವನ್ನು ವಿಶ್ವದ ಮೂರನೇ ಅತೀ ದೊಡ್ಡ ಆರ್ಥಿಕತೆಯನ್ನಾಗಿ ಮಾಡಲು ಎನ್‌ಡಿಎ ಸರ್ಕಾರ ಎಲ್ಲಾ ಶಕ್ತಿ ಪ್ರಯೋಗಿಸಿ ಕೆಲಸ ಮಾಡಲಿದೆ. ಭಾರತ ವಿಶ್ವಬಂಧುವಾಗಿ ಎಲ್ಲಾ ರಾಷ್ಟ್ರಗಳಿಗೆ ಹೆಗಲು ನೀಡಲಿದೆ. 3ನೇ ಅವಧಿಯಲ್ಲಿ ಎಲ್ಲಾ ರೀತಿಯ ಭ್ರಷ್ಟಾಚಾರ ಅಂತ್ಯಗೊಳಿಸಲು ನಾವು ಪ್ರಯತ್ನಿಸುತ್ತೇವೆ. ಬಿಜೆಪಿಯ ಪ್ರತಿಯೊಬ್ಬ ಕಾರ್ಯಕರ್ತರಿಗೆ ಪಕ್ಷಕ್ಕಿಂದ ದೇಶ ದೊಡ್ಡದು ಎದು ತಿಳಿಸಿದ್ದಾರೆ.

ನಿಮ್ಮ ಪತ್ರಗಳು

■ ಕಲಾಮಂದಿರದ ಪರಿಸ್ಥಿತಿ ಕೇಳುವವರ್‍ಯಾರು...?





ಮಾನ್ಯರೆ,

ಮೈಸೂರು ಅನೇಕ ಕಲೆಗಳಿಗೆ ಹೆಸರುವಾಸಿಯಾದ ತಾಣ. ಇವುಗಳಲ್ಲಿ ರಂಗಕಲೆಯೂ ಸಹ ಒಂದಾಗಿದ್ದು, ನಮ್ಮ ಕರ್ನಾಟಕ ಕಲಾಮಂದಿರವು ಈ ರಂಗಕಲೆ ಪ್ರದರ್ಶನಕ್ಕೆ ಜನಜನಿತವಾಗಿದೆ. ಒಳಾಂಗಣ ಸರಿ ಇರುವ ಹಾಗೆ ಸುತ್ತಮುತ್ತಲಿನ ಆವರಣವನ್ನೂ ಅಷ್ಟೇ ಶುಚಿಯಾಗಿಟ್ಟುಕೊಳ್ಳುವ ಜವಾಬ್ದಾರಿಯೂ ಮುಖ್ಯವಾಗಿರುತ್ತದೆ. ಕಳೆದ ವಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವಿಶ್ವ ಪರಿಸರ ದಿನದ ಕಾರ್ಯಕ್ರಮದಂತೆ ಅನೇಕ ಕಾರ್ಯಕ್ರಮಗಳು ಹೊರಾಂಗಣದಲ್ಲಿ ನಡೆಯುತ್ತಿದೆ. ಇಂತಹ ಜನಪ್ರಿಯ ತಾಣದಲ್ಲಿ ಶೌಚಾಲಯವು ಬಳಕೆ ಮಾಡಲಾರದ ಸ್ಥಿತಿಯಲ್ಲಿದ್ದು ಹಾಗೂ ಕಸದ ಬೃಹತ್ ಡಬ್ಬಿಯಲ್ಲಿ ಕಸ ವಿಲೇವಾರಿಯಾಗದೇ ತುಕ್ಕು ಹಿಡಿದಿರುವ ಸ್ಥಿತಿಯಲ್ಲಿ ಕಂಡುಬಂದಿರುವುದು ಶೋಚನೀಯ ಸಂಗತಿಯಾಗಿದೆ. ಅನೇಕ ಸರ್ಕಾರಿ ಹಾಗೂ ಖಾಸಗಿ ಕಾರ್ಯಕ್ರಮಗಳು ನಡೆಯುವ ಸ್ಥಳದಲ್ಲಿ ಈ ರೀತಿ ವಾತಾವರಣ ಇಟ್ಟುಕೊಂಡಿದ್ದರೆ, ಕಲಾಪ್ರಿಯರು, ಕಲಾಸಕ್ತರು ಹಾಗೂ ಸಾರ್ವಜನಿಕರು ಆಗಮಿಸುವುದನ್ನೇ ನಿಲ್ಲಿಸುವ ದುಸ್ಥಿತಿ ಎದುರಾಗಿ ಹೊರದೇಶದ ಪ್ರವಾಸಿಗರಿಗೂ ಕೂಡ ನಗರದ ಸ್ವಚ್ಛತೆಯ ಬಗ್ಗೆ ಅಪನಂಬಿಕೆ ಹುಟ್ಟಿಕೊಳ್ಳಬಹುದು. ಆದ್ದರಿಂದ ಸೂಕ್ತ ಅಧಿಕಾರಿಗಳು ಕೂಡಲೇ ಗಮನಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕಳಕಳಿ ಮನವಿ.

–ಯಶಸ್. ಆರ್, ಮೈಸೂರು.

■ ವಿದ್ಯಾರಣ್ಯಪುರಂ ಸುತ್ತಮುತ್ತ ಅತಿಯಾದ ವಿದ್ಯುತ್ ವ್ಯತ್ಯಯ

ಮಾನ್ಯರೆ,

ಕಳೆದ ಒಂದು ತಿಂಗಳಿಂದ ಮೈಸೂರಿನ ವಿದ್ಯಾರಣ್ಯಪುರಂ ಸುತ್ತಮುತ್ತ ಎರಡು ಮೂರು ದಿನಗಳಿಗೊಮ್ಮೆ ಲೋಡ್ ಶೆಡ್ಡಿಂಗ್ ಮಾದರಿಯಲ್ಲಿ ವಿದ್ಯುತ್ ವ್ಯತ್ಯಯವಾಗುತ್ತಿದೆ. ಮಳೆ ಬಂದಾಗ ಮರ, ರೆಂಬೆ ಕೊಂಬೆಗಳು ಮುರಿದು ಬಿದ್ದು, ಅದನ್ನು ಸರಿ ಮಾಡಲು ಸುಮಾರು 24 ಗಂಟೆಗಳಿಗೂ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದೆ. ಹಾಗೆ ನಿಗದಿತ ಕಾರ್ಯನಿರ್ವಹಣೆ ಎಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ವ್ಯತ್ಯಯ ಮಾಡಲಾಗುತ್ತಿದೆ. ಮತ್ತು ಜೂನ್ 2 ರಂದು ಮತ್ತೆ ಸ್ಟೇಷನ್ ಅಲ್ಲಿ ತೊಂದರೆ ಎಂದು ವಿದ್ಯುತ್ ಸಂಪರ್ಕ ಕಡಿತಗೊಳಿಸಿರುತ್ತಾರೆ. ಈ ಕುರಿತು ಚೆಸ್ಕಾಂ ಎಇ ಅವರಿಗೆ ದೂರವಾಣಿ ಕರೆ ಮಾಡಿದರೆ ಬಿಸಿಲಿಗೆ ಕಾದ ವೈರ್‌ಗಳು ಮಳೆ ಹನಿ ಬಿದ್ದ ಕೂಡಲೇ ಸಿಡಿದು ಹೋಗಿವೆ ಎಂದು ಹೇಳುತ್ತಾರೆ. ಹಾಗಾದರೆ ನಿಗದಿತ ಕಾರ್ಯ ನಿರ್ವಹಣೆ ಸಮಯದಲ್ಲಿ ಇವರು ಮಾಡಿದ ಕೆಲಸವಾದರು ಏನು? ಮಳೆ ಬಂದು ಮರದ ಕೊಂಬೆ ಬಿತ್ತು ಎಂದು ಹೇಳುವವರು ಬೇಸಿಗೆಯಲ್ಲಿ ಒಣಗಿ ಟೊಳ್ಳು ಆಗಿರುವ ಕೊಂಬೆಗಳ ಪತ್ತೆ ಮಾಡಿ ಅವುಗಳನ್ನು ಏಕೆ ಕಡಿಯುವುದಿಲ್ಲ? ಮುಂದಾಲೋಚನೆ ಇಲ್ಲದೆ ನಿಗದಿತ ಕಾರ್ಯನಿರ್ವಹಣೆ ಮಾಡುತ್ತಾರಾ? ಇದರಿಂದ ವಿದ್ಯುತ್ ಅನ್ನೇ ಅವಲಂಬಿಸಿ ವ್ಯಾಪಾರ ಮಾಡುವ ಜೆರಾಕ್ಸ್, ಜ್ಯೂಸ್ ಅಂಗಡಿಗಳು ಒಂದೆಡೆ ವಿದ್ಯುತ್ ಬೆಲೆ ಏರಿಕೆ ಮತ್ತೊಂದು ಕಡೆ ನಿರಂತರ ವಿದ್ಯುತ್ ವ್ಯತ್ಯಯದಿಂದ ವ್ಯಾಪಾರ ಆಗದೆ ರೋಸಿ ಹೋಗಿದ್ದಾರೆ. ಸರ್ಕಾರಿ ಸವಲತ್ತು ಪಡೆಯಲು ಆಧಾರ್ ಕೇಂದ್ರಗಳಿಗೆ 3–4 ದಿನ ಅಲೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ಕಡೆ ಮನೆಗಳಿಗೆ ಉಚಿತವಾಗಿ ವಿದ್ಯುತ್ ಕೊಡುತ್ತೇವೆ ಎಂದು ಹೇಳಿ ಮತ್ತೊಂದೆಡೆ ಹೀಗೆ ವಿದ್ಯುತ್ ಸಂಪರ್ಕವನ್ನೆ ಕಡಿತಗೊಳಿಸಿದರೆ ಮನೆಯಲ್ಲಿ ಕುಳಿತು ಕೆಲಸ ಮಾಡುವುದಾದರೂ ಹೇಗೆ?

ಹಾಗೆ ನಿಗದಿತ ನಿರ್ವಹಣಾ ಕಾರ್ಯದ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಒಂದೇ ರೀತಿಯ ಮಾಹಿತಿಯನ್ನು ನೀಡಬೇಕು. ಆಗ ಜನರು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಅವಕಾಶ ಸಿಗುತ್ತದೆ. ಮಳೆಗಾಲದಲ್ಲಿ ಮರಗಳು ಬೀಳುವುದು ಸಹಜ. ಆದ್ದರಿಂದ ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ನೇಮಿಸಿಕೊಂಡು ಕಾರ್ಯಾಚರಣೆ ಮುಗಿಸಬಹುದು. ಇಂತಹ ಯೋಚನೆಗಳು ಇಲಾಖೆ ಅಧಿಕಾರಿಗಳಿಗೆ ಬರುವುದಿಲ್ಲವೇ? ಇದಕ್ಕೆ ಪರಿಹಾರ ಏನು ಎಂದು ಕೂಡಲೇ ಕಂಡುಕೊಂಡು ಇಲಾಖೆ ಅಧಿಕಾರಿಗಳು ಅದನ್ನು ಜಾರಿಗೆ ತರಬೇಕು.

–ವಿ. ಚಿತ್ರರಂಜನ್ ಅರಸ್, ಮೈಸೂರು.

■ ಗುಂಡ್ಲುಪೇಟೆ ಶಾಸಕರಲ್ಲಿ ಒಂದು ಮನವಿ

ಮಾನ್ಯರೆ,

ಗಡಿನಾಡು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕು ಕೇರಳ ಮತ್ತು ತಮಿಳುನಾಡು ರಾಜ್ಯಗಳೊಂದಿಗೆ ಗಡಿಯನ್ನು ಹಂಚಿಕೊಂಡಿರುವ ನಮ್ಮ ರಾಜ್ಯದ ಪ್ರಮುಖ ತಾಲೂಕು ಕೇಂದ್ರ, ಪ್ರಕೃತಿ ಸಂಪತ್ತು, ಬೆಟ್ಟ–ಗುಡ್ಡಗಳು, ವನ್ಯ ಸಂಪತ್ತು ಹಾಗೂ ವಾಣಿಜ್ಯ ದೃಷ್ಟಿಯಿಂದಲೂ ಪ್ರಾಮುಖ್ಯತೆ ಪಡೆದುಕೊಂಡಿದೆ.

ಗುಂಡ್ಲುಪೇಟೆ ತಾಲೂಕಿನ ಜನಪ್ರಿಯ ಶಾಸಕರಾದ ಗಣೇಶ್ ಪ್ರಸಾದ್ ಅವರಲ್ಲಿ ನಮ್ಮ ಕೋರಿಕೆ ಏನೆಂದರೆ, ತಾಲೂಕಿನಲ್ಲಿ ದಿನದಿಂದ ದಿನಕ್ಕೆ ಅಂತರ್ಜಲ ಮಟ್ಟ ಕುಸಿತ ಕಾಣುತ್ತಿರುವುದು ತೀರಾ ಆತಂಕದ ವಿಷಯ. ಇದರಿಂದ ಬೋರ್‌ವೆಲ್‌ಗಳು, ಬಾವಿಗಳು ಅವನತಿ ಹೊಂದುತ್ತಿದ್ದು, ವ್ಯವಸಾಯವನ್ನೇ ನೆಚ್ಚಿಕೊಂಡಿರುವ ರೈತ ಕುಟುಂಬಗಳು ಬೇರೆ ಪಟ್ಟಣಗಳಿಗೆ ವಲಸೆ ಹೋಗುವಂತಾಗಿದೆ.

ಈ ನಿಟ್ಟಿನಲ್ಲಿ ಸರಕಾರದ ಪ್ರಮುಖ ಯೋಜನೆಯಾದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ವೇಗ ನೀಡಲು ಅಧಿಕಾರಿಗಳಿಗೆ ಸೂಚಿಸಿ ಹಾಗೂ ತಮ್ಮ ತಂದೆ ದಿವಂಗತ ಮಹಾದೇವ ಪ್ರಸಾದ್‌ರವರ ಕಾಲದಿಂದಲೂ ನನೆಗುದಿಗೆ ಬಿದ್ದಿರುವ ತಾಲೂಕಿನ ಇಂಗಲವಾಡಿ ಹಾಗೂ ಬನ್ನಿತಾಳಪುರ ಸಮೀಪವಿರುವ ನಲ್ಲೂರು ಅಮಾನಿಕೆರೆ (ಕಿರು ಅಣೆಕಟ್ಟು)ಗೆ ಕಾಯಕಲ್ಪ ನೀಡಿ ನೀರು ತುಂಬಿಸಿದರೆ ಸಾವಿರಾರು ಎಕರೆ ಕೃಷಿ ಭೂಮಿಗೆ ಜೀವಕಳೆ ಬರುತ್ತದೆ ಹಾಗೂ ಅಂತರ್ಜಲ ಮಟ್ಟ ಸಹ ಹೆಚ್ಚಾಗುವುದರಲ್ಲಿ ಅನುಮಾನವಿಲ್ಲ. ಈ ಸಮಸ್ಯೆ ಬಗೆಹರಿಸಬೇಕೆಂಬುದು ದಶಕಗಳಿಂದಲೂ ಈ ಭಾಗದ ರೈತರ ಬೇಡಿಕೆಯಾಗಿದ್ದು, ಇದಕ್ಕೆ ನೀರು ತುಂಬಿದರೆ ತೀವ್ರ ಬರಗಾಲದ ಸಮಯದಲ್ಲೂ ರೈತರಿಗೆ ಈ ಕಿರು ಅಣೆಕಟ್ಟು ಜೀವ ಸೆಲೆ ಆಗುತ್ತದೆ. ಅದರಲ್ಲೂ ಈ ಅಣೆಕಟ್ಟೆಯ ಸುತ್ತಮುತ್ತ ಫಲವತ್ತಾದ ಕಪ್ಪು ಮಣ್ಣು ಇದ್ದು, ವ್ಯವಸಾಯಕ್ಕೆ ಬಲು ಉತ್ಕೃಷ್ಟ ವಾಗಿದೆ. ಆದರೆ ನೀರಿನ ಅಲಭ್ಯತೆಯಿಂದ ಇದು ಉಪಯೋಗಕ್ಕೆ ಬರುತ್ತಿಲ್ಲ. ಈ ಭಾಗದ ರೈತರ ಪರವಾಗಿ ಈ ಬೇಡಿಕೆ ಸಲ್ಲಿಸುತ್ತಿದ್ದು, ಈ ಬಾರಿಯ ಮಳೆಗಾಲದಲ್ಲಿ ಈ ಕೆರೆಗೆ ನೀರು ತುಂಬಿಸಿ ಹಾಗೆಯೇ ನಮ್ಮ ಗುಂಡ್ಲುಪೇಟೆಗೆ ಆ ಹೆಸರು ಬರಲು ಕಾರಣವಾದ ಐತಿಹಾಸಿಕ ಗುಂಡ್ಲುಹೊಳೆ ನಶಿಸಿ ಹೋಗಿದ್ದು, ಅದರ ಉತ್ಖನನ ಕಾರ್ಯಕ್ಕೂ ಜಲತಜ್ಞರ ಸಲಹೆ ಪಡೆದು ಕಾರ್ಯಪ್ರವೃತ್ತರಾಗಬೇಕೆಂದು ಮನವಿ.

–ನಾಗೇಂದ್ರ ಕಿಲಗೆರೆ, ಮೈಸೂರು.

'ಹೃದಯ' ಮಿತ್ರ ಡಾ. ಸಿ.ಎನ್. ಮಂಜುನಾಥ್ ಗೆಲುವು



ಪತ್ನಿ ಹಾಗೂ ಬೆಂಬಲಿಗರೊಂದಿಗೆ ವಿಜಯೋತ್ಸವ ಆಚರಿಸಿದ ಡಾ. ಸಿ.ಎನ್. ಮಂಜುನಾಥ್.

ಬೆಂಗಳೂರು: ರಾಜ್ಯದಲ್ಲಿ ಈ ಬಾರಿ ತೀವ್ರ ಗಮನ ಸೆಳೆದಿದ್ದ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಡಾ.ಸಿ.ಎನ್. ಮಂಜುನಾಥ್ ಭರ್ಜರಿ ಗೆಲುವು ಸಾಧಿಸಿದ್ದಾರೆ. ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸೋದರ ಡಿಕೆ ಸುರೇಶ್ ವಿರುದ್ಧ ಬರೋಬ್ಬರಿ 2,69,647 ಮತಗಳಿಗೂ ಹೆಚ್ಚು ಅಂತರದಿಂದ ಗೆಲುವು ದಾಖಲಿಸಿದ್ದಾರೆ.


ಈ ಕುರಿತಾಗಿ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಈ ಗೆಲುವು ಪ್ರಜ್ಞಾವಂತ ಹಾಗೂ ಮತದಾರರ ಗೆಲುವು. ಈ ಗೆಲುವು ಕಾರ್ಯಕರ್ತರಿಗೆ ಅರ್ಪಣೆ ಮಾಡುತ್ತೇನೆ. ಎಲ್ಲಾ ಶಕ್ತಿಗಿಂತ ಜನಶಕ್ತಿ ದೊಡ್ಡದು. ಆರೋಗ್ಯ, ಶಿಕ್ಷಣ, ಮೂಲಭೂತ ಸೌಕರ್ಯಗಳ ಬಗ್ಗೆ ಕೆಲಸ ಮಾಡುತ್ತೇವೆ ಎಂದರು.

ಪ್ರತಿಷ್ಠಿತ ಹಾಗೂ ಹೈವೋಲ್ಟೇಜ್ ಕ್ಷೇತ್ರವಾಗಿತ್ತು. ಜನ ಪ್ರೀತಿಯಿಂದ ಅಭಿಮಾನದಿಂದ ಮತ ಕೊಟ್ಟಿದ್ದಾರೆ. ಜನ ಕೊಟ್ಟ ಪ್ರೀತಿಗೆ ಧನ್ಯವಾದಗಳು. ಐವತ್ತು ಸಾವಿರ ಅಥವಾ 2 ಲಕ್ಷ ರೇಂಜ್‌ನಲ್ಲಿ ಗೆಲ್ಲುತ್ತೇವೆ ಅಂತಾ ಇತ್ತು. 2 ಲಕ್ಷ ರೇಂಜ್‌ನಲ್ಲಿ ಗೆದ್ದಿದ್ದೇವೆ. ಇದಕ್ಕಾಗಿ ಕಾರ್ಯಕರ್ತರು ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಮಾವ ಹಾಗೂ ಅತ್ತೆಯ ಆಶೀರ್ವಾದ ಪಡೆದೆವು. ನನ್ನ ಗೆಲುವಿಗೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಎಚ್.ಡಿ.ದೇವೇಗೌಡರು, ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಮತ್ತು ಎಲ್ಲಾ ಸದಸ್ಯರ ಪಾತ್ರವಿದೆ. ದೆಹಲಿಗೆ ಬರುವ ಬಗ್ಗೆ ಹೈಕಮಾಂಡ್‌ನಿಂದ 24 ಗಂಟೆಯಲ್ಲಿ ಕರೆ ಬರಬಹುದು ಎಂದು ತಿಳಿಸಿದ್ದಾರೆ.

ಉತ್ತರಪ್ರದೇಶ ಜನತೆ ಸಂವಿಧಾನವನ್ನು ರಕ್ಷಿಸಿದ್ದಾರೆ

ರಾಹುಲ್ ಗಾಂಧಿ ಪ್ರತಿಕ್ರಿಯೆ



ನವದೆಹಲಿ, ಜೂ.4– ಉತ್ತರ ಪ್ರದೇಶದ ಜನರು ದೇಶದ ರಾಜಕೀಯ ಮತ್ತು ಸಂವಿಧಾನದ ಅಪಾಯವನ್ನು ಅರ್ಥಮಾಡಿಕೊಂಡಿದ್ದು, ಸಂವಿಧಾನವನ್ನು ರಕ್ಷಿಸಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಹೇಳಿದ್ದಾರೆ. ಎಐಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಮತ್ತು ಇಂಡಿಯಾ ಮೈತ್ರಿಕೂಟವನ್ನು ಬೆಂಬಲಿಸಿದ್ದಕ್ಕಾಗಿ ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ಈ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಮಾತ್ರವಲ್ಲದೆ ಸಾಂವಿಧಾನಿಕ ಸಂಸ್ಥೆಗಳು, ದೇಶದ ಆಡಳಿತ ರಚನೆ, ಸಿಬಿಐ ಮತ್ತು ಇಡಿ ನ್ಯಾಯಾಂಗದ ವಿರುದ್ಧವೂ ಹೋರಾಡಿದ್ದೇವೆ. ಏಕೆಂದರೆ ಈ ಎಲ್ಲಾ ಸಂಸ್ಥೆಗಳನ್ನು ಅಮಿತ್ ಶಾ ಮತ್ತು ನರೇಂದ್ರ ಮೋದಿ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಆರೋಪಿಸಿದರು. ಬಿಜೆಪಿ ಗೌರವಯುತವಾಗಿ ಮಾತನಾಡುವುದಿಲ್ಲ. ಆದರೆ ಕೆಎಲ್ ಶರ್ಮಾ ಕಳೆದ 40 ವರ್ಷಗಳಿಂದ ಅಮೇಥಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಗೆಲುವು ನಿಶ್ಚಿತವಾಗಿತ್ತು ಎಂದು ಹೇಳಿದ ರಾಹುಲ್, ವಯನಾಡು ಅಥವಾ ರಾಯ್‌ಬರೇಲಿ ಎರಡರಲ್ಲಿ ಯಾವುದನ್ನು ಉಳಿಸಿಕೊಳ್ಳಬೇಕು ಎಂಬುದರ ಬಗ್ಗೆ ಶೀಘ್ರದಲ್ಲಿಯೇ ತೀರ್ಮಾನ ತೆಗೆದುಕೊಳ್ಳಲಾಗುವುದು. ತೆರೆಮರೆಯಲ್ಲಿ ಕೆಲಸ ಮಾಡಿದ ಪ್ರಿಯಾಂಕಾ ಗಾಂಧಿ ಅವರಿಗೂ ಧನ್ಯವಾದ ಸಲ್ಲಿಸುವುದಾಗಿ ಹೇಳಿದರು.

ಇಂಡಿಯಾ ಮೈತ್ರಿಕೂಟದಿಂದ ಸರ್ಕಾರ ರಚನೆಯ ಸಾಧ್ಯತೆಗಳ ಪ್ರಶ್ನೆಗೆ ಉತ್ತರಿಸಿದ ರಾಹುಲ್, ಮೈತ್ರಿ ಪಾಲುದಾರರೊಂದಿಗೆ ನಾಳೆ ಸಭೆ ನಡೆಸುತ್ತೇವೆ. ಮೈತ್ರಿ ಪಾಲುದಾರರನ್ನು ಗೌರವಿಸುತ್ತೇವೆ. ಅವರನ್ನು ಕೇಳದೆ ಹೇಳಿಕೆಗಳನ್ನು ನೀಡುವುದಿಲ್ಲ ಎಂದು ಹೇಳಿದರು.

ಆಂಧ್ರದಲ್ಲಿ ಟಿಡಿಪಿ, ಒಡಿಸ್ಸಾದಲ್ಲಿ ಬಿಜೆಪಿ ಅಧಿಕಾರಕ್ಕೆ

ವೈಎಸ್‌ಆರ್ ಕಾಂಗ್ರೆಸ್, ಬಿಜು ಜನತಾ ದಳ ಧೂಳೀಪಟ

ಮೈಸೂರು, ಜೂ.4–ಆಂಧ್ರಪ್ರದೇಶ ಮತ್ತು ಒಡಿಸ್ಸಾ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಆಡಳಿತ ಪಕ್ಷಗಳು ಧೂಳೀಪಟವಾಗಿದ್ದು, ವಿಪಕ್ಷಗಳು ಅಧಿಕಾರದ ಗದ್ದುಗೆ ಹಿಡಿದಿವೆ.

ಆಂಧ್ರಪ್ರದೇಶದಲ್ಲಿ ಆಡಳಿತಾರೂಢ ಜಗನ್ಮೋಹನ್ ರೆಡ್ಡಿಯ ವೈಎಸ್‌ಆರ್ ಕಾಂಗ್ರೆಸ್ ಪಾರ್ಟಿ ಹೀನಾಯ ಸೋಲು ಕಂಡಿದ್ದು, ಚಂದ್ರಬಾಬು ನಾಯ್ಡು ಅವರ ತೆಲುಗು ದೇಶಂ ಪಾರ್ಟಿ ಭರ್ಜರಿ ಜಯ ಸಾಧಿಸಿದೆ. ಒಡಿಸ್ಸಾದಲ್ಲಿ ಆಡಳಿತಾರೂಢ ಬಿಜು ಜನತಾ ದಳ ಸೋಲನನುಭವಿಸಿದ್ದು, ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಆಂಧ್ರಪ್ರದೇಶದ 175 ಕ್ಷೇತ್ರಗಳ ಪೈಕಿ 88 ಮ್ಯಾಜಿಕ್ ನಂಬರ್ ಆಗಿದ್ದು, ಚಂದ್ರಬಾಬು ನಾಯ್ಡು ಅವರ ತೆಲುಗು ದೇಶಂ ಪಾರ್ಟಿ 135 ಹಾಗೂ ಮೈತ್ರಿ ಪಕ್ಷ ಬಿಜೆಪಿ 8 ಸ್ಥಾನ ಪಡೆದರೆ, ಆಡಳಿತಾರೂಢ ಜಗನ್ಮೋಹನ್ ರೆಡ್ಡಿಯ ವೈಎಸ್‌ಆರ್ ಕಾಂಗ್ರೆಸ್ ಪಾರ್ಟಿ ಕೇವಲ 11 ಸ್ಥಾನ ಪಡೆದು ಹೀನಾಯ ಸೋಲು ಅನುಭವಿಸಿದೆ. ಪವನ್ ಕಲ್ಯಾಣ್ ನೇತೃತ್ವದ ಜನ ಸೇನಾ ಪಾರ್ಟಿ 21 ಸ್ಥಾನ ಗಳಿಸಿದೆ.

ಒಡಿಸ್ಸಾದ 147 ಕ್ಷೇತ್ರಗಳ ಪೈಕಿ 74 ಮ್ಯಾಜಿಕ್ ನಂಬರ್ ಆಗಿದ್ದು, ಬಿಜೆಪಿ 78 ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಆಡಳಿತಾರೂಢ ಬಿಜು ಜನತಾ ದಳ 51 ಸ್ಥಾನ ಪಡೆದರೆ, ಕಾಂಗ್ರೆಸ್ 14, ಐಎನ್‌ಡಿ 3 ಮತ್ತು ಸಿಪಿಐ(ಎಂ) ಒಂದು ಸ್ಥಾನ ಪಡೆದಿದೆ

ಪ್ರಜ್ವಲ್ ರೇವಣ್ಣರ 'ಪೆನ್‌ಡ್ರೈವ್'ನಿಂದ ಹಾಸನದ ಜೆಡಿಎಸ್ ಕೋಟೆ ಛಿದ್ರ

ಮೈಸೂರು, ಜೂ.4–ಹಾಸನ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಪ್ರಥಮ ಪ್ರಯತ್ನದಲ್ಲೇ ಗೆಲುವು ಸಾಧಿಸಿ ಸಂಸತ್ ಪ್ರವೇಶಿಸಿದ್ದ ಪ್ರಜ್ವಲ್ ರೇವಣ್ಣ, ತಮ್ಮ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್‌ನಲ್ಲಿ ಸಿಲುಕಿ ಸೋಲಿನ ರುಚಿ ಕಂಡಿದ್ದಾರೆ ಎಂದು ಹಾಸನದಲ್ಲಿ ವಿಶ್ಲೇಷಿಸಲಾಗಿದೆ.

ಕಳೆದ 2 ದಶಕದಿಂದಲೂ ಹಾಸನ ಲೋಕಸಭಾ ಕ್ಷೇತ್ರ ಜೆಡಿಎಸ್ ಭದ್ರಕೋಟೆ ಎಂದು ಹೇಳುವುದಕ್ಕಿಂತ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ ಭದ್ರಕೋಟೆ ಎಂದೇ ಹೇಳಲಾಗುತ್ತಿತ್ತು. 20 ವರ್ಷದ ಹಿಂದೆ ಜಿ.ಪುಟ್ಟಸ್ವಾಮಿಗೌಡರು ಗೆದ್ದು, ಸಂಸತ್ ಪ್ರವೇಶಿಸಿದ್ದೇ ಕೊನೆ. ನಂತರ ಈವರೆವಿಗೂ ಈ ಕ್ಷೇತ್ರದಲ್ಲಿ ಜೆಡಿಎಸ್‌ನದ್ದೇ ಹಿಡಿತವಿತ್ತು.

ಕಳೆದ ವಿಧಾನಸಭಾ ಚುನಾವಣೆಯಲ್ಲೂ ಕೂಡ ಹಾಸನ ಜಿಲ್ಲೆಯಲ್ಲಿ ಜೆಡಿಎಸ್ ಹೆಚ್ಚಿನ ಸ್ಥಾನಗಳನ್ನು ಗಳಿಸಿತ್ತು. ಇದೀಗ ಈ ಭದ್ರಕೋಟೆ ಪ್ರಜ್ವಲ್ ರೇವಣ್ಣರ ಪೆನ್‌ಡ್ರೈವ್‌ನಿಂದಾಗಿ ಛಿದ್ರಗೊಂಡಂತಾಗಿದೆ. ಹೆಚ್.ಡಿ.ದೇವೇಗೌಡ ಮತ್ತು ಜಿ.ಪುಟ್ಟಸ್ವಾಮಿಗೌಡರ ನಡುವೆ ಭಾರಿ ರಾಜಕೀಯ ಜಿದ್ದಾಜಿದ್ದಿ ನಡೆಯಿತು. ಪುಟ್ಟಸ್ವಾಮಿಗೌಡರ ನಂತರ ಅವರ ಪುತ್ರಿ ಕೂಡ ದೇವೇಗೌಡರ ಕುಟುಂಬದ ಜೊತೆ ರಾಜಕೀಯವಾಗಿ ಸೆಣಸಾಡಿದ್ದರು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಪಡೆದ ಪುಟ್ಟಸ್ವಾಮಿಗೌಡರ ಮೊಮ್ಮಗ ಶ್ರೇಯಸ್ ಪಟೇಲ್ ಅವರು ದೇವೇಗೌಡರ ಕುಟುಂಬದ ವಿರುದ್ಧ ರಾಜಕೀಯ ಸೇಡು ತೀರಿಸಿಕೊಂಡಿದ್ದಲ್ಲದೇ, 2 ದಶಕಗಳ ನಂತರ ಈ ಕ್ಷೇತ್ರವನ್ನು ಕಾಂಗ್ರೆಸ್‌ಗೆ ಜಯ ತಂದುಕೊಟ್ಟಿದ್ದಾರೆ. ಈ ಮಧ್ಯೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶ್ರೇಯಸ್ ಪಟೇಲ್ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಹೆಚ್.ಡಿ. ರೇವಣ್ಣ ಅವರ ವಿರುದ್ಧ ಅಲ್ಪಮತಗಳ ಅಂತರದಿಂದ ಸೋತಿದ್ದರು.

ಲೋಕಸಭಾ ಚುನಾವಣೆಗೂ ಎರಡ್ಮೂರು ದಿನಗಳ ಮುಂಚೆ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್‌ಗಳು ಹಾಸನದ ರಸ್ತೆಗಳಲ್ಲಿ ಪ್ರತ್ಯಕ್ಷವಾಗಿತ್ತು. ಏಪ್ರಿಲ್ 26 ರಂದು ಚುನಾವಣೆ ಮುಗಿಯುತ್ತಿದ್ದಂತೆಯೇ ದೇಶದಿಂದ ಪಲಾಯನಗೊಂಡ ಸಂಸದ ಪ್ರಜ್ವಲ್ ರೇವಣ್ಣ, ಏ.30ರಂದು ರಾತ್ರಿ ಬೆಂಗಳೂರಿಗೆ ಆಗಮಿಸಿ ಎಸ್‌ಐಟಿಯಿಂದ ಬಂಧನಕ್ಕೊಳಗಾದರು. ಚುನಾವಣಾ ಮತ ಎಣಿಕೆ ನಡೆಯುತ್ತಿದ್ದ ವೇಳೆ ಪ್ರಜ್ವಲ್ ರೇವಣ್ಣ ಗೆದ್ದು ಸಂಸದರಾದರೆ ಮುಂದೇನು ಎಂಬುದರ ಬಗ್ಗೆ ಚರ್ಚೆಗಳು ನಡೆಯುತ್ತಿತ್ತು. ಮತ್ತೊಂದೆಡೆ ಜೆಡಿಎಸ್ ಪ್ರಜ್ವಲರನ್ನು ಪಕ್ಷದಿಂದ ಅಮಾನತುಗೊಳಿಸಿದ್ದು, ಅವರು ಗೆದ್ದಿದ್ದೇ ಆದರೆ ಅದನ್ನು ಯಾವ ರೀತಿ ನಿರ್ವಹಿಸಬೇಕು ಎಂಬುದು ಜೆಡಿಎಸ್‌ಗೂ ತಲೆನೋವಾಗಿತ್ತು. ಮತ್ತೊಂದೆಡೆ ಮೈತ್ರಿ ಪಕ್ಷ ಬಿಜೆಪಿಯು ಮುಜುಗರಕ್ಕೊಳಗಾಗುವಂತಹ ಸನ್ನಿವೇಶ ಸೃಷ್ಟಿಯಾಗಿತ್ತು. ಇದೀಗ ಪ್ರಜ್ವಲ್ ಪರಾಭವಗೊಂಡಿರುವುದರಿಂದ ಜೆಡಿಎಸ್ ಮತ್ತು ಬಿಜೆಪಿ ನಾಯಕರು ಸ್ವಲ್ಪ ಮಟ್ಟಿಗೆ ನಿಟ್ಟುಸಿರು ಬಿಡುವಂತಾಗಿದೆ. ಸಂಸದರಾಗಿ ಜೈಲು ಸೇರಿರುವ ಪ್ರಜ್ವಲ್ ರೇವಣ್ಣ, ಜೈಲಿನಲ್ಲೇ ಮಾಜಿಯಾಗಿದ್ದಾರೆ.

ಮೂವರು ಮಾಜಿ ಮುಖ್ಯಮಂತ್ರಿಗಳು ಲೋಕಸಭೆ ಪ್ರವೇಶ!

ಮೈಸೂರು, ಜೂ.4–ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಮೂವರು ಮಾಜಿ ಮುಖ್ಯಮಂತ್ರಿಗಳು ಜಯ ಗಳಿಸಿರುವುದು ವಿಶೇಷ.

ಈ ಮೂವರು ಮಾಜಿ ಮುಖ್ಯಮಂತ್ರಿಗಳೂ ಎನ್‌ಡಿಎ ಮೈತ್ರಿಕೂಟಕ್ಕೆ ಸೇರಿದವರಾಗಿದ್ದು, ಹೆಚ್.ಡಿ.ಕುಮಾರಸ್ವಾಮಿ ಮಂಡ್ಯದಿಂದ ಗೆದ್ದಿದ್ದರೆ, ಹಾವೇರಿಯಿಂದ ಬಸವರಾಜ ಬೊಮ್ಮಾಯಿ ಮತ್ತು ಬೆಳಗಾವಿಯಿಂದ ಜಗದೀಶ್ ಶೆಟ್ಟರ್ ಲೋಕಸಭೆ ಪ್ರವೇಶಿಸಿದ್ದಾರೆ. ಬಿಜೆಪಿಯಿಂದ ಸ್ಪರ್ಧಿಸಿ ವಿಧಾನಸಭಾ ಚುನಾವಣೆಯಲ್ಲಿ ಪರಾಭವಗೊಂಡ ನಂತರ ಕಾಂಗ್ರೆಸ್ ಸೇರಿ ವಿಧಾನಪರಿಷತ್ ಸದಸ್ಯರಾಗಿದ್ದ ಜಗದೀಶ್ ಶೆಟ್ಟರ್ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿ, ಮತ್ತೆ ಬಿಜೆಪಿ ಸೇರ್ಪಡೆಗೊಂಡಿದ್ದರು. ಅವರಿಗೆ ಬೆಳಗಾವಿಯಲ್ಲಿ ಸ್ಪರ್ಧಿಸಲು ಪಕ್ಷ ಅವಕಾಶ ಕಲ್ಪಿಸಿದ್ದು, ಇದೀಗ ಶೆಟ್ಟರ್ ಲೋಕಸಭೆ ಪ್ರವೇಶಿಸುತ್ತಿದ್ದಾರೆ. ವಿಶೇಷವೆಂದರೆ ಈ ಚುನಾವಣೆಯಲ್ಲಿ ಲೋಕಸಭೆ ಪ್ರವೇಶಿಸಿರುವ ಮೂವರೂ ಮಾಜಿ ಮುಖ್ಯಮಂತ್ರಿಗಳಿಂದ ತೆರವಾಗುತ್ತಿರುವ ವಿಧಾನಸಭೆ ಮತ್ತು ವಿಧಾನಪರಿಷತ್ ಸ್ಥಾನಗಳಿಗೆ ಉಪ ಚುನಾವಣೆ ನಡೆಯಲಿದೆ.

ತಂದೆ ಕ್ಷೇತ್ರದಲ್ಲಿ ಸುನೀಲ್ ಬೋಸ್‌ಗೆ ಲೀಡ್ ಕಮ್ಮಿ!


ಮೈಸೂರು, ಜೂ.4–ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ತಮ್ಮ ಪುತ್ರನನ್ನು ಕಣಕ್ಕಿಳಿಸಿ 1.88 ಲಕ್ಷ ಮತಗಳ ಭಾರಿ ಅಂತರದಲ್ಲಿ ಗೆಲ್ಲಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ತಮ್ಮ ಸ್ವಕ್ಷೇತ್ರ ತಿ.ನರಸೀಪುರದಲ್ಲಿ ಹೆಚ್ಚಿನ ಲೀಡ್ ಕೊಡಿಸುವಲ್ಲಿ ವಿಫಲರಾಗಿದ್ದಾರೆ.

ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಒಳಪಡುವ 7 ವಿಧಾನಸಭಾ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಮಹದೇವಪ್ಪ ಪುತ್ರ ಸುನೀಲ್ ಬೋಸ್ ಅವರಿಗೆ ಭಾರಿ ಲೀಡ್ ದೊರೆತಿದೆ. ವಿಪಕ್ಷ ಜೆಡಿಎಸ್ ಶಾಸಕರಿರುವ ಹನೂರು ವಿಧಾನಸಭಾ ಕ್ಷೇತ್ರದಲ್ಲೂ 36,957 ಮತ ಲೀಡ್ ಪಡೆದಿದ್ದಾರೆ. ವಿಪರ್ಯಾಸವೆಂದರೆ ಹೆಚ್.ಸಿ.ಮಹದೇವಪ್ಪ ಪ್ರತಿನಿಧಿಸುತ್ತಿರುವ ತಿ.ನರಸೀಪುರ ಕ್ಷೇತ್ರದಲ್ಲಿ ಅವರ ಪುತ್ರನಿಗೆ ದೊರೆತಿರುವುದು ಕೇವಲ 2,921 ಲೀಡ್ ಮಾತ್ರ. ಈ ಕ್ಷೇತ್ರದಲ್ಲಿ ಬಿಜೆಪಿಯ ಎಸ್. ಬಾಲರಾಜ್ 73,801 ಮತ ಪಡೆದರೆ, ಸುನೀಲ್ ಬೋಸ್ 76,722 ಮತ ಪಡೆದಿದ್ದಾರೆ. ಮತ್ತೊಂದೆಡೆ ಬಿಜೆಪಿ ಅಭ್ಯರ್ಥಿ ಎಸ್. ಬಾಲರಾಜು ಅವರು ತಮ್ಮ ಸ್ವಕ್ಷೇತ್ರವಾದ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಅವರು ಈ ಕ್ಷೇತ್ರದಲ್ಲಿ ಸುನೀಲ್ ಬೋಸ್‌ಗಿಂತ 33,061 ಮತ ಕಡಿಮೆ ಪಡೆದಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು-ಕೊಡಗು ಕ್ಷೇತ್ರದಲ್ಲಿ ಯದುವೀರ್; ಮಂಡ್ಯದಲ್ಲಿ ಕುಮಾರಸ್ವಾಮಿ; ಚಾ.ನಗರದಲ್ಲಿ ಸುನೀಲ್ ಬೋಸ್; ಹಾಸನದಲ್ಲಿ ಶ್ರೇಯಸ್ ಪಟೇಲ್‌ಗೆ ಗೆಲುವು





ಹೆಚ್.ಡಿ.ಕುಮಾರಸ್ವಾಮಿ



ಶ್ರೇಯಸ್ ಪಟೇಲ್



ಸುನೀಲ್ ಬೋಸ್

ಮೈಸೂರು, ಜೂ.4(ಆರ್‌ಕೆ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮೊದಲ ಪ್ರಯತ್ನದಲ್ಲೇ ಭರ್ಜರಿ ಜಯ ಸಾಧಿಸಿದ್ದಾರೆ. ಅವರು ಕಾಂಗ್ರೆಸ್‌ನ ಎಂ. ಲಕ್ಷ್ಮಣ ವಿರುದ್ಧ 1,39,252 ಮತಗಳ ಅಂತರದಿಂದ ಜಯಭೇರಿ ಬಾರಿಸಿದ್ದಾರೆ.

ಮಂಡ್ಯದಿಂದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಚಾಮರಾಜನಗರದಿಂದ ಸುನೀಲ್ ಬೋಸ್, ಹಾಸನದಿಂದ ಶ್ರೇಯಸ್ ಪಟೇಲ್ ಜಯಶೀಲರಾಗಿದ್ದಾರೆ. ಇವರಲ್ಲಿ ಕುಮಾರಸ್ವಾಮಿ ಹೊರತುಪಡಿಸಿ, ಉಳಿದ ಮೂವರು ಮೊದಲ ಪ್ರಯತ್ನದಲ್ಲೇ ವಿಜಯದ ನಗೆ ಬೀರಿದ್ದಾರೆ.

ಮೈಸೂರಿನ ಪಡುವಾರಹಳ್ಳಿ ಬಳಿ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಸರ್ಕಾರಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಕೇಂದ್ರದಲ್ಲಿ ಇಂದು ನಡೆದ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಮತ ಎಣಿಕೆ ಮುಕ್ತಾಯವಾದಾಗ ಯದುವೀರ್ 7,95,503 ಮತಗಳನ್ನು ಪಡೆದು, ಗೆಲುವು ಸಾಧಿಸಿದರೆ ಅವರ ಸಮೀಪ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಎಂ. ಲಕ್ಷ್ಮಣ 6,56,241 ಮತಗಳನ್ನು ಗಳಿಸಿದ್ದಾರೆ. ಮೊದಲು ನಡೆದ ಅಂಚೆ ಮತ ಎಣಿಕೆಯಲ್ಲಿ ಯದುವೀರ 5,112 ಮತ ಗಳಿಸಿದರೆ, ಲಕ್ಷ್ಮಣಗೆ 2,502 ಮತಗಳು ಲಭಿಸಿದವು. ಅಂಚೆ ಮತದಾನದಲ್ಲೂ 2,610 ಮತಗಳ ಮುನ್ನಡೆ ಸಾಧಿಸಿದ ಯದುವೀರ್, ಇವಿಎಂಗಳಲ್ಲಿ ದಾಖಲಾಗಿದ್ದ ಮತಗಳಲ್ಲೂ ಪ್ರತೀ ಸುತ್ತಿನಲ್ಲೂ ಮುನ್ನಡೆ ಸಾಧಿಸಿದರು.

ಮೊದಲ ಸುತ್ತಿನ ಮತ ಎಣಿಕೆಯಲ್ಲಿ ಯದುವೀರ 41,473 ಮತ ಗಳಿಸಿದರೆ, ಪ್ರತಿಸ್ಪರ್ಧಿ ಲಕ್ಷ್ಮಣ 32,164 ಮತ ಗಳಿಸಿದ್ದರು. ಎರಡನೇ ಸುತ್ತಿನಲ್ಲಿ ಯದುವೀರ 80,758 ಮತ ಪಡೆದರೆ, ಲಕ್ಷ್ಮಣ ಅವರಿಗೆ 64,066 ಮತಗಳು ಲಭಿಸಿದವು.

ಅದೇ ರೀತಿ 5 ಸುತ್ತಿನ ಮತ ಎಣಿಕೆಯಲ್ಲಿ 2,05,891 ಮತಗಳನ್ನು ಯದುವೀರ್ ಪಡೆದರೆ, ಪ್ರತಿಸ್ಪರ್ಧಿ ಲಕ್ಷ್ಮಣಗೆ 1,54,049, 10ನೇ ಸುತ್ತಿನಲ್ಲಿ 3,99,960 ಮತ ಪಡೆದು ಲಕ್ಷ್ಮಣ್‌ಗಿಂತ 79,001 ಮತಗಳ ಅಂತರದಿಂದ ಯದುವೀರ್ ಮುಂದಿದ್ದರು.

ಮುಂದೆ 15ನೇ ಸುತ್ತಿನ ಮತ ಎಣಿಕೆ ನಡೆದಾಗ ಯದುವೀರ್ 5,96,769 ಮತಗಳನ್ನು ಗಳಿಸಿದರೆ, ಸಮೀಪ ಪ್ರತಿಸ್ಪರ್ಧಿ ಲಕ್ಷ್ಮಣಗೆ 4,92,483 ಮತಗಳು ಲಭಿಸಿದವು. ಮಧ್ಯಾಹ್ನ 3 ಗಂಟೆ ವೇಳೆಗೆ 17ನೇ ಸುತ್ತಿನ ಮತ ಎಣಿಕೆ ಮುಕ್ತಾಯವಾದಾಗ 6,73,449 ಮತ ಗಳಿಸಿದ್ದ ಎನ್‌ಡಿಎ ಅಭ್ಯರ್ಥಿ ಯದುವೀರ್ ಕಾಂಗ್ರೆಸ್‌ನ ಲಕ್ಷ್ಮಣರಿಗಿಂತ 1,13,149 ಮತಗಳಿಂದ ಮುಂದಿದ್ದರು.

ಅಂಚೆ ಮತ ಸೇರಿದಂತೆ ಇವಿಎಂ ಮತ ಎಣಿಕೆಯ ಮೊದಲ ಸುತ್ತಿನಲ್ಲಿ ಮುನ್ನಡೆ ಸಾಧಿಸಿದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಯಾವುದೇ ಸುತ್ತಿನಲ್ಲೂ ಹಿಂದೆ ಬೀಳದೆ ನಾಗಾಲೋಟ ಸಾಧಿಸಿದರು. ಅಂತಿಮವಾಗಿ 25ನೇ ಸುತ್ತಿನ ಮತ ಎಣಿಕೆ ಮುಕ್ತಾಯವಾದಾಗ ಯದುವೀರ್ 7,95,503 ಮತಗಳನ್ನು ಪಡೆದು ಗೆಲುವು ಸಾಧಿಸಿದರು. ಕಾಂಗ್ರೆಸ್‌ನ ಲಕ್ಷ್ಮಣ್ 6,56,241 ಮತಗಳನ್ನು ಗಳಿಸಿದರೆ, ಯದುವೀರ್ 1,39,252 ಮತಗಳ ಅಂತರದ ಜಯ ದಾಖಲಿಸಿದರು.

ಉಳಿದಂತೆ, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಕರ್ನಾಟಕ ಜನತಾ ಪಕ್ಷದ ಕದಂಬ ನಾ ಅಂಬರೀಷ 4,080, ಕರುನಾಡು ಪಾರ್ಟಿಯ ಹೆಚ್.ಕೆ. ಕೃಷ್ಣ 1,489, ಸಮಾಜವಾದಿ ಜನತಾ ಪಾರ್ಟಿಯ ಡಾ. ಹೆಚ್.ಎಂ. ನಂಜುಂಡಸ್ವಾಮಿ 523, ಕರ್ನಾಟಕ ರಾಷ್ಟ್ರ ಸಮಿತಿಯ ಎಂ.ಎಸ್. ಪ್ರವೀಣ್ 740, ಸೆಕ್ಯೂಲರ್ ಡೆಮಾಕ್ರಟಿಕ್ ಕಾಂಗ್ರೆಸ್‌ನ ಎ.ಜಿ. ರಾಮಚಂದ್ರರಾವ್ 490, ಉತ್ತಮ ಪ್ರಜಾಕೀಯ ಪಾರ್ಟಿಯ ಲೀಲಾ ಶಿವಕುಮಾರ್ 1,754, ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾದ ಟಿ.ಆರ್. ಸುನಿಲ್ 1,560, ಸೋಷಿಯಲಿಸ್ಟ್ ಪಾರ್ಟಿಯ ಹರೀಶ್‌ಗೌಡ 976, ಪಕ್ಷೇತರ ಅಭ್ಯರ್ಥಿಗಳಾದ ಸಿ.ಜೆ. ಅಂಬೇಡ್ಕರ್ 835, ಕ್ರಿಸ್ಟೋಫರ್ ರಾಜಕುಮಾರ್ 544, ದರ್ಶನ ಕೆ. ಪೊನ್ನೆಟ್ಟಿ 764, ಪಿ.ಎಸ್. ಯಡೂರಪ್ಪ 878, ರಾಜು 1,949, ಎಂ. ರಾಮಮೂರ್ತಿ 3,605, ಎಂ. ರಂಗಸ್ವಾಮಿ 4,306 ಹಾಗೂ ಎ.ಎಸ್. ಸತೀಶ 3,746 ಮತಗಳನ್ನು ಪಡೆದಿದ್ದಾರೆ. ಮತ ಎಣಿಕೆ ಪ್ರಕ್ರಿಯೆ ಮುಗಿಯುತ್ತಿದ್ದಂತೆಯೇ ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಗೆಲುವು ಸಾಧಿಸಿದ ಯದುವೀರ ಕೃಷ್ಣದತ್ತ ಚಾಮರಾಜ ಒಡೆ ಯರ್‌ಗೆ ಪ್ರಮಾಣಪತ್ರ ನೀಡಿ ಅಭಿನಂದಿಸಿದರು.

ಮಂಡ್ಯ: ಹೈವೋಲ್ಟೇಜ್ ಕ್ಷೇತ್ರವಾಗಿದ್ದ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಭರ್ಜರಿ ಜಯ ಗಳಿಸಿದ್ದಾರೆ. ಅವರು 8,51,881 ಮತ ಪಡೆದು ಪ್ರತಿಸ್ಪರ್ಧಿ ಕಾಂಗ್ರೆಸ್‌ನ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪಡೆದ 5,67,261 ಮತಕ್ಕಿಂತ 2,84,620 ಮತ ಅಧಿಕವಾಗಿ ಪಡೆದು ವಿಜಯದ ನಗೆ ಬೀರಿದ್ದಾರೆ. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬಂದಲ್ಲಿ ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗುವ ಸಾಧ್ಯತೆ ಇದೆ. ಹಾಲಿ ಚನ್ನಪಟ್ಟಣ ಶಾಸಕರಾಗಿರುವ ಇವರು, ಸಂಸದರಾಗಿ ಆಯ್ಕೆಯಾಗಿರುವುದರಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದರಿಂದ ಉಪ ಚುನಾವಣೆ ನಡೆಯಲಿದೆ.

ಚಾಮರಾಜನಗರ: ಕಳೆದ ಚುನಾವಣೆಯಲ್ಲಿ ರಾಜಕೀಯ ಮುತ್ಸದ್ದಿ ದಿವಂಗತ ವಿ.ಶ್ರೀನಿವಾಸಪ್ರಸಾದ್ ಗೆಲುವು ಸಾಧಿಸಿದ್ದ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಪುತ್ರ ಸುನೀಲ್ ಬೋಸ್ ಭರ್ಜರಿ ಜಯ ಗಳಿಸಿದ್ದಾರೆ. ಇವರು 7,48,885 ಮತ ಪಡೆದು ತಮ್ಮ ಪ್ರತಿಸ್ಪರ್ಧಿ ಬಿಜೆಪಿಯ ಎಸ್.ಬಾಲರಾಜು ಪಡೆದಿದ್ದ 5,62,965 ಮತಗಳಿಗಿಂತ 1,88,453 ಅಧಿಕ ಮತ ಪಡೆದು ಜಯ ಗಳಿಸಿದ್ದಾರೆ. ಮತ ಎಣಿಕೆಯ ಮೊದಲ ಸುತ್ತಿನಿಂದ ಕೊನೆಯ ಸುತ್ತಿನವರೆಗೂ ಸತತವಾಗಿ ಮುನ್ನಡೆ ಸಾಧಿಸಿದ್ದರು. ಈ ಕ್ಷೇತ್ರಕ್ಕೊಳಪಟ್ಟ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಸುನೀಲ್ ಬೋಸ್ ಅವರೇ ಲೀಡ್ ಸಾಧಿಸಿದ್ದು ವಿಶೇಷ.

ಹಾಸನ: ತೀವ್ರ ಕುತೂಹಲ ಕೆರಳಿಸಿದ್ದ, ಜೆಡಿಎಸ್‌ನ ಭದ್ರಕೋಟೆ ಎಂದೇ ಪರಿಗಣಿಸಲಾಗಿದ್ದ ಹಾಸನ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಜಯ ಗಳಿಸುವ ಮೂಲಕ ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸಲಿದ್ದಾರೆ. ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಲೇಬೇಕೆಂಬ ಉದ್ದೇಶದಿಂದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ರಾಜಕೀಯ ಬದ್ಧವೈರಿ ಎಂದೇ ಹೇಳಲಾಗುತ್ತಿದ್ದ ದಿವಂಗತ ಪುಟ್ಟಸ್ವಾಮಿಗೌಡರ ಮೊಮ್ಮಗ ಶ್ರೇಯಸ್ ಪಟೇಲ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿತ್ತು. ಹಾಲಿ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಆರೋಪ ದಡಿ ಜೈಲು ಸೇರಿದ ಹಿನ್ನೆಲೆಯಲ್ಲಿ ಈ ಕ್ಷೇತ್ರದ ಫಲಿತಾಂಶ ತೀವ್ರ ಕುತೂಹಲ ಕೆರಳಿಸಿತ್ತು. ಮತ ಎಣಿಕೆಯ ಪ್ರಾರಂಭಿಕ ಕೆಲವು ಸುತ್ತುಗಳಲ್ಲಿ ಪ್ರಜ್ವಲ್ ರೇವಣ್ಣ ಮತ್ತು ಶ್ರೇಯಸ್ ಪಟೇಲ್ ಮುನ್ನಡೆಯಲ್ಲಿ ಹಾವು-ಏಣಿ ಆಟ ನಡೆಯಿತಾದರೂ, ಅಂತಿಮವಾಗಿ ಶ್ರೇಯಸ್ ಪಟೇಲ್ 42,649 ಮತಗಳ ಅಂತರದಲ್ಲಿ ಜಯ ಗಳಿಸಿದ್ದಾರೆ.



ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಮತ ಎಣಿಕೆ ಕೇಂದ್ರದಲ್ಲಿ ಮಂಗಳವಾರ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಮೈಸೂರು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪ್ರಮಾಣ ಪತ್ರ ನೀಡಿದರು. ಮತ ಎಣಿಕೆ ವೀಕ್ಷಕ ಮೊಹಮ್ಮದ್ ಇಜಾಜ್, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ, ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ಮುಖಂಡರಾದ ಅರುಣ್‌ಕುಮಾರ್‌ಗೌಡ, ಬಿ.ಎಂ.ರಘು ಚಿತ್ರದಲ್ಲಿದ್ದಾರೆ.

ಮೈಸೂರು ರಾಜವಂಶಸ್ಥರಲ್ಲಿ ತಂದೆ ನಂತರ ಮಗ ಸಂಸದರಾದ ದಾಖಲೆ!

ಮೈಸೂರು,ಜೂ.4(ಎಂಟಿವೈ)- ಮೈಸೂರು ರಾಜಮನೆತನದಲ್ಲಿ ತಂದೆಯ ನಂತರ ಪುತ್ರ ಸಂಸದರಾಗಿ ಆಯ್ಕೆಯಾದ ದಾಖಲೆಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರ್ಪಡೆಯಾದರು. ಈ ಹಿಂದೆ ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್, ಸಂಸದರಾಗಿ ಮೈಸೂರು ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಆರು ಬಾರಿ ಲೋಕಸಭಾ ಚುನಾವಣೆಯನ್ನು ಎದುರಿಸಿ, ನಾಲ್ಕು ಬಾರಿ ಸಂಸದರಾಗಿ ಆಯ್ಕೆಯಾಗಿದ್ದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಉತ್ತರಾಧಿಕಾರಿಯಾಗಿರುವ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮೊದಲ ಪ್ರಯತ್ನದಲ್ಲಿಯೇ ಸಂಸದರಾಗಿ ಆಯ್ಕೆಯಾಗುವ ಮೂಲಕ ಗಮನ ಸೆಳೆದಿದ್ದಾರೆ. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ 1984, 1989, 1996 ಹಾಗೂ 1999ರಲ್ಲಿ ಸಂಸದರಾಗಿದ್ದರು. 1991 ಹಾಗೂ 2004 ಪರಾಭವಗೊಂಡಿದ್ದರು. ಆ ನಂತರ ರಾಜಕೀಯದಿಂದ ಅಂತರ ಕಾಯ್ದುಕೊಂಡಿದ್ದರು. ಬಳಿಕ ಸಿ.ಹೆಚ್.ವಿಜಯಶಂಕರ್, ಅಡಗೂರು ಹೆಚ್.ವಿಶ್ವನಾಥ್ ಹಾಗೂ ಪ್ರತಾಪ ಸಿಂಹ ಮೈಸೂರು ಸಂಸದರಾಗಿ ಆಯ್ಕೆಯಾಗಿದ್ದರು. 25 ವರ್ಷದ ಬಳಿಕ ಮತ್ತೆ ಅಧಿಕಾರದ ಗದ್ದುಗೆ ಅರಮನೆ ಅಂಗಳಕ್ಕೆ ಒಲಿದಿದೆ. ರಾಜವಂಶಸ್ಥರಾಗಿರುವ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಆಯ್ಕೆಯಾಗುವ ಮೂಲಕ ತಂದೆಯ ಹಾದಿಯಲ್ಲೇ ರಾಜಕೀಯ ಕ್ಷೇತ್ರದಲ್ಲಿ ಮೈಲಿಗಲ್ಲು ಸ್ಥಾಪಿಸಲು ಅಣಿಯಾಗಿದ್ದಾರೆ.

ಯದುವೀರ್‌ಗೆ ಅಭಿನಂದನೆ, ಮತದಾರರಿಗೆ ಧನ್ಯವಾದ ತಿಳಿಸಿದ ಮಾಜಿ ಮೇಯರ್ ಸಂದೇಶ್‌ಸ್ವಾಮಿ



ಮೈಸೂರು,ಜೂ.4(ಪಿಎಂ)- ಮೈಸೂರು-ಕೊಡಗು ಕ್ಷೇತ್ರದಿಂದ ಸಂಸದರಾಗಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಆಯ್ಕೆ ಮಾಡಿದ ಎಲ್ಲಾ ಮತದಾರರಿಗೂ ಧನ್ಯವಾದ ತಿಳಿಸಿರುವ ಬಿಜೆಪಿ ಮುಖಂಡರೂ ಆದ ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಯದುವೀರ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ನರಸಿಂಹರಾಜ ಕ್ಷೇತ್ರದಲ್ಲಿ 64 ಸಾವಿರಕ್ಕೂ ಅಧಿಕ ಮತಗಳನ್ನು ಭಾರತೀಯ ಜನತಾ ಪಕ್ಷಕ್ಕೆ ನೀಡಿರುವ ಮತದಾರರು ಮತ್ತು ಪಕ್ಷದ ಗೆಲುವಿಗೆ ಅವಿರತವಾಗಿ ಶ್ರಮಿಸಿದ ಎಲ್ಲಾ ಮುಖಂಡರು ಹಾಗೂ ಕಾರ್ಯಕರ್ತರಿಗೂ ಅವರು ಧನ್ಯವಾದ ತಿಳಿಸಿದ್ದಾರೆ. ಮೈಸೂರು ರಾಜಮನೆತನದ ಮೇಲೆ ಜನತೆ ವಿಶ್ವಾಸವಿರಿಸಿ ಯದುವೀರರನ್ನು ಲೋಕಸಭೆಗೆ ಆಯ್ಕೆ ಮಾಡಿದ್ದಾರೆ. ನೂತನ ಸಂಸದರಾದ ಯದುವೀರರು ಮತದಾರರ ನಿರೀಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸಿ ಮೈಸೂರು ಮತ್ತು ಕೊಡಗು ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ಶ್ರಮಿಸುವ ವಿಶ್ವಾಸವಿದೆ. ಯದುವೀರರಿಗೆ ಬೆಂಬಲವಾಗಿ ನಾವು ಸದಾ ನಿಲ್ಲುತ್ತೇವೆ. ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ತಾಯಿ ಯದುವೀರರಿಗೆ ಶಕ್ತಿಯನ್ನು ದಯಪಾಲಿಸಲಿ ಎಂದು ಸಂದೇಶ್‌ಸ್ವಾಮಿ ಪ್ರಕಟಣೆಯಲ್ಲಿ ಆಶಿಸಿದ್ದಾರೆ.

ಯದುವೀರ್ ಗೆಲುವು ಖಾತರಿಯಾಗುತ್ತಿದ್ದಂತೆ ಬಿಜೆಪಿ ಮಹಿಳಾ ಕಾರ್ಯಕರ್ತರ ವಿಜಯೋತ್ಸವ



ಮೈಸೂರು, ಜೂ.4(ಎಂಕೆ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಗೆಲುವು ಖಾತರಿಯಾಗುತ್ತಿದ್ದಂತೆ ಬಿಜೆಪಿ ಮಹಿಳಾ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ನಗರದ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಹಿಂಭಾಗ ಜಮಾಯಿಸಿದ ಬಿಜೆಪಿ ಮಹಿಳಾ ಕಾರ್ಯಕರ್ತರು, ತಮ್ಮ ಅಭ್ಯರ್ಥಿ ಗೆಲುವು ಖಾತರಿಯಾಗುತ್ತಿದ್ದಂತೆ ಸಂಭ್ರಮಿಸಿದರು. ಪರಸ್ಪರ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಈ ವೇಳೆ ಬಿಜೆಪಿ ಮಹಿಳಾ ಮುಖಂಡರಾದ ಲೀಲಾವತಿ ಶೆಣೈ ಮಾತನಾಡಿ, ಸಿದ್ದರಾಮಯ್ಯ ತವರಿನಲ್ಲಿ ಯದುವೀರ್ ಅವರು, ಲಕ್ಷಕ್ಕೂ ಹೆಚ್ಚು ಮತಗಳಿಂದ ಜಯಶೀಲರಾಗಿದ್ದಾರೆ. ಮೈಸೂರು ಮಹಾರಾಜರ ಗೆಲುವು ನಮ್ಮೆಲ್ಲರ ಗೆಲುವು ಎಂಬುದನ್ನು ಮೈಸೂರು-ಕೊಡಗು ಜನತೆ ಸಾಬೀತು ಮಾಡಿದ್ದಾರೆ. ಚುನಾವಣೆ ಘೋಷಣೆಯಾದಾಗಿನಿಂದ ಸ್ವಯಂಪ್ರೇರಿತವಾಗಿ ಕೆಲಸ ಮಾಡಿದ್ದೇವೆ. ಜನರೂ ಮಹಾರಾಜರ ಮೇಲಿನ ಅಭಿಮಾನದಿಂದ ನಮ್ಮೊಂದಿಗೆ ಸೇರಿ ಗೆಲ್ಲಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು. ಸರಸ್ವತಿ, ಕೆ.ರುಕ್ಮಿಣಿ, ಅನೀತಾ (ಅನು), ಛಾಯಾ ಮತ್ತಿತರರಿದ್ದರು.

ಜೆಡಿಎಸ್-ಬಿಜೆಪಿ ಸಂಘಟನೆಗೆ ಸಿಕ್ಕ ಗೆಲುವು

ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ



ಮೈಸೂರು,ಜೂ.4(ಪಿಎಂ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಭಾರಿ ಅಂತರದಲ್ಲಿ ಗೆಲುವು ಸಾಧಿಸಿರುವ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಅಭಿನಂದನೆ ತಿಳಿಸಿರುವ, ಬಿಜೆಪಿ ಮೈಸೂರು ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಜೆಡಿಎಸ್-ಬಿಜೆಪಿ ಮುಖಂಡರು, ಕಾರ್ಯಕರ್ತರ ಸಂಘಟನೆಗೆ ಸಿಕ್ಕ ಗೆಲುವು ಇದಾಗಿದೆ ಎಂದು ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಬಿಜೆಪಿ ಮತ್ತು ಜೆಡಿಎಸ್ ನಾಯಕರು, ಕಾರ್ಯಕರ್ತರು ಶ್ರಮಿಸಿದ್ದಾರೆ. ಶಾಸಕ ಜಿ.ಟಿ.ದೇವೇಗೌಡರು, ಇವರ ಪುತ್ರರೂ ಆದ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರು, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ ಸೇರಿದಂತೆ ನಮ್ಮೆಲ್ಲ ಮುಖಂಡರು ಹಾಗೂ ಕಾರ್ಯಕರ್ತರ ಪರಿಶ್ರಮ ಗೆಲುವಿಗೆ ಶ್ರೀರಕ್ಷೆಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ವಿಜಯೇಂದ್ರರ ಶ್ರಮಕ್ಕೆ ತಕ್ಕ ಫಲ: ರಾಜ್ಯದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಕಡಿಮೆ ಅವಧಿಯಲ್ಲೂ ಇಡೀ ರಾಜ್ಯದಲ್ಲಿ ಸಂಚರಿಸಿ ಪ್ರಚಾರ ನಡೆಸಿದ್ದರು. ಮೈಸೂರಿಗೂ ಹಲವು ಬಾರಿ ಭೇಟಿ ನೀಡಿದ್ದರು. ಅವರು ತಮ್ಮ ತಂದೆ ಬಿ.ಎಸ್.ಯಡಿಯೂರಪ್ಪ ಅವರಂತೆಯೇ ಪಕ್ಷ ಸಂಘಟಿಸಿ, ರಾಜ್ಯದಲ್ಲಿ ಬಿಜೆಪಿ 17 ಸ್ಥಾನಗಳಲ್ಲಿ ಗೆಲುವು ಸಾಧಿಸಲು ಶ್ರಮಿಸಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ನಡುವೆಯೂ ವಿಜಯೇಂದ್ರ ಅವರ ಶ್ರಮಕ್ಕೆ ಫಲ ಸಿಕ್ಕಿದ್ದು, ವಿಶೇಷವಾಗಿ ಯುವ ಜನತೆ ವಿಜಯೇಂದ್ರರ ನಾಯಕತ್ವ ಬೆಂಬಲಿಸಲಿದ್ದಾರೆ ಎಂದು ತಿಳಿಸಿದರು.

ಯದುವೀರ್ ಗೆಲುವಿಗೆ ಶ್ರೀಧರ್ ನೇತೃತ್ವದಲ್ಲಿ ಕಾರ್ಯಕರ್ತರ ಸಂಭ್ರಮ





ಮೈಸೂರು, ಜೂ.4(ಎಂಕೆ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ವಿಜಯ ಸಾಧಿಸಿದ ಹಿನ್ನೆಲೆಯಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್, ಚಾಮರಾಜ ವಿಧಾನಸಭಾ ಕ್ಷೇತ್ರದ ಜೆಡಿಎಸ್-ಬಿಜೆಪಿ ಕಾರ್ಯಕರ್ತರೊಡಗೂಡಿ ಸಿಹಿ ವಿತರಿಸಿ, ಸಂಭ್ರಮಿಸಿದರು.

ನಗರದ ಒಂಟಿಕೊಪ್ಪಲು ದೇವಸ್ಥಾನದ ಎದುರು ಜಮಾವಣೆಗೊಂಡು ಪರಸ್ಪರ ಸಿಹಿ ತಿನಿಸಿ, ಯದುವೀರ್ ಅವರ ವಿಜಯೋತ್ಸವವನ್ನು ಆಚರಿಸಿದರು. ನಂತರ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಯದುವೀರ್ ಅವರಿಗೆ ಉಡುಗೊರೆಯಾಗಿ ಗಿಡ ನೀಡುವ ಮೂಲಕ ಅಭಿನಂದಿಸಲಾಯಿತು. ಈ ವೇಳೆ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಹಾಗೂ ಪರಿಸರ ಸುಸ್ಥಿರತೆ ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಅರಣ್ಯ ನಾಶದಿಂದ ಉಷ್ಣಾಂಶ ಹೆಚ್ಚಾಗುತ್ತಿದ್ದು, ಬರಗಾಲ ಆವರಿಸುತ್ತಿದೆ. ಆದ್ದರಿಂದ ಪರಿಸರ ಉಳಿಸುವ ಕಾರ್ಯದಲ್ಲಿ ನಾವೆಲ್ಲರೂ ತೊಡಗಿಸಿಕೊಳ್ಳಬೇಕು. ಹಾಗೆಯೇ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿ ಯದುವೀರ್ ಅವರ ಗೆಲುವು ನಮ್ಮೆಲ್ಲರ ಗೆಲುವಾಗಿದೆ. ಚಾಮರಾಜ ವಿಧಾನಸಭಾ ಕ್ಷೇತ್ರದ ಮತದಾರರು ಹೆಚ್ಚಿನ ಲೀಡ್ ನೀಡುವ ಮೂಲಕ ತಮ್ಮ ಸಂಸದರನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ ಎಂದರು. ದುಷ್ಯಂತ್ ರಾಯ್, ಯೋಗೇಶ್ ಮತ್ತಿತರರಿದ್ದರು.

ಮೈಸೂರು-ಕೊಡಗು ಕ್ಷೇತ್ರದಲ್ಲಿ ಕಾಂಗ್ರೆಸ್ ಹಿನ್ನಡೆ ತಾತ್ಕಾಲಿಕ

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್

ಮೈಸೂರು,ಜೂ.4(ಪಿಎಂ)- ಚಾಮರಾಜನಗರ ಲೋಕಸಭೆ ಕ್ಷೇತ್ರದಲ್ಲಿ ಸುನಿಲ್ ಬೋಸ್ ದೊಡ್ಡ ಮಟ್ಟದ ಅಂತರದಲ್ಲಿ ಜಯ ಸಾಧಿಸಿದ್ದು, ಅವರಿಗೆ ಅಭಿನಂದನೆ ತಿಳಿಸಿರುವ ಕಾಂಗ್ರೆಸ್ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಹಿನ್ನಡೆ ತಾತ್ಕಾಲಿಕ ಎಂದು ತಿಳಿಸಿದ್ದಾರೆ. ನನ್ನ ವ್ಯಾಪ್ತಿಗೆ ಬರುವ ಚಾಮರಾಜನಗರ ಲೋಕಸಭಾ ಕ್ಷೇತ್ರದ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ನಂಜನಗೂಡು, ವರುಣ ಹಾಗೂ ಟಿ.ನರಸೀಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಭಾರಿ ಮತಗಳನ್ನು ಜನತೆ ನೀಡಿದ್ದಾರೆ. ಈ ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ಸಂಘಟಿತ ಹೋರಾಟಕ್ಕೆ ದೊಡ್ಡ ಜಯ ಸಿಕ್ಕಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.



ನಿರಂಕುಶ ಪ್ರಭುತ್ವ ಯುಗಾಂತ್ಯ: ಇನ್ನು ರಾಷ್ಟ್ರದಲ್ಲಿ ಸಂವಿಧಾನದ ಸಾರ್ವಭೌಮತ್ವದ ಮುಂದೆ ನಿರಂಕುಶ ಪ್ರಭುತ್ವ ಯುಗಾಂತ್ಯ ಆರಂಭವಾಗಿದೆ. ಕಳೆದ 10 ವರ್ಷಗಳ ಬಿಜೆಪಿ ಆಡಳಿತದಲ್ಲಿ ಪ್ರಜಾತಂತ್ರ ವ್ಯವಸ್ಥೆಗೆ ವಿರುದ್ಧವಾಗಿ ಏಕವ್ಯಕ್ತಿಯ ನಿರ್ಧಾರಕ್ಕೆ ಒತ್ತು ನೀಡುವ ಮೂಲಕ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ದೊಡ್ಡಮಟ್ಟದ ಕಂದಕ ಉಂಟು ಮಾಡಲಾಗಿದೆ. ಹೀಗಾಗಿ ರಾಷ್ಟ್ರದ ಜನತೆ, ನರೇಂದ್ರ ಮೋದಿ ಅವರ ವಿರುದ್ಧ ಮಹತ್ವದ ಐತಿಹಾಸಿಕ ತೀರ್ಮಾನವನ್ನು ಈ ಲೋಕಸಭಾ ಚುನಾವಣೆಯಲ್ಲಿ ನೀಡಿದ್ದಾರೆ. ಇದಕ್ಕಾಗಿ ದೇಶದ ಜನತೆಗೆ ಅಭಿನಂದಿಸುವುದಾಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಹುಲ್ ಗಾಂಧಿಗೆ ಫಲ ನೀಡಿದ ಭಾರತ್ ಜೋಡೋ ಯಾತ್ರೆ ಪ್ರಚಾರ



ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕನ್ಯಾಕುಮಾರಿಯಿಂದ ಜಮ್ಮು-ಕಾಶ್ಮೀರದವರೆಗೆ ರಾಹುಲ್ ಗಾಂಧಿ ನಡೆಸಿದ ಭಾರತ್ ಜೋಡೋ ಯಾತ್ರೆ ಫಲ ನೀಡಿದೆ ಎಂದೇ ಹೇಳಲಾಗುತ್ತಿದೆ. ಹಾಗಾಗಿ ಕಾಂಗ್ರೆಸ್ 98 ಸ್ಥಾನ ಪಡೆದಿದೆ. ಮಣಿಪುರ ಹಿಂಸಾಚಾರದ ಸಮಯದಲ್ಲಿ ಭಾರತ್ ಜೋಡೋ ನ್ಯಾಯಯಾತ್ರೆಯನ್ನು ರಾಹುಲ್ ಗಾಂಧಿ ಹಮ್ಮಿಕೊಂಡಿದ್ದರು. ಭಾರತದ ಉದ್ದಗಲಕ್ಕೂ ಕಾಲ್ನಡಿಗೆ ಹಾಗೂ ವಾಹನದಲ್ಲಿ ಯಾತ್ರೆ ನಡೆಸಿದ ರಾಹುಲ್ ಗಾಂಧಿ ಪ್ರತಿಯೊಂದು ಜಿಲ್ಲೆಯನ್ನು ಸಂಪರ್ಕಿಸಿದ್ದರು. ಈ ಸಂದರ್ಭದಲ್ಲಿ ಕೇಂದ್ರದ ಬಿಜೆಪಿ ಸರ್ಕಾರದ ವೈಫಲ್ಯತೆಗಳನ್ನು ಪಟ್ಟಿ ಮಾಡಿ ಜನತೆಗೆ ಮನವರಿಕೆ ಮಾಡಿದ್ದರು. ಇದರ ಪರಿಣಾಮ ಕಳೆದ ಬಾರಿ 52 ಸ್ಥಾನ ಇದ್ದ ಕಾಂಗ್ರೆಸ್ ಈ ಬಾರಿ 98 ಸ್ಥಾನಕ್ಕೇರಿತು. ಕಾಂಗ್ರೆಸ್ ಶಕ್ತಿಯನ್ನು ವೃದ್ಧಿಗೊಳಿಸುವ ಜೊತೆಗೆ ಇಂಡಿಯಾ ಮೈತ್ರಿಕೂಟದ ಪಕ್ಷಗಳನ್ನು ಒಂದುಗೂಡಿಸಿದರು. ಇದರಿಂದ ಇಂದು ಇಂಡಿಯಾ ಮೈತ್ರಿಕೂಟ ಒಟ್ಟಾರೆ 235 ಸ್ಥಾನ ಪಡೆದಿದೆ.

ಹೋಟೆಲ್ ಮಾಲೀಕರ ಸಂಘದ ಕಚೇರಿಯಲ್ಲಿ ಫಲಿತಾಂಶದ ರೋಚಕತೆ

ಮೈಸೂರು, ಜೂ.4(ಎಂಕೆ)- ಮೈಸೂರು ಹೋಟೆಲ್ ಮಾಲೀಕರ ಸಂಘದ ಕಚೇರಿಯಲ್ಲಿ ಕ್ಷಣ ಕ್ಷಣದ ರೋಚಕ ಕುತೂಹಲ ನೀಡಿದ ಲೋಕಸಭಾ ಚುನಾವಣೆ ಫಲಿತಾಂಶವನ್ನು ಬೃಹತ್ ಪರದೆಯಲ್ಲಿ ವೀಕ್ಷಣೆ ಮಾಡಲಾಯಿತು.

ಲೋಕಸಭಾ ಚುನಾವಣಾ ಫಲಿತಾಂಶದ ಕ್ಷಣ ಕ್ಷಣದ ಮಾಹಿತಿಯ ವೀಕ್ಷಣೆ ನಡುವೆ ರಾಜಕೀಯ ನಾಯಕರು ಸೋಲು-ಗೆಲುವಿನ ಲೆಕ್ಕಾಚಾರ ಕುರಿತು ಚರ್ಚಿಸಿದರು. ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸಂಘ ಟ್ರಸ್ಟ್‌ನ ಅಧ್ಯಕ್ಷ ರವಿಶಾಸ್ತ್ರಿ, ಸೊಸೈಟಿ ಅಧ್ಯಕ್ಷ ಎನ್.ವಿ.ಹೆಗಡೆ, ಸಂಘದ ಪ್ರಭಾಕರ, ಕೆ.ಎಸ್.ಅರುಣ್, ಹೇಮಂತ್, ಪ್ರವೀಣ, ಮಂಜುನಾಥ, ಮರಿದೇವರು, ಗಿರೀಶ್, ಮಹದೇವ, ಟಿ.ಆರ್.ಸುರೇಶ್, ಕುಳ್ಳೇಗೌಡ, ಪ್ರತಾಪ್ ಕುಮಾರ್, ಆನಂದಶೆಟ್ಟಿ, ಎ.ಸಿ.ರವಿ, ಚಂದ್ರಶೇಖರ್ ಶೆಟ್ಟಿ ಮತ್ತಿತರರಿದ್ದರು.

ಹಾಗೆಯೇ ವಿವಿಧ ಸಂಘ-ಸಂಸ್ಥೆಗಳ ಕಚೇರಿಯಲ್ಲಿ ಬೃಹತ್ ಪರದೆ ಅಳವಡಿಸಿ ಚುನಾವಣಾ ಫಲಿತಾಂಶ ವೀಕ್ಷಣೆ ಮಾಡಲಾಯಿತು. ಜೊತೆಗೆ ಬೆಳಗ್ಗೆಯಿಂದಲೇ ಬಹುತೇಕರು ಟಿವಿ ಮುಂದೆ ಕುಳಿತರೆ, ಆನ್‌ಲೈನ್ ಮೂಲಕ ಚುನಾವಣಾ ಫಲಿತಾಂಶದ ಮಾಹಿತಿ ಪಡೆದರು. ಅಷ್ಟೇ ಅಲ್ಲದೆ ಕರ್ತವ್ಯ ನಿರ್ವಹಣೆಯಲ್ಲಿದ್ದ ಪೊಲೀಸ್ ಸಿಬ್ಬಂದಿ, ರಸ್ತೆ ವ್ಯಾಪಾರಸ್ಥರು, ಉದ್ಯಮಿಗಳು ಕೂಡ ಆನ್‌ಲೈನ್‌ನಲ್ಲಿ ಲೈವ್ ಆಗಿ ನ್ಯೂಸ್ ಚಾನಲ್‌ಗಳ ಮೂಲಕ ಚುನಾವಣಾ ಫಲಿತಾಂಶ ವೀಕ್ಷಣೆ ಮಾಡುತ್ತಿದ್ದ ದೃಶ್ಯಗಳು ಅಲ್ಲಲ್ಲಿ ಕಂಡುಬಂದವು.



ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆ-2024

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಪ್ರಚಂಡ ಜಯಭೇರಿ

ಮಂಡ್ಯ, ಜೂ.4(ಮೋಹನ್‌ರಾಜ್)– ರಾಜ್ಯದಲ್ಲೇ ತೀವ್ರ ಕುತೂಹಲ ಕೆರಳಿಸಿದ್ದ ಮಂಡ್ಯ ಲೋಕಸಭಾ ಕ್ಷೇತ್ರದ ಫಲಿತಾಂಶ ಮಂಗಳವಾರ ಹೊರಬಿದ್ದಿದ್ದು, ಮಾಜಿ ಮುಖ್ಯಮಂತ್ರಿಯೂ ಆದ ಜೆಡಿಎಸ್ ಅಭ್ಯರ್ಥಿ ಹೆಚ್.ಡಿ. ಕುಮಾರಸ್ವಾಮಿ 2,84,620 ಮತಗಳ ಭಾರಿ ಅಂತರದ ಗೆಲುವು ಸಾಧಿಸುವ ಮೂಲಕ ರಾಜ್ಯದಲ್ಲೇ ಅತಿ ಹೆಚ್ಚು ಅಂತರದಲ್ಲಿ ಗೆದ್ದ ಕೀರ್ತಿಗೆ ಭಾಜನರಾಗಿ ಇತಿಹಾಸ ಸೃಷ್ಟಿಸಿದ್ದಾರೆ.


- ಹೆಚ್ಡಿಕೆ ಪಡೆದ ಮತ: 8,51,881, ಚಂದ್ರು ಪಡೆದ ಮತ: 5,67,261
- ಒಂದು ಸುತ್ತಿನಲ್ಲೂ ಮುನ್ನಡೆ ಕಾಯ್ದುಕೊಳ್ಳದ ಕಾಂಗ್ರೆಸ್‌ನ ಸ್ಟಾರ್‌ಚಂದ್ರು

ಮಂಡ್ಯ ಲೋಕಸಭಾ ಚುನಾವಣೆಗೆ ಒಟ್ಟು 14 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಈ ಪೈಕಿ ಜೆಡಿಎಸ್– ಬಿಜೆಪಿ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಕಾಂಗ್ರೆಸ್‌ನ ಸ್ಟಾರ್ ಚಂದ್ರು (ವೆಂಕಟ ರಮಣೇಗೌಡ) ನಡುವೆ ನೇರ ಹಣಾಹಣಿ ಏರ್ಪಟ್ಟಿತ್ತು. ಈ ಹಣಾಹಣಿಯಲ್ಲಿ ಕುಮಾರಸ್ವಾಮಿ 8,51,881 ಮತ ಪಡೆದರೆ, ಕಾಂಗ್ರೆಸ್‌ನ ಸ್ಟಾರ್ ಚಂದ್ರು 5,67,261 ಮತ ಪಡೆದಿದ್ದಾರೆ.

ಒಂದು ಸುತ್ತಿನಲ್ಲೂ ಮುನ್ನಡೆ ಪಡೆಯದ ಚಂದ್ರು: ಮಂಡ್ಯ ನಗರದ ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆಯ ಮತ ಎಣಿಕೆಯಲ್ಲಿ ಒಟ್ಟು 20 ಸುತ್ತಿನ ಮತ ಎಣಿಕೆ ಆರಂಭಿಕ ಸುತ್ತಿನಿಂದಲೂ ಕುಮಾರಸ್ವಾಮಿ ಮುನ್ನಡೆ ಕಾಯ್ದುಕೊಳ್ಳುತ್ತ ಬಂದರು. ಆರಂಭಿಕ ಸುತ್ತಿನಲ್ಲಿ ಕನಿಷ್ಠ 20 ಸಾವಿರದ ಮೇಲೆ ಮುನ್ನಡೆ ಕಾಯ್ದುಕೊಂಡು ಬಂದ ಕುಮಾರಸ್ವಾಮಿ, ಆರಂಭಿಕ ಆರೇಳು ಸುತ್ತಿನಲ್ಲೇ ಅವರ ಗೆಲುವು ಖಾತ್ರಿಯಾಗಿತ್ತು. ಇನ್ನು ಕಾಂಗ್ರೆಸ್‌ನ ಸ್ಟಾರ್ ಚಂದ್ರು ಒಂದೇ ಒಂದು ಸುತ್ತಿನಲ್ಲೂ ಸಹ ಮುನ್ನಡೆ ಕಾಯ್ದುಕೊಳ್ಳುವಲ್ಲಿ ವಿಫಲರಾದರು.

ಇವಿಎಂ ಮತ ಎಣಿಕೆ ಆರಂಭವಾದ ಮೊದಲ ಸುತ್ತಿನಲ್ಲೇ ಭಾರಿ ಮುನ್ನಡೆ ಕಾಯ್ದುಕೊಂಡರು. ಮೊದಲ ಸುತ್ತಿನಲ್ಲಿ ಹೆಚ್ಡಿಕೆ 27,795 ಮತ ಪಡೆದರೆ, ಕಾಂಗ್ರೆಸ್‌ನ ಸ್ಟಾರ್ ಚಂದ್ರು 14,853 ಮತ ಪಡೆದರು. ಈ ಮೂಲಕ ಮೊದಲ ಸುತ್ತಿನಲ್ಲೇ ಕುಮಾರಸ್ವಾಮಿ 12,942 ಮತಗಳ ಮುನ್ನಡೆ ಪಡೆದುಕೊಂಡರು. ನಂತರದ ಸುತ್ತಿನಲ್ಲಿ ಈ ಮುನ್ನಡೆ ಕಡಿಮೆಯಾಗಲೇ ಇಲ್ಲ. ಹತ್ತನೇ ಸುತ್ತಿನ ಹೊತ್ತಿಗೆ ಕುಮಾರಸ್ವಾಮಿ 5,12,848 ಮತ ಪಡೆದರೆ, ಸ್ಟಾರ್ ಚಂದ್ರು 3,19,210 ಮತ ಪಡೆದರು. ಅಲ್ಲಿಗೆ ಕುಮಾರಸ್ವಾಮಿ ಅವರ ಮುನ್ನಡೆ 1,93,638 ದಾಟಿತ್ತು. 20ನೇ ಸುತ್ತಿನಲ್ಲಿ 2,84,620 ಮತಗಳ ಅಂತರದಿಂದ ವಿಜಯಶಾಲಿಯಾದರು.

ಮತ ಎಣಿಕಾ ಕೇಂದ್ರಕ್ಕೆ ದಳಪತಿಗಳ ದಂಡು: ಬೆಳಿಗ್ಗೆ 10.30ರ ಹೊತ್ತಿಗೆ ಕುಮಾರಸ್ವಾಮಿ ಅವರ ಗೆಲುವು ಖಚಿತವಾಗುತ್ತಿದ್ದಂತೆಯೇ ಜೆಡಿಎಸ್ ನಾಯಕರ ದಂಡೇ ಮಂಡ್ಯ ನಗರದ ಮಂಡ್ಯ ವಿವಿ ಕಡೆಗೆ ಆಗಮಿಸಿತು. ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಶಾಸಕ ಹೆಚ್.ಟಿ. ಮಂಜು, ಮಾಜಿ ಶಾಸಕರಾದ ಕೆ.ಸುರೇಶ್ ಗೌಡ, ರವೀಂದ್ರ ಶ್ರೀಕಂಠಯ್ಯ, ಕೆ.ಟಿ. ಶ್ರೀಕಂಠೇಗೌಡ, ಡಾ.ಕೆ.ಅನ್ನದಾನಿ, ಮುಖಂಡರಾದ ಬಿ.ಆರ್.ರಾಮಚಂದ್ರು, ಡಿ.ರಮೇಶ್, ಕೆ.ಕೆ.ಕೃಷ್ಣಪ್ಪ, ರಘುನಂದನ್ ಸೇರಿದಂತೆ ಹಲವು ಮಂದಿ ಜಮಾಯಿಸಿದರು.



ಚುನಾವಣಾಧಿಕಾರಿ ಡಾ. ಕುಮಾರ ಅವರಿಂದ ನೂತನ ಸಂಸದ ಹೆಚ್.ಡಿ. ಕುಮಾರಸ್ವಾಮಿ ಪ್ರಮಾಣಪತ್ರ ಪಡೆಯುತ್ತಿರುವುದು.

ಕಾರ್ಯಕರ್ತರ ವಿಜಯೋತ್ಸವ: ಕುಮಾರಸ್ವಾಮಿ ಗೆಲುವು ಸಾಧಿಸುವುದು ಖಚಿತವಾಗುತ್ತಿದ್ದಂತೆಯೇ ಮಂಡ್ಯ ವಿವಿ ಆವರಣದಲ್ಲಿ ಜಮಾಯಿಸಿದ ಸಾವಿರಾರು ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಜೆಡಿಎಸ್, ಬಿಜೆಪಿ ಬಾವುಟಗಳನ್ನು ಹಿಡಿದು ಕುಮಾರಸ್ವಾಮಿ ಅವರಿಗೆ ಜೈಕಾರ ಕೂಗಿದರು. ಜೊತೆಗೆ ಹೆಚ್ಡಿಕೆ ಭಾವಚಿತ್ರವನ್ನು ಹಾಕಿಕೊಂಡು ನಗರದ ವಿವಿಧೆಡೆ ಬೈಕ್ ರ್‍ಯಾಲಿ ಮಾಡುತ್ತಿದ್ದ ದೃಶ್ಯಗಳು ಸಹ ಕಂಡು ಬಂದವು.

ಸರ್ಟಿಫಿಕೇಟ್ ಪಡೆದ ಹೆಚ್ಡಿಕೆ: ಸಂಜೆ 5 ಗಂಟೆ ಹೊತ್ತಿಗೆ ಮಂಡ್ಯ ವಿವಿ ಆವರಣಕ್ಕೆ ಆಗಮಿಸಿದ ನೂತನ ಸಂಸದ ಹೆಚ್.ಡಿ. ಕುಮಾರಸ್ವಾಮಿ ಚುನಾವಣಾಧಿಕಾರಿ ಡಾ. ಕುಮಾರ ಅವರಿಂದ ಚುನಾವಣಾ ಗೆಲುವಿನ ಸರ್ಟಿಫಿಕೇಟ್ ಪಡೆದುಕೊಂಡರು. ಈ ಸಂದರ್ಭದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಿದ್ದಾರೆ

ಎಣಿಕಾ ಕೇಂದ್ರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಂಡ್ಯ ಅಂದರೆ ಇಂಡಿಯಾ ಅಂತಾರೆ. ಮಂಡ್ಯ ಜಿಲ್ಲೆಯ ಮತದಾರರು ಪ್ರಬುದ್ಧರು ಎಂಬುದು ಮತ್ತೆ ಸಾಬೀತಾಗಿದೆ. ಯಾರಿಗೆ ಯಾವಾಗ ಬುದ್ಧಿ ಕಲಿಸಬೇಕೋ ಕಲಿಸಿದ್ದು, ಸದ್ಯ ಕಾಂಗ್ರೆಸ್ ಪಕ್ಷದವರಿಗೆ ಮಂಡ್ಯ ಜನ ಬುದ್ಧಿ ಕಲಿಸಿದ್ದಾರೆ. ಕುಮಾರಸ್ವಾಮಿಯವರ ಜನಪರ ಕೆಲಸಗಳು ಗೆಲುವಿಗೆ ಕಾರಣವಾಗಿದೆ. ಮಂಡ್ಯ ಜಿಲ್ಲೆಯ ಮತದಾರರ ಬಂಧುಗಳಿಗೆ ಧನ್ಯವಾದ ಅರ್ಪಿಸುವೆ ಎಂದರು.

ಹೊಸ ಯುಗ ಮಂಡ್ಯದಲ್ಲಿ ಆರಂಭವಾಗಿದ್ದು, ನಿಖಿಲ್ ಸತತ ಸೋಲಿನಿಂದ ನೋವಲ್ಲಿದ್ದ ದೇವೇಗೌಡರ ಕುಟುಂಬಕ್ಕೆ ಮಂಡ್ಯ ಜನ ಶಕ್ತಿ ತುಂಬಿದ್ದಾರೆ. ಕಾಂಗ್ರೆಸ್ ಬಂಡವಾಳ ಈ ಚುನಾವಣೆಯಲ್ಲಿ ಗೊತ್ತಾಗಿದೆ. ಈ ಸರ್ಕಾರದ ಮುಂದುವರೆಯುವುದು ಕಷ್ಟವಿದೆ. ಮುಂದೆ ಏನೆಲ್ಲಾ ಬೆಳವಣಿಗೆಗಳು ಆಗಲಿವೆ ಎಂಬುದು ಜನರಿಗೆ ತಿಳಿಯಲಿದೆ ಎಂದು ಹೇಳಿದರು. ಸುಳ್ಳು ಭರವಸೆಗಳಿಂದ ಜನರ ಹೊಟ್ಟೆ ತುಂಬಿಸಲು ಆಗಲ್ಲ. ಗ್ಯಾರಂಟಿ ಯೋಜನೆಗಳಿಂದ ಜನ ಬೇಸತ್ತಿದ್ದಾರೆ. ಫ್ರೀ ಬಸ್‌ನಿಂದ ಶಾಲಾ ಮಕ್ಕಳು ಬೀದಿಯಲ್ಲಿ ನಿಲ್ಲುತ್ತಿದ್ದಾರೆ. 2000 ಆಸೆ ತೋರಿಸಿ ಗಂಡಂದಿರ ಆದಾಯಕ್ಕೆ ಕತ್ತರಿ ಹಾಕಿದ ಕಾಂಗ್ರೆಸ್‌ಗೆ ಈ ಫಲಿತಾಂಶ ಬಹುಶಃ ಆಘಾತ ತಂದಿರಬಹುದು. ಎಂಪಿ ಚುನಾವಣೆ ಬಳಿಕ ಗ್ಯಾರಂಟಿ ನಿಲ್ಲಿಸುವುದು ಸರ್ಕಾರದ ಅಜೆಂಡಾವಾಗಿದೆ. ಜೆಡಿಎಸ್, ಬಿಜೆಪಿ ಸರ್ಕಾರದಲ್ಲಿ ಕೊಟ್ಟ ಕಾರ್ಯಕ್ರಮಗಳಷ್ಟೇ ಅನುಷ್ಠಾನ ಆಗಿದೆ ಹೊರತು ಕಾಂಗ್ರೆಸ್‌ನ ಅಭಿವೃದ್ಧಿ ಶೂನ್ಯವಾಗಿದೆ. ಮೋದಿ ಸಂಪುಟದಲ್ಲಿ ಕುಮಾರಸ್ವಾಮಿ ಸಚಿವರಾಗುವುದು ನೂರಕ್ಕೆ ನೂರರಷ್ಟು ಸತ್ಯವಾಗಿದ್ದು, ಕೃಷಿ ಖಾತೆ ಸಿಕ್ಕಿದರೆ ಜನಪರ ಕೆಲಸ ಮಾಡಲು ಸಹಕಾರಿಯಾಗಲಿದೆ ಎಂದರು.

ಅಂಬರೀಷ್ ಹೆಸರಲ್ಲಿದ್ದ ಸಾರ್ವಕಾಲಿಕ ದಾಖಲೆ ಮುರಿದ ಕುಮಾರಸ್ವಾಮಿ

ಮಂಡ್ಯ, ಜೂ.4– ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸತತ ಮೂರು ಬಾರಿ ಆಯ್ಕೆಯಾಗಿದ್ದ ಹಿರಿಯ ನಟ ಅಂಬರೀಷ್ 1998ರ ಲೋಕಸಭಾ ಚುನಾವಣೆಯಲ್ಲಿ ಗೆದ್ದಿದ್ದ 1,80,523 ಮತಗಳ ಅಂತರ 2018ರ ಉಪಚುನಾವಣೆಯವರೆಗೂ ಸಾರ್ವಕಾಲಿಕ ದಾಖಲೆಯಾಗಿತ್ತು. ಆದರೆ ಈ ದಾಖಲೆಯನ್ನು ಹೆಚ್.ಡಿ.ಕುಮಾರಸ್ವಾಮಿ ಸರಿಗಟ್ಟಿ 2,84,620 ಮತಗಳ ಅಂತರದಿಂದ ಗೆಲುವು ಸಾಧಿಸಿ, ಅಂಬರೀಷ್ ದಾಖಲೆ ಮುರಿದಿದ್ದಾರೆ.



ಅಂಬರೀಷ್

1996ರ ರಾಮನಗರ ಉಪಚುನಾವಣೆಯಲ್ಲಿ ಅನಿರೀಕ್ಷಿತ ಸೋಲುಂಡಿದ್ದ ಅಂಬರೀಷ್, 1998ರ ಲೋಕಸಭಾ ಚುನಾವಣೆಯಲ್ಲಿ ತಮ್ಮ ತವರು ಜಿಲ್ಲೆ ಮಂಡ್ಯದಿಂದ ಸ್ಪರ್ಧಿಸಿದ್ದರು. ಆ ಚುನಾವಣೆಯಲ್ಲಿ ಜನತಾದಳದ ಅಭ್ಯರ್ಥಿ ಅಂಬರೀಷ್ 4,31,439 ಮತ ಪಡೆದರೆ ಕಾಂಗ್ರೆಸ್‌ನ ಜಿ.ಮಾದೇಗೌಡ 2,50,916 ಮತ ಪಡೆದಿದ್ದರು. ಒಟ್ಟಾರೆ ಅಂಬರೀಷ್ 1,80,523 ಮತಗಳ ಅಂತರದಿಂದ ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ್ದರು. ಜೊತೆಗೆ ಈ ಹಿಂದೆ ಇಷ್ಟು ಅಂತರದಿಂದ ಮಂಡ್ಯ ಕ್ಷೇತ್ರದಲ್ಲಿ ಯಾರೂ ಸಹ ಗೆದ್ದಿರಲಿಲ್ಲ.

2018ರ ಉಪಚುನಾವಣೆವರೆಗೂ ಈ ದಾಖಲೆ ಸಾರ್ವಕಾಲಿಕ ದಾಖಲೆಯಾಗಿ ಉಳಿದಿತ್ತು. ಆದರೆ 2019ರಲ್ಲಿ ನಡೆದ ಮಂಡ್ಯ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಜೆಡಿಎಸ್-ಕಾಂಗ್ರೆಸ್‌ನ ಮೈತ್ರಿ ಅಭ್ಯರ್ಥಿ ಎಲ್.ಆರ್.ಶಿವರಾಮೇಗೌಡ 5,69,347 ಮತ ಪಡೆದರೆ, ಬಿಜೆಪಿಯಿಂದ ಸ್ಪರ್ಧಿಸಿದ್ದ ಡಾ.ಸಿದ್ದರಾಮಯ್ಯ 2,44,404 ಮತ ಪಡೆದು ಶಿವರಾಮೇಗೌಡ ಅಂತಿಮವಾಗಿ 3,24,943 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಇದು ಅತಿ ಹೆಚ್ಚು ಮತಗಳ ಅಂತರದ ಗೆಲುವಾದರೂ ಕಾಂಗ್ರೆಸ್ ಅಭ್ಯರ್ಥಿ ಇಲ್ಲದ ಕಾರಣ ಈ ದೊಡ್ಡ ಜಯಕ್ಕೆ ಕಾರಣವಾಗಿತ್ತು.

ಆದರೆ ಸಾರ್ವತ್ರಿಕ ಚುನಾವಣೆಯಲ್ಲಿ ಅದರಲ್ಲೂ ನೇರ ಹಣಾಹಣಿಯಲ್ಲಿ 1996ರಲ್ಲಿ 1,80,523 ಮತ ಪಡೆದು ಗೆಲುವು ಸಾಧಿಸಿದ್ದ ಅಂಬರೀಷ್ ಗೆಲುವು ಸಾರ್ವಕಾಲಿಕ ಗೆಲುವಾಗಿತ್ತು. ಆ ಗೆಲುವನ್ನು ಇದೀಗ ಕುಮಾರಸ್ವಾಮಿ ಧೂಳಿಪಟ ಮಾಡಿದ್ದಾರೆ.

ಪಕ್ಷವಾರು ಅಭ್ಯರ್ಥಿಗಳು ಪಡೆದ ಮತಗಳ ವಿವರ

ಕ್ರ.ಸಂ.	ಅಭ್ಯರ್ಥಿ ಹೆಸರು	ಪಕ್ಷ	ಪಡೆದ ಮತ
1.	ಹೆಚ್.ಡಿ.ಕುಮಾರಸ್ವಾಮಿ	ಜೆಡಿಎಸ್	8,51,881
2.	ವೆಂಕಟರಮಣೇಗೌಡ (ಸ್ಟಾರ್ ಚಂದ್ರು)	ಕಾಂಗ್ರೆಸ್	5,67,261
3.	ಶಿವಶಂಕರ.ಎಸ್	ಬಿಎಸ್ಪಿ	6964
4.	ಚಂದ್ರಶೇಖರ್.ಕೆ.ಆರ್.	ಕೆಆರ್‌ಎಸ್	1476
5.	ಬೂದಯ್ಯ.ಬಿ.ಪಿ.	ಕರುನಾಡು ಪಾರ್ಟಿ	1370
6.	ಹೆಚ್.ಡಿ.ರೇವಣ್ಣ	ಪಿಎಂಪಿ	590
7.	ಲೋಕೇಶ.ಎಸ್.	ಯುಪಿಪಿ	1163
8.	ಎಸ್.ಅರವಿಂದ್	ಪಕ್ಷೇತರ	442
9.	ಚನ್ನಮಾಯಿಗೌಡ	ಪಕ್ಷೇತರ	497
10.	ಚಂದನ್‌ಗೌಡ.ಕೆ	ಪಕ್ಷೇತರ	12,394
11.	ಎನ್.ಬಸವರಾಜು	ಪಕ್ಷೇತರ	843
12.	ಬೀರೇಶ್.ಎಸ್.ಟಿ.	ಪಕ್ಷೇತರ	931
13.	ರಾಮಯ್ಯ.ಡಿ	ಪಕ್ಷೇತರ	3810
14.	ರಂಜಿತಾ.ಎನ್	ಪಕ್ಷೇತರ	2909
15.	ನೋಟಾ		7736
		ಒಟ್ಟು	14,60,267

ಇದು ನನ್ನ ಗೆಲುವಲ್ಲ, ಮಂಡ್ಯ ಜಿಲ್ಲೆಯ ಜನರ ಗೆಲುವು: ಹೆಚ್.ಡಿ. ಕುಮಾರಸ್ವಾಮಿ

ಮಂಡ್ಯ, ಜೂ.4– ಇದು ನನ್ನ ಗೆಲುವು ಅನ್ನೋದಕ್ಕಿಂತ ಮಂಡ್ಯ ಜಿಲ್ಲೆಯ ಜನರ ಗೆಲುವು. ಈ ಚುನಾವಣೆಯ ಜವಾಬ್ದಾರಿಯನ್ನು ಬಿಜೆಪಿ-ಜೆಡಿಎಸ್ ನಾಯಕರು ವಹಿಸಿದ್ದರು. ಅವರ ಶ್ರಮ ನನ್ನ ಗೆಲುವಿಗೆ ಕಾರಣವಾಗಿದೆ. ಇದರ ಫಲ ಮಂಡ್ಯ ಜನತೆಗೆ ತಲುಪಬೇಕು ಎಂದು ನೂತನ ಸಂಸದ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ಮಂಗಳವಾರ ನಗರದ ಮಂಡ್ಯ ವಿವಿ ಆವರಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜಿಲ್ಲೆಯ ಜನರ ಋಣ ನನ್ನ ಮೇಲೆ ಇದೆ ಈ ಅವಕಾಶವನ್ನು ಜನರ ಸಮಸ್ಯೆ ಬಗೆಹರಿಸಲು ಅರ್ಪಿಸುತ್ತೇನೆ. ಎಲ್ಲಾ ಅಂಶಗಳು ಗೆಲುವಿಗೆ ಕಾರಣವಾಗಿದೆ. ನನ್ನ ಗೆಲುವಿಗೆ ಹಲವರು ಪಕ್ಷಭೇದ ಮರೆತು ಕೆಲಸ ಮಾಡಿದ್ದಾರೆ. ಎಲ್ಲರ ತೀರ್ಮಾನಕ್ಕೆ ಬದ್ಧರಾಗಿ ಅವರಂತೆ ಅಭ್ಯರ್ಥಿ ಆಗಿದ್ದೆ. ಎಲ್ಲರ ಅಪೇಕ್ಷೆ ನನ್ನನ್ನ ಗೆಲ್ಲುವಂತೆ ಮಾಡಿದೆ ಎಂದರು.

ರಾಜಕೀಯ ಭವಿಷ್ಯವನ್ನು ಬೆಂಗಳೂರು ಗ್ರಾಮಾಂತರ ನಿರ್ಧಾರ ಮಾಡಿತ್ತು. ಎರಡು ಜಿಲ್ಲೆಯ ಜನರು ರಾಜಕೀಯ ಶಕ್ತಿ ಕೊಟ್ಟಿದ್ದಾರೆ. ರಾಜ್ಯದ ನಿರೀಕ್ಷೆಯಂತೆ ಕೆಲಸ ಮಾಡುತ್ತೇನೆ. ಮಂಡ್ಯದಲ್ಲಿ ಜೆಡಿಎಸ್ ಪಕ್ಷಕ್ಕೆ ಅಭ್ಯರ್ಥಿ ಅಂತ ಇಲ್ಲಿಯೇ ಇರಲಿಲ್ಲ. ಇಲ್ಲಿನ ಜನರೇ ತಾವೇ ಅಭ್ಯರ್ಥಿಯಂತೆ ಪ್ರಚಾರ ಮಾಡಿ ನನ್ನನ್ನ ಗೆಲ್ಲಿಸಿದ್ದಾರೆ. ರಾಜ್ಯದ ಹಲವು ಕಡೆ ಪ್ರಚಾರ ಮಾಡಿದ್ದೇನೆ 19 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಕ್ಷೇತ್ರದ ಜನರು ಸಹಕರಿಸಿದರು ಎಂದು ಸ್ಮರಿಸಿದರು.

ಸಚಿವ ಚಲುವರಾಯಸ್ವಾಮಿ ಬಗ್ಗೆ ಚರ್ಚೆ ಮಾಡಲ್ಲ. ಕೇಂದ್ರ ಸಚಿವನಾಗುತ್ತೇನೆ ಎಂಬುದಕ್ಕಿಂತ ಹೆಚ್ಚಾಗಿ ನನಗೆ ಶಕ್ತಿ ತುಂಬಿದ್ದಾರೆ. ಈ ರಾಜ್ಯದ ಮುಖ್ಯಮಂತ್ರಿಯಾಗಿ ಹಲವು ಕೆಲಸ ಮಾಡಿದ್ದೇನೆ. ಸಂಸದನಾಗಿಯೂ ಉತ್ತಮವಾಗಿ ಕೆಲಸ ಮಾಡುತ್ತೇನೆ ಎಂಬ ನಿರೀಕ್ಷೆ ಇದೆ. ಕಾವೇರಿ ಸಮಸ್ಯೆ ಕೂಡ ಬಗೆಹರಿಸುತ್ತೇನೆ. ಯಾವ ರೀತಿ ಪರಿಹಾರ ಎಂಬ ಬಗ್ಗೆ ದೇವೇಗೌಡರ ಸಲಹೆ ಪಡೆಯುತ್ತೇನೆ. ಎನ್‌ಡಿಎಗೆ ಬಹುಮತ ಇದೆ. ಮೋದಿ ಅವರ ನೇತೃತ್ವದಲ್ಲಿ ಸರ್ಕಾರ ರಚನೆ ಮಾಡಬೇಕು ಎಂಬ ಜನರ ನಿರೀಕ್ಷೆ ಇದೆ ಎಂದರು.


ಇಡೀ ರಾಜ್ಯವೇ ನನ್ನ ಕ್ಷೇತ್ರವಾಗಿತ್ತು. ಕುಮಾರಸ್ವಾಮಿ ಗೆಲ್ಲಲ್ಲ ಅಂತಾ ಸಿಎಂ ಹಾಗೂ ಡಿಸಿಎಂ ಹೇಳುತ್ತಿದ್ದರು. ಎಕ್ಸಿಟ್ ಪೋಲ್ ವರದಿ ಕೂಡ ಕೆಲವು ಬಾರಿ ಬದಲಾವಣೆ ಆಗುತ್ತದೆ. ಸರ್ಕಾರ ರಚನೆಗೆ ಏನೂ ತೊಂದರೆ ಇಲ್ಲ. ಡಾ.ಮಂಜುನಾಥ್ ಚುನಾವಣೆ ನಿಂತಾಗ ಜೆಡಿಎಸ್ ಮುಗಿಸುತ್ತಾರೆ ಎಂದಿದ್ದರು ಕಾಂಗ್ರೆಸ್ ನಾಯಕರು. ಹರಕೆ ಕುರಿ ಮಾಡಲು ಹೊರಟಿದ್ದಾರೆ ಎಂದಿದ್ದರು. ಆದರೆ ಕಳೆದ ಬಾರಿ ಡಿ.ಕೆ.ಸುರೇಶ್ ಗೆಲ್ಲಲು ಜೆಡಿಎಸ್ ಕಾರಣ ಅನ್ನೋದನ್ನ ಮರೆಯಬಾರದು. ನನ್ನ ಭದ್ರಕೋಟೆಯನ್ನ ನಾಶ ಮಾಡಲು ಹೊರಟಿದ್ದವರಿಗೆ ಇದೀಗ ಉತ್ತರ ಸಿಕ್ಕಿದೆ ಎಂದು ಡಿಕೆ ಸಹೋದರರಿಗೆ ಟಾಂಗ್ ನೀಡಿದರು.



ಮೈಸೂರು ಮಿತ್ರ

ಬುಧವಾರ 5 ಜೂನ್ 2024

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಪಕ್ಷೇತರರ ಹಿಂದಿಕ್ಕಿದ 'ನೋಟ'



ಯಾವ ಪಕ್ಷೇತರರಿಗೂ ಠೇವಣಿ ಮಾನ್ಯತೆ ಇಲ್ಲ

ಮೈಸೂರು,ಜೂ.4 (ಎಂಟಿವೈ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣಾ ಫಲಿತಾಂಶ ಪ್ರಕಟವಾಗಿದ್ದು, ಗೆಲ್ಲುವ ಆಶಯದೊಂದಿಗೆ ಕಣದಲ್ಲಿದ್ದ 18 ಅಭ್ಯರ್ಥಿಗಳಲ್ಲಿ ಪ್ರಮುಖ ಎರಡು ಪಕ್ಷಗಳ ಅಭ್ಯರ್ಥಿಗಳನ್ನು ಹೊರತುಪಡಿಸಿದರೆ ಉಳಿದ 16 ಅಭ್ಯರ್ಥಿಗಳನ್ನು ಹಿಂದಿಕ್ಕಿ, ನೋಟ ಮೂರನೇ ಸ್ಥಾನ ಪಡೆದುಕೊಂಡಿದೆ.

ಏ.26ರಂದು ನಡೆದ ಚುನಾವಣೆಯಲ್ಲಿ 18 ಅಭ್ಯರ್ಥಿಗಳು ಅಂತಿಮವಾಗಿ ಕಣದಲ್ಲಿ ಉಳಿದು ಅದೃಷ್ಟ ಪರೀಕ್ಷೆಗೆ ಒಳಗಾಗಿದ್ದರು. ಅವರಲ್ಲಿ ಬಿಜೆಪಿಯಿಂದ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕಾಂಗ್ರೆಸ್‌ನಿಂದ ಎಂ.ಲಕ್ಷ್ಮಣ ಹೊರತುಪಡಿಸಿದರೆ, ಉಳಿದ ಅಭ್ಯರ್ಥಿಗಳು ನಾಲ್ಕು ಸಾವಿರ ಗಡಿದಾಟಲು ಸಾಧ್ಯವಾಗಿಲ್ಲ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ 10,26,324 ಪುರುಷ, 10,65,714 ಮಹಿಳಾ ಹಾಗೂ 184 ಮಂದಿ ತೃತೀಯಲಿಂಗಿ ಮತದಾರರು ಸೇರಿದಂತೆ ಒಟ್ಟು 20,92,222 ಮತದಾರರಿದ್ದಾರೆ. ಅವರಲ್ಲಿ 14,77,571 ಮಂದಿ ಹಕ್ಕು ಚಲಾಯಿಸಿದ್ದಾರೆ. ಇಬ್ಬರು ಅಭ್ಯರ್ಥಿಗಳ ನಡುವೆ ಮಾತ್ರ ನೇರ ಹಣಾಹಣಿ ಏರ್ಪಟ್ಟಿತ್ತು.

ಎಣಿಕಾ ಕಾರ್ಯ ಪೂರ್ಣಗೊಂಡ ಬಳಿಕ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ 7,95,503 ಮತ, ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ 6,56,241 ಮತ ಪಡೆದರೆ ಉಳಿದವರು ಠೇವಣಿ ಕಳೆದುಕೊಂಡಿದ್ದಾರೆ. ಕರ್ನಾಟಕ ಜನತಾ ಪಕ್ಷದ ಕದಂಬ ನಾ ಅಂಬರೀಷ್ 4080 ಮತ, ಕರುನಾಡು ಪಾರ್ಟಿಯ ಹೆಚ್.ಕೆ. ಕೃಷ್ಣ 1489, ಸಮಾಜವಾದಿ ಜನತಾ ಪಾರ್ಟಿ ಡಾ.ಹೆಚ್.ಎಂ.ನಂಜುಂಡಸ್ವಾಮಿ 523, ಕರ್ನಾಟಕ ರಾಷ್ಟ್ರ ಸಮಿತಿಯ ಎಂ.ಎಸ್.ಪ್ರವೀಣ 740, ಜಾತ್ಯತೀತ ಪ್ರಜಾಪ್ರಭುತ್ವ ಕಾಂಗ್ರೆಸ್ ಅಭ್ಯರ್ಥಿ ಎ.ಜಿ.ರಾಮಚಂದ್ರರಾವ್ 490, ಪ್ರಜಾಕೀಯ ಲೀಲಾ ಶಿವಕುಮಾರ್ 1754, ಸೋಶಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ ಪಕ್ಷದ ಟಿ.ಆರ್.ಸುನೀಲ್ 1560, ಸೋಶಿಯಲಿಸ್ಟ್ ಪಾರ್ಟಿ ಹರೀಶ್‌ಗೌಡ 976, ಸಿ.ಜೆ.ಅಂಬೇಡ್ಕರ್ 835, ಕ್ರಿಸ್ಟೋಫರ್ ರಾಜ್‌ಕುಮಾರ್ 544, ದರ್ಶನ್ ಕೆಪೊನ್ನಟಿ 764, ಪಿ.ಎಸ್.ಯಡ್ಯೂರಪ್ಪ 878, ರಾಜು 1949, ಎಂ.ರಾಮಮೂರ್ತಿ 3605, ಎಂ.ರಂಗಸ್ವಾಮಿ 4306, ಎ.ಎಸ್.ಸತೀಶ್ 3746 ಮತ ಪಡೆದುಕೊಂಡಿದ್ದಾರೆ. ಆದರೆ ನೋಟಗೆ 4490 ಮತ ಚಲಾವಣೆಯಾಗಿದ್ದು, ಇಬ್ಬರು ರಾಷ್ಟ್ರೀಯ ಪಕ್ಷದ ಅಭ್ಯರ್ಥಿಗಳ ನಂತರದ ಸ್ಥಾನವನ್ನು ನೋಟ ಪಡೆದುಕೊಂಡಿದೆ.

ಚುನಾವಣಾ ಕಣದಲ್ಲಿ 18 ಅಭ್ಯರ್ಥಿಗಳಿದ್ದ ಹಿನ್ನೆಲೆಯಲ್ಲಿ ಒಂದೊಂದು ಮತಗಟ್ಟೆಗೂ ಎರಡು ಮತಯಂತ್ರ ಬಳಸಲಾಗಿತ್ತು. ಚುನಾವಣಾ ಕಣದಲ್ಲಿರುವ ಪಕ್ಷೇತರ ಅಭ್ಯರ್ಥಿಗಳು ಹೆಚ್ಚು ಮತ ಪಡೆಯಲು ಸಾಕಷ್ಟು ಪ್ರಯತ್ನ ಮಾಡಿದ್ದರೂ ಠೇವಣಿ ಉಳಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಈ ಅಭ್ಯರ್ಥಿಗಳನ್ನು ನೋಟ ಹಿಂದಿಕ್ಕುವ ಮೂಲಕ ಮೂರನೇ ಸ್ಥಾನ ಪಡೆದುಕೊಂಡಿದೆ.

ಮೈಸೂರು–ಕೊಡಗು ಕ್ಷೇತ್ರ ಚುನಾವಣೆ ಫಲಿತಾಂಶದ ವಿವರ

ಮಡಿಕೇರಿ	
ಬಿಜೆಪಿ :	92949
ಕಾಂಗ್ರೆಸ್ :	56490
ಬಿಜೆಪಿ ಲೀಡ್	36459
ವಿರಾಜಪೇಟೆ	
ಬಿಜೆಪಿ :	87310
ಕಾಂಗ್ರೆಸ್ :	59932
ಬಿಜೆಪಿ ಲಿಡ್	27378
ಪಿರಿಯಾಪಟ್ಟಣ	
ಬಿಜೆಪಿ :	71237
ಕಾಂಗ್ರೆಸ್ :	82981
ಕಾಂಗ್ರೆಸ್ ಲೀಡ್	11744
ಹುಣಸೂರು	
ಬಿಜೆಪಿ :	84436
ಕಾಂಗ್ರೆಸ್ :	80340
ಬಿಜೆಪಿ ಲೀಡ್	4096
ಚಾಮುಂಡೇಶ್ವರಿ	
ಬಿಜೆಪಿ :	103112
ಕಾಂಗ್ರೆಸ್ :	64968
ಬಿಜೆಪಿ ಲೀಡ್	38144
ಕೃಷ್ಣರಾಜ	
ಬಿಜೆಪಿ :	92449
ಕಾಂಗ್ರೆಸ್ :	45703
ಬಿಜೆಪಿ ಲೀಡ್	46746
ಚಾಮರಾಜ	
ಬಿಜೆಪಿ :	101166
ಕಾಂಗ್ರೆಸ್ :	47434
ಬಿಜೆಪಿ ಲೀಡ್	53732
ನರಸಿಂಹರಾಜ	
ಬಿಜೆಪಿ :	40784
ಕಾಂಗ್ರೆಸ್ :	121739
ಕಾಂಗ್ರೆಸ್ ಲೀಡ್	80955

ಯದುವೀರ್ ಒಡೆಯರ್ 139262 ಮತಗಳ ಅಂತರದಿಂದ ಗೆಲುವು


8,417 ಅಂಚೆ ಮತದಾನದಲ್ಲೂ ಯದುವೀರ್‌ಗೆ 5112 ಮತ

2502 ಮತಗಳಿಗೆ ಲಕ್ಷ್ಮಣ ತೃಪ್ತಿ

ಮೈಸೂರು, ಜೂ. 4 (ಆರ್‌ಕೆ)– ಅಂಚೆ ಮತದಾನದಲ್ಲೂ ಎನ್‌ಡಿಎ ಅಭ್ಯರ್ಥಿ ಯದುವೀರ್ ಒಡೆಯರ್ ಅವರು ಅಧಿಕ, 5112 ಮತಗಳನ್ನು ಪಡೆದು ತಮ್ಮ ಸಮೀಪ ಸ್ಪರ್ಧಿ ಕಾಂಗ್ರೆಸ್‌ನ ಎಂ.ಲಕ್ಷ್ಮಣರಿಗಿಂತ 2,610 ಮತಗಳಿಂದ ಮುಂದಿದ್ದರು.

ಎಂ.ಲಕ್ಷ್ಮಣ ಅವರಿಗೆ 2502, ಕದಂಬನಾ ಅಂಬರೀಷ್‌ಗೆ 11, ಹೆಚ್.ಕೆ. ಕೃಷ್ಣಗೆ 10, ಡಾ. ಹೆಚ್.ಎಂ. ನಂಜುಂಡಸ್ವಾಮಿಗೆ 4, ಎಂ.ಎಸ್. ಪ್ರವೀಣ್‌ಗೆ 5, ಎ.ಜಿ. ರಾಮಚಂದ್ರ ರಾವ್‌ಗೆ 3, ಪ್ರಜಾಕೀಯ ಲೀಲಾ ಶಿವಕುಮಾರ್‌ಗೆ 30, ಟಿ.ಆರ್. ಸುನೀಲ್‌ಗೆ 22, ಹರೀಶ್‌ಗೌಡರಿಗೆ 9, ಸಿ.ಜೆ. ಅಂಬೇಡ್ಕರ್‌ಗೆ 14, ಕ್ರಿಸ್ಟೋಫರ್ ರಾಜಕುಮಾರ್‌ಗೆ 11, ದರ್ಶನ ಕೆ.ಪೊನ್ನಟ್ಟಿಗೆ 3, ಪಿ.ಎಸ್. ಯಡೂರಪ್ಪಗೆ 4, ರಾಜು ಅವರಿಗೆ 9, ಎಂ.ರಾಮಮೂರ್ತಿಗೆ 4, ಎಂ. ರಂಗಸ್ವಾಮಿಗೆ 5, ಎ.ಎಸ್. ಸತೀಶ್‌ಗೆ 10 ಮತಗಳು ಅಂಚೆ ಮತದಾನದಲ್ಲಿ ಲಭಿಸಿವೆ. ಆದರೆ ಅಂಚೆ ಮತದಾನ ಮಾಡಿದವರ ಪೈಕಿ 44 ಮಂದಿ ನೋಟಾಗೆ ಮತ ಚಲಾಯಿಸಿದ್ದಾರೆ. ಒಟ್ಟು 7812 ಅಂಚೆ ಮತದಾನ ನಡೆದಿದ್ದು, ಆ ಪೈಕಿ 605 ಮತಗಳು ತಿರಸ್ಕೃತಗೊಂಡಿದ್ದು, ಒಟ್ಟು 8417 ಅಂಚೆ ಮತಗಳು ಊರ್ಜಿತವಾಗಿವೆ.

ಭಾರಿ ಬಿಗಿ ಪೊಲೀಸ್ ಬಂದೋಬಸ್ತ್; ಮೈಸೂರಲ್ಲಿ ನಿರ್ವಿಘ್ನವಾಗಿ ನಡೆದ ಮತ ಎಣಿಕೆ





ಮೈಸೂರು, ಜೂ. 4 (ಆರ್‌ಕೆ)– ಮೈಸೂರಿನ ಮಹಾರಾಣಿ ಸರ್ಕಾರಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಕೇಂದ್ರದಲ್ಲಿ ಇಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತ ಎಣಿಕೆ ಪ್ರಕ್ರಿಯೆಯ ಯಾವುದೇ ಗೊಂದಲಗಳಿಲ್ಲದೆ ನಿರ್ವಿಘ್ನವಾಗಿ ನಡೆಯಿತು.

ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮತ ಎಣಿಕೆ ವೀಕ್ಷಕ ಮೊಹಮದ್ ಏಜಾಜ್ ಸಮ್ಮುಖದಲ್ಲಿ ಬೆಳಗ್ಗೆ 7.30 ಗಂಟೆಗೆ ಸ್ಟ್ರಾಂಗ್ ರೂಂ ಮುದ್ರೆ ತೆರೆದು ಮೊದಲು ಅಂಚೆ ಮತ ಪತ್ರಗಳ ಬಾಕ್ಸ್ ತೆಗೆದು ಎಣಿಕೆ ಆರಂಭಿಸಲಾಯಿತು.

ಅದರ ಬೆನ್ನಲ್ಲೇ ಇವಿಎಂಗಳಲ್ಲಿ ದಾಖಲಾಗಿರುವ ಮತಗಳ ಎಣಿಕೆ ಮಾಡಲಾಯಿತು. ಮೈಸೂರು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ನೇತೃತ್ವದಲ್ಲಿ ಮತ ಎಣಿಕೆಗೆ ಇನ್ನಿಲ್ಲದ ಭದ್ರತೆ ಮಾಡಲಾಗಿತ್ತು. ನಾಲ್ವರು ಡಿಸಿಪಿಗಳು, 7 ಎಸಿಪಿಗಳು, 23 ಇನ್ಸ್‌ಪೆಕ್ಟರ್‌ಗಳು, 76 ಸಬ್ ಇನ್ಸ್‌ಪೆಕ್ಟರ್‌ಗಳು ಸೇರಿ 737 ಸಿವಿಲ್ ಪೊಲೀಸರು, 4 ಕೆಎಸ್‌ಆರ್‌ಪಿ, 12 ಸಿಎಆರ್ ತುಕಡಿ ಮತ್ತು 4 ಕಮಾಂಡೋ ಪಡೆ ಸಿಬ್ಬಂದಿಗಳನ್ನು ಮತ ಎಣಿಕಾ ಕೇಂದ್ರಕ್ಕೆ ಭದ್ರತೆಗಾಗಿ ನಿಯೋಜಿಸಲಾಗಿತ್ತು.

ಕೇಂದ್ರದ ಸುತ್ತ 200 ಮೀ. ದೂರದಲ್ಲಿ ಒಂದು ಸುತ್ತಿನ ಬ್ಯಾರಿಕೇಡ್ ಅಳವಡಿಸಿ, 500 ಮೀ. ಅಂತರದಲ್ಲಿ ಮತ್ತೊಂದು ಸುತ್ತಿನ ಬ್ಯಾರಿಕೇಡ್ ಅಳವಡಿಸಿ ಪೊಲೀಸ್ ಸಿಬ್ಬಂದಿ ನಿಯೋಜಿಸಿದ್ದರಿಂದ ಮಾತೃಮಂಡಳಿ ಸರ್ಕಲ್, ಹುಣಸೂರು ರಸ್ತೆಯ ಪಡುವಾರಹಳ್ಳಿ ಸಿಗ್ನಲ್ ಲೈಟ್ ಜಂಕ್ಷನ್, ಕಲಾಮಂದಿರ ಜಂಕ್ಷನ್, ಕೆಆರ್‌ಎಸ್ ರಸ್ತೆಯ ಆಕಾಶವಾಣಿ ಸರ್ಕಲ್‌ಗಳಿಂದಲೇ ನಾಕಾಬಂದಿ ಮಾಡಿ ಜನರು, ವಾಹನಗಳನ್ನು ಬಿಡದಂತೆ ಎಚ್ಚರ ವಹಿಸಿದ್ದರಿಂದ ಮತ ಎಣಿಕೆ ಕೇಂದ್ರದ ಬಳಿ ಪೊಲೀಸರನ್ನು ಹೊರತುಪಡಿಸಿ ಬೇರೆ ಯಾರೂ ಕಾಣಿಸುತ್ತಿರಲಿಲ್ಲ.

ಮತ ಎಣಿಕೆ ಕೇಂದ್ರ ಕಟ್ಟಡದಲ್ಲೂ ಬ್ಯಾರಿಕೇಡ್ ಅಳವಡಿಸಿ ಬೇಕಾಬಿಟ್ಟಿ ಓಡಾಡದಂತೆ ಎಚ್ಚರ ವಹಿಸಿದ್ದರಿಂದ ಯಾವುದೇ ಗೊಂದಲವಿಲ್ಲದೆ ಎಣಿಕಾ ಕಾರ್ಯ ಪೂರ್ಣಗೊಂಡಿತು. ಸಿಬ್ಬಂದಿಗಳಿಗೆ ಊಟ–ತಿಂಡಿ, ಕುಡಿಯುವ ನೀರು ಶೌಚಾಲಯ ಸೇರಿದಂತೆ ಎಲ್ಲಾ ಸೌಕರ್ಯ ಮಾಡಲಾಗಿತ್ತು.

ಅಗ್ನಿಶಾಮಕ ದಳದ ಸಿಬ್ಬಂದಿ, ಆಂಬುಲೆನ್ಸ್, ಶ್ವಾನದಳ ಸಿಬ್ಬಂದಿಗಳನ್ನು ಕೇಂದ್ರದಲ್ಲಿ ನೇಮಿಸಲಾಗಿತ್ತಲ್ಲದೆ, ಸ್ವಚ್ಛತಾ ಕಾರ್ಯವನ್ನೂ ಪಾಲಿಕೆ ಸಿಬ್ಬಂದಿ ನಿರ್ವಹಿಸಿದರು. ಸಿಬ್ಬಂದಿ, ಮಾಧ್ಯಮದವರು, ಪೊಲೀಸ್ ಸಿಬ್ಬಂದಿಗೆ ವಾಹನ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು.

ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್. ಜಾಹ್ನವಿ ಅವರು ಕೇಂದ್ರದಲ್ಲಿ ಮತ ಎಣಿಕೆ ಕಾರ್ಯ ಮತ್ತು ಬಂದೋಬಸ್ತ್ ಮೇಲ್ವಿಚಾರಣೆ ನಡೆಸಿದರು.

ಅಲ್ಲಲ್ಲಿ ಗುಂಪುಗಟ್ಟಿ ಫಲಿತಾಂಶ ವೀಕ್ಷಿಸಿದ ಜನರು



ಟೀ ಸ್ಟಾಲ್‌ಗಳ ಮುಂದೆ ಜನರು ಚುನಾವಣಾ ಫಲಿತಾಂಶ ವೀಕ್ಷಿಸುತ್ತಿರುವುದು.

ಮೈಸೂರು, ಜೂ.4(ಜಿಎ)–ಲೋಕಸಭಾ ಕ್ಷೇತ್ರದ ಮತ ಎಣಿಕೆಯನ್ನು ಸಾರ್ವಜನಿಕರು ಕುತೂಹಲದಿಂದ ನಗರದ ವಿವಿಧೆಡೆ ಮೊಬೈಲ್, ಟಿವಿಗಳಲ್ಲಿ ಗುಂಪು–ಗುಂಪಾಗಿ ಸೇರಿ ವೀಕ್ಷಿಸಿದರು. ದೇಶದ ಆಡಳಿತ ಚುಕ್ಕಾಣಿಯನ್ನು ಯಾರು ಹಿಡಿಯಲಿದ್ದಾರೆ ಎಂಬ ಕುತೂಹಲ ಅವರಲ್ಲಿತ್ತು. ಏಳು ಹಂತಗಳಲ್ಲಿ ನಡೆದ ಚುನಾವಣೆಯಲ್ಲಿ ಮತ ಚಲಾಯಿಸಿದ ಮತದಾರರು ತಾವು ಮತ ಹಾಕಿದ ಅಭ್ಯರ್ಥಿ ಗೆದ್ದರೋ, ಸೋತರೋ ಎಂಬುದನ್ನು ಮೊಬೈಲ್‌ಗಳ ಮೂಲಕ ಮಾಹಿತಿ ಪಡೆದುಕೊಂಡರೆ, ಕೆಲವರು ಟೀ ಸ್ಟಾಲ್, ಟಿವಿ ಶೋಂಗಳಲ್ಲಿ ಅಳವಡಿಸಿರುವ ಟಿವಿಗಳ ಮೂಲಕ ಪ್ರಕಟವಾಗುತ್ತಿದ್ದ ವರದಿಗಳನ್ನು ಗುಂಪು ಗುಂಪಾಗಿ ನಿಂತು ವೀಕ್ಷಿಸಿದರು. ನಗರದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಮೈಸೂರು ತಿಂಡಿಸ್ ವತಿಯಿಂದ ಹೋಟೆಲ್‌ನ ಮುಂಭಾಗ ಬೃಹತ್ ಟಿವಿ ಅಳವಡಿಸಿ ಸಾರ್ವಜನಿಕರು ಲೋಕಸಭಾ ಚುನಾವಣೆಯ ಫಲಿತಾಂಶ ವೀಕ್ಷಿಸಲು ವ್ಯವಸ್ಥೆ ಕಲ್ಪಿಸಿದ್ದರು. ಹೋಟೆಲ್‌ಗೆ ಭೇಟಿ ನೀಡುತ್ತಿದ್ದ ಗ್ರಾಹಕರು ತಿಂಡಿ–ತಿನಿಸು ಸೇವಿಸುತ್ತಾ ಫಲಿತಾಂಶ ವೀಕ್ಷಿಸುತ್ತಿದ್ದರು.

ಮತ್ತೊಂದೆಡೆ ನಗರದ ಪ್ರಮುಖ ರಸ್ತೆಗಳಲ್ಲಿರುವ ಟಿವಿ ಶೋರೂಂಗಳ ಮುಂದೆ ಜನರು ನಿಂತು ಫಲಿತಾಂಶ ವೀಕ್ಷಿಸುವುದು ಕಂಡು ಬಂದಿತು. ಸಾರ್ವಜನಿಕ ಸ್ಥಳಗಳಲ್ಲಿ ಜನರು ತಮ್ಮ ಮೊಬೈಲ್ ಮೂಲಕ ಫಲಿತಾಂಶವನ್ನು ವೀಕ್ಷಿಸಿ ಕರ್ನಾಟಕದಲ್ಲಿ ಯಾರಿಗೆ ಎಷ್ಟು ಮತ ಬಂತು, ಓ ಅವರಿಗೆ ಒಳ್ಳೆ ಲೀಡ್ ಬಂದಿದೆ ಎಂದು ಪರಸ್ಪರ ಚರ್ಚೆ ಮಾಡಿಕೊಳ್ಳುತ್ತಿದ್ದದ್ದು ವಿಶೇಷವಾಗಿತ್ತು.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಒಡೆಯರ್ ಜಯಗಳಿಸಿದ ಹಿನ್ನೆಲೆಯಲ್ಲಿ ಶಾರದಾದೇವಿ ನಗರದಲ್ಲಿ ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಜೆಡಿಎಸ್ ಮುಖಂಡ ಸಿ.ಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ಮತದಾರನ ತೀರ್ಪಿಗೆ ತಲೆಬಾಗುವೆ: ಎಂ.ಲಕ್ಷ್ಮಣ

ಮೈಸೂರು, ಜೂ.4(ಆರ್‌ಕೆ)–ಚುನಾವಣೆಯಲ್ಲಿ ಮತದಾರ ಪ್ರಭು ನೀಡಿದ ತೀರ್ಪನ್ನು ಗೌರವಯುತವಾಗಿ ಒಪ್ಪಿಕೊಂಡು ತಲೆಬಾಗುತ್ತೇನೆ ಎಂದು ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪ್ರತಿಕ್ರಿಯಿಸಿದ್ದಾರೆ.

ಚುನಾವಣಾ ಫಲಿತಾಂಶ ಹೊರಬಿದ್ದ ಬಳಿಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಒಳ್ಳೆಯ ಕೆಲಸ ಮಾಡಿತ್ತು. ಅಲ್ಲದೆ, ನಮ್ಮ ಸರ್ಕಾರ ಜನಪರ ಅಭಿವೃದ್ಧಿ ಯೋಜನೆ, ಗ್ಯಾರಂಟಿಗಳನ್ನು ಕೊಟ್ಟಿದ್ದರಿಂದ ಜನ ಕೈಹಿಡಿಯುತ್ತಾರೆಂಬ ನಂಬಿಕೆ ಹುಸಿಯಾಗಿದೆ ಎಂದರು.



ಪಕ್ಷದ ಮುಖಂಡರು, ಕಾರ್ಯಕರ್ತರು, ಹಿತೈಷಿಗಳು ಈ ಬಾರಿ ಅತ್ಯುತ್ತಮ ಕೆಲಸ ಮಾಡಿ ಚುನಾವಣೆಗೆ ಶ್ರಮಿಸಿದ್ದರು. ಆದರೆ ಮತದಾರರು ಬೆಂಬಲಿಸದಿದ್ದರಿಂದ ಅವರಿಗೆ ನಿರಾಸೆಯುಂಟಾಗಿರುವುದು ನನಗೆ ಬೇಸರ ತಂದಿದೆ ಎಂದ ಅವರು, ಜನರ ತೀರ್ಪಿಗೆ ತಲೆ ಬಾಗಿ ಮುಂದೆ ಪಕ್ಷ ಸಂಘಟನೆಗೆ ದುಡಿಯುತ್ತೇನೆ ಹಾಗೂ ನನಗೆ ಮತ ನೀಡಿರುವ ಜನರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಯದುವೀರ್‌ಗೆ ಅಭಿನಂದನೆ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ದಾಖಲೆ ಮತಗಳ ಅಂತರದಿಂದ ವಿಜಯ ಸಾಧಿಸಿದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರನ್ನು ಬಿಜೆಪಿ ಮುಖಂಡ ರಘು ಆರ್.ಕೌಟಿಲ್ಯ ಅಭಿನಂದಿಸಿದರು.

ಜನರಿಲ್ಲದೆ ಭಣಗುಟ್ಟಿದ ಮತ ಎಣಿಕಾ ಕೇಂದ್ರ



ಮೈಸೂರು: ಯಾವುದೇ ಚುನಾವಣೆಯ ಫಲಿತಾಂಶ ಸಂದರ್ಭ ಮತ ಎಣಿಕೆ ಕೇಂದ್ರದ ಮುಂದೆ ಸಾವಿರಾರು ಜನರು ಜಮಾವಣೆಗೊಳ್ಳುತ್ತಿದ್ದರು. ಪ್ರತಿ ಸುತ್ತಿನ ಮತ ಎಣಿಕೆಯ ವಿವರ, ಲೀಡ್ ಸೇರಿದಂತೆ ಇತರೆ ಮಾಹಿತಿಗಾಗಿ ಕುತೂಹಲದಿಂದ ಕಾಯುತ್ತಿದ್ದರು.

ಅದರಂತೆ ಇಂದು ಕೂಡ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತ ಎಣಿಕಾ ಕೇಂದ್ರ ಮಹಾರಾಣಿ ಕಾಲೇಜಿನ ಮುಂದೆ ಸಾವಿರಾರು ಜನರು ಸೇರುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಬಂದೋಬಸ್ತ್‌ಗೆ ಹೆಜ್ಜೆ ಹೆಜ್ಜೆಗೂ ಪೊಲೀಸರನ್ನು ನಿಯೋಜಿಸಲಾಗಿತ್ತು. ನಗರ ಪೊಲೀಸ್ ಆಯುಕ್ತ ರಮೇಶ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ ಸೇರಿದಂತೆ ಇತರೆ ಅಧಿಕಾರಿಗಳು ಮತ ಎಣಿಕಾ ಕೇಂದ್ರದಲ್ಲೇ ಮೊಕ್ಕಾಂ ಹೂಡಿದ್ದರು.

ಮತ ಎಣಿಕಾ ಕೇಂದ್ರದ ಬಳಿ ಯಾರೂ ಸುಳಿಯದಂತೆ ಬ್ಯಾರಿಕೇಡ್ ಹಾಕಲಾಗಿತ್ತು. ಹಾಗಾಗಿ ಎಣಿಕಾ ಕೇಂದ್ರದ ಮುಂದೆ ಸಾವಿರ ಇರಲಿ, ನೂರು... ಇಲ್ಲಾ ಹತ್ತು ಜನ ಕೂಡ ಇರಲಿಲ್ಲ.

ಟಿವಿ ಚಾನಲ್‌ಗಳು, ಚುನಾವಣಾ ಆಯೋಗದ ವೆಬ್‌ಸೈಟ್ ಸೇರಿದಂತೆ ಇತರೆ ಮಾಧ್ಯಮಗಳ ಮೂಲಕ ಮತ ಎಣಿಕೆಯ ಪಿನ್ ಟು ಪಿನ್ ಮಾಹಿತಿ ಕುಳಿತ್ತಿದ್ದ ಸ್ಥಳದಲ್ಲೇ ದೊರೆಯುತ್ತಿದ್ದ ಕಾರಣ ಯಾರೂ ಕೂಡ ಮತ ಎಣಿಕಾ ಕೇಂದ್ರದತ್ತ ಸುಳಿಯಲಿಲ್ಲ.

ಮೈಸೂರಲ್ಲಿ ಬಿಜೆಪಿ ಕಾರ್ಯಕರ್ತರ ಸಂಭ್ರಮಾಚರಣೆ

ಮೈಸೂರು, ಜೂ.4(ಜಿಎ)–ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿ ಸಂಭ್ರಮಾಚರಿಸಿದರು.

ದೇಶದಾದ್ಯಂತ ಲೋಕಸಭಾ ಚುನಾವಣೆಯ ಫಲಿತಾಂಶಕ್ಕೆ ಕಾದು ಕುಳಿತಿದ್ದ ಬಿಜೆಪಿ ಕಾರ್ಯಕರ್ತರಿಗೆ ಮೈಸೂರು–ಕೊಡಗು ಕ್ಷೇತ್ರದ ಅಭ್ಯರ್ಥಿ ಯದುವೀರ್ ಒಡೆಯರ್ ತಮ್ಮ ಎದುರಾಳಿ ಅಭ್ಯರ್ಥಿ ಕಾಂಗ್ರೆಸ್‌ನ ಎಂ.ಲಕ್ಷ್ಮಣ್ ಮುಂದೆ ಮುನ್ನಡೆ ಸಾಧಿಸಿ, ಗೆಲುವಿನತ್ತ ಮುಖ ಮಾಡುತ್ತಿದ್ದಂತೆ ನಗರದ ಬಿಜೆಪಿ ಕಚೇರಿಯಲ್ಲಿ ಸಂಭ್ರಮ ಮನೆ ಮಾಡಿತು. ಈ ವೇಳೆ ಕಚೇರಿ ಮುಂಭಾಗ ಪಟಾಕಿ ಸಿಡಿಸಿ ಕುಣಿದು ಕುಪ್ಪಳಿಸಿದರು.

ಬಿಜೆಪಿ ಕಚೇರಿ ಮುಂಭಾಗ ಸೇರಿದ ನೂರಾರು ಕಾರ್ಯಕರ್ತರಿಗೆ ಕೊಡಗಿನಿಂದ ಬಂದಿದ್ದ ಕಾರ್ಯಕರ್ತರು ಸಾಥ್ ನೀಡಿ ತಮಟೆ ಬಾರಿಸಿ ಕೊಡಗಿನ ಸಾಂಪ್ರದಾಯಿಕ ನೃತ್ಯ ಮಾಡಿ ಕುಣಿದ ಕಾರ್ಯಕರ್ತರು ಪರಸ್ಪರ ಹಸ್ತಲಾಘವ ಮಾಡಿಕೊಂಡು ಶುಭ ಕೋರಿದರು.



ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ಸಿಹಿ ಹಂಚಿ, ಸಂಭ್ರಮಾಚರಿಸಿದರು.

ಮತ್ತೊಂದೆಡೆ ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ನಗರದ ಅಗ್ರಹಾರದಲ್ಲಿರುವ 101 ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಪರಸ್ಪರ ಸಿಹಿ ಹಂಚಿ ಯದುವೀರ್, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಭಾವಚಿತ್ರ ಹಿಡಿದು ಜೈಕಾರ ಕೂಗಿದರು.

ಈ ಸಂದರ್ಭದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೈಸೂರು–ಕೊಡಗು ಕ್ಷೇತ್ರವನ್ನು ಉಳಿಸಿಕೊಳ್ಳುವುದಲ್ಲಿ ಮತದಾರರು ನಮ್ಮ ಕೈಹಿಡಿದಿದ್ದಾರೆ. ಎರಡು ಬಾರಿ ಪ್ರತಾಪ್ ಸಿಂಹ ಗೆದ್ದಿದ್ದರು. ಈಗ ಯದುವೀರ್ ಅವರು ಗೆಲುವು ದಾಖಲಿಸಿದ್ದಾರೆ. ಯದುವೀರ್ ಎಸಿ ರೂಂನಲ್ಲಿ ಇರುತ್ತಾರೆ. ಸಾರ್ವಜನಿಕರೊಂದಿಗೆ ಬೆರೆಯುವುದಿಲ್ಲ. ಅರಮನೆಗೆ ಅವರು ಸೀಮಿತ ಎಂದು ಆರೋಪ ಮಾಡಿದರೂ, ಒಕ್ಕಲಿಗ ಕಾರ್ಡ್ ಬಳಕೆ ಮಾಡಿ ಒಕ್ಕಲಿಗ ಮತ ಸೆಳೆಯುವಲ್ಲಿ ಕಾಂಗ್ರೆಸ್ ವಿಫಲವಾಗಿದ್ದು, ಜೆಡಿಎಸ್‌ನೊಂದಿನ ಮೈತ್ರಿಯಿಂದ ಒಳಿತಾಗಿದೆ ಎಂದರು.

ಯಾವ ಯಾವ ಕ್ಷೇತ್ರದಲ್ಲಿ ನಾವು ಮತಗಳು ಕಡಿಮೆ ಬರುತ್ತದೆ ಎಂಬ ಭಾವನೆ ಇತ್ತು. ಆ ಕ್ಷೇತ್ರಗಳಲ್ಲಿಯೇ ಹೆಚ್ಚು ಮತ ದೊರೆತಿದೆ. ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಡಿಕೆಶಿ ಅವರಿಗೆ ಮುಖಭಂಗವಾಗಿದೆ. ಇಬ್ಬರೂ ತಮ್ಮ ತವರು ಕ್ಷೇತ್ರದಲ್ಲಿಯೇ ಸೋತಿದ್ದಾರೆ. ಮಹಿಳಾ ಮತದಾರರು ನಮ್ಮ ಕೈಹಿಡಿಯುತ್ತಾರೆ ಎಂಬ ಭಾವನೆಯಲ್ಲಿದ್ದರು. ಆದರೆ, ಅದು ಉಲ್ಟಾ ಆಗಿದೆ. ಎಲ್ಲವನ್ನು ಮೀರಿ ಜನರು ಬಿಜೆಪಿಗೆ ಮತ ನೀಡಿದ್ದಾರೆ ಎಂದು ತಿಳಿಸಿದರು.

ಗೆಲುವಿಗೂ ಮುಂಚೆ ಯದುವೀರ್ ನಾಮಫಲಕಕ್ಕೆ ಬೆಟ್ಟದಲ್ಲಿ ಪೂಜೆ

ಮೈಸೂರು, ಜೂ.4(ಜಿಎ)– ಮೈಸೂರು–ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವುದು ಖಚಿತವಾಗುತ್ತಿದ್ದಂತೆ ಫಲಿತಾಂಶಕ್ಕೂ ಮೊದಲೇ ಯದುವೀರ್ ಯುವ ಬ್ರಿಗೇಡ್ ಮೈಸೂರು ತಂಡದ ವತಿಯಿಂದ ಸಂಸದರ ನಾಮಫಲಕ ಸಿದ್ಧಪಡಿಸಿ, ಚಾಮುಂಡಿಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಯದುವೀರ್ ಲೋಕಸಭಾ ಚುನಾವಣೆಯಲ್ಲಿ ಗೆದ್ದೆ ಗೆಲ್ಲುತ್ತಾರೆ ಎಂಬ ಆತ್ಮವಿಶ್ವಾಸದಿಂದ ಮುಂಚಿತವಾಗಿ 'ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ' ಎಂಬ ನಾಮಫಲಕವನ್ನು ಸಿದ್ಧಪಡಿಸಿ ಯದುವೀರ್‌ಗೆ ಉಡುಗೊರೆಯಾಗಿ ನೀಡಲು ಮುಂದಾದರು.

ಯದುವೀರ್ ಯುವ ಬ್ರಿಗೇಡ್ ಮೈಸೂರು ತಂಡದ ಸದಸ್ಯರು ಬೆಳಗ್ಗೆ 9.30ಕ್ಕೆ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಯದುವೀರ್ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ ಅಭಿಷೇಕ ಮಾಡಿಸಿದರು. ನಂತರ ಯದುವೀರ್ ಅವರಿಗೆ ಈ ನಾಮಫಲಕ ನೀಡಲು ತೆರಳಿದರು. ಈ ಸಂದರ್ಭದಲ್ಲಿ ಬ್ರಿಗೇಡ್‌ನ ಅಧ್ಯಕ್ಷ ದರ್ಶನ್ ಯದುರಾಜ್, ಪ್ರಶಾಂತ್, ಪ್ರವೀಣ್, ವಿಜಯ್, ನರೇಂದ್ರ ಉಪಸ್ಥಿತರಿದ್ದರು.



ಚಾಮುಂಡಿಬೆಟ್ಟದಲ್ಲಿ ಯದುವೀರ್ ಒಡೆಯರ್ ನಾಮಫಲಕಕ್ಕೆ ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರು ಮಿತ್ರ ಬುಧವಾರ 5 ಜೂನ್ 2024

ಮೂರನೇ ಬಾರಿ ಗೆದ್ದು ಕ್ಷೇತ್ರ ಕಾಪಾಡಿಕೊಂಡ ಬಿಜೆಪಿ

ಕಾಂಗ್ರೆಸ್ ಕಾರ್ಯಕರ್ತರಲ್ಲಿ ನಿರಾಸೆ ಮೂಡಿಸಿದ ಎಂ.ಲಕ್ಷ್ಮಣ ಸೋಲು

ಮಡಿಕೇರಿ, ಜೂ.4–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ 3ನೇ ಬಾರಿಗೆ ಬಿಜೆಪಿ ಗೆಲುವು ಸಾಧಿಸಿದ್ದು, ತನ್ನ ಕ್ಷೇತ್ರವನ್ನು ಕಾಪಾಡಿಕೊಂಡಿದೆ. ಅಲ್ಲದೇ ಎನ್‌ಡಿಎ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪಡೆದಿರುವ ಲೀಡ್ ಬಿಜೆಪಿಗರನ್ನೇ ಅಚ್ಚರಿಗೆ ದೂಡಿದ್ದರೆ, ವ್ಯವಸ್ಥಿತ ಹಾಗೂ ಸಂಘಟನಾತ್ಮಕವಾಗಿ ಪ್ರಚಾರ ನಡೆಸಿದ್ದರೂ, ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಸೋಲು ಪಕ್ಷ ಮುಖಂಡರು ಮತ್ತು ಕಾರ್ಯಕರ್ತರಲ್ಲಿ ನಿರಾಸೆ ಮೂಡಿಸಿದೆ.

ವಿವಿಧ ರಾಜಕೀಯ ಕಾರಣಗಳಿಂದ ಕ್ಷೇತ್ರದಲ್ಲಿ ಬಿಜೆಪಿ ಈ ಬಾರಿ ಅತ್ಯಂತ ನೀರಸ ಪ್ರಚಾರ ಕೈಗೊಂಡಿದ್ದರೂ, ತಮ್ಮ ಅಭ್ಯರ್ಥಿ 60 ರಿಂದ 80 ಸಾವಿರ ಲೀಡ್ ಪಡೆಯಬಹುದು ಎಂದೇ ಬಿಜೆಪಿ ಪ್ರಮುಖರು ಹೇಳುತ್ತಿದ್ದರು. ಆದರೆ, ಇದೀಗ 1.39 ಲಕ್ಷ ಭರ್ಜರಿ ಲೀಡ್ ಪಡೆದು ಯದುವೀರ್ ಗೆದ್ದಿರುವುದು ಬಿಜೆಪಿಗೇ ಅಚ್ಚರಿ ತಂದಿದೆ. ಮೈಸೂರು ರಾಜ ಮನೆತನದ 27ನೇ ಯುವರಾಜ 32 ವರ್ಷದ ಯದುವೀರ್ ಇದೀಗ ಸಂಸದರಾಗಿ ಆಯ್ಕೆಯಾಗಿದ್ದು, ಹೊಸ ಸಂಸದರ ಮೇಲೆ ಸಾಕಷ್ಟು ನಿರೀಕ್ಷೆಗಳನ್ನು ಉಂಟು ಮಾಡಿದೆ. ಶ್ರೀಕಂಠದತ್ತ ಒಡೆಯರ್ ಬಳಿಕ 20 ವರ್ಷಗಳ ನಂತರ ಮೈಸೂರು ಅರಮನೆಯಿಂದ ಯದುವೀರ್ ಮೂಲಕ ಮತ್ತೋರ್ವ ಯುವ ರಾಜಕಾರಣಿ ಸಂಸತ್ತಿಗೆ ಪಾದರ್ಪಣೆ ಮಾಡುವಂತಾಗಿದೆ.

ಪ್ರಾಬಲ್ಯವಿದ್ದರೂ 'ಕೈ' ಪರಾಜಯ: ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆ ಮೈಸೂರಿನಲ್ಲಿ ಕಾಂಗ್ರೆಸ್ ಗೆಲ್ಲುವುದು ಪ್ರತಿಷ್ಠೆಯಾಗಿತ್ತು. ಮೈಸೂರು–ಕೊಡಗು ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳ ಪೈಕಿ 5 ರಲ್ಲಿ ಕಾಂಗ್ರೆಸ್ ಹಾಗೂ 2 ಕ್ಷೇತ್ರದಲ್ಲಿ ಜೆಡಿಎಸ್ ಶಾಸಕರಿದ್ದರು. ಆದರೆ, ಕೇವಲ 1 ಕ್ಷೇತ್ರದಲ್ಲಿ ಮಾತ್ರ ಬಿಜೆಪಿಯ ಶಾಸಕರಿದ್ದರು. ಹೀಗಿದ್ದರೂ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷಣ ವಿರುದ್ಧ ಸ್ಪರ್ಧಿಸಿದ್ದ ಮೈಸೂರು ರಾಜವಂಶಸ್ಥ ಯದುವೀರ್ 1.39 ಲಕ್ಷ ಮತಗಳ ಅಂತರದಿಂದ ಗೆಲುವು ಪಡೆದಿದ್ದಾರೆ.

ಮೈಸೂರಿನ ಮಹಾರಾಣಿ ವಾಣಿಜ್ಯ ಕಾಲೇಜಿನಲ್ಲಿ ಮತ ಎಣಿಕೆ ಕಾರ್ಯ ನಡೆದಿದ್ದು, ಆರಂಭದಿಂದಲೇ ಯದುವೀರ್ ಮುನ್ನಡೆ ಕಾಯ್ದುಕೊಂಡು ಗೆಲುವು ಸಾಧಿಸಿದರು. 2 ಬಾರಿ ಪ್ರತಾಪ್ ಸಿಂಹ ಪ್ರತಿನಿಧಿಸಿದ್ದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿಯೂ ಪ್ರತಾಪ್ ಸಿಂಹ ಸ್ಪರ್ಧಿಸುತ್ತಾರೆ ಎಂಬ ನಿರೀಕ್ಷೆಯಿತ್ತು. ಆದರೆ, ಕೊನೇ ಹಂತದಲ್ಲಿ ಬಿಜೆಪಿ ವರಿಷ್ಠರು ಯದುವೀರ್ ಅವರನ್ನು ಕಣಕ್ಕಿಳಿಸುವ ಮೂಲಕ ಅಚ್ಚರಿ ಮೂಡಿಸಿದ್ದರು.

ಬಿಜೆಪಿಗೆ ಮಾತ್ರವಲ್ಲದೇ ರಾಜಕೀಯಕ್ಕೆ ಹೊಸ ಮುಖವಾಗಿದ್ದ ಯದುವೀರ್ ಜಿಲ್ಲೆಯಲ್ಲೂ ಪ್ರಚಾರ ನಡೆಸಿದ್ದರು. ಯದುವೀರ್ ವಿರುದ್ಧ ಕಾಂಗ್ರೆಸ್ ಎಂ.ಲಕ್ಷಣ್ ಅವರನ್ನು ಕಣಕ್ಕಿಳಿಸಿತ್ತು. ಕಾಂಗ್ರೆಸ್ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಮತ್ತು ಪ್ರಧಾನಿ ನರೇಂದ್ರ ಮೋದಿ ಗ್ಯಾರಂಟಿಯ ನಡುವೆ ಈ ಬಾರಿಯ ಸ್ಪರ್ಧೆ ಎಂದೇ ಬಿಂಬಿಸಲಾಗಿತ್ತು. ನಾನು ಸಾಮಾನ್ಯರಲ್ಲಿ ಸಾಮಾನ್ಯ, ಸದಾ ಜನರ ಸೇವೆಗೆ ದೊರಕುತ್ತೇನೆ ಎಂದೇ ಲಕ್ಷ್ಮಣ್ ಮತ್ತು ಕಾಂಗ್ರೆಸ್ ಪ್ರಚಾರ ಕೈಗೊಂಡಿತ್ತು. ಈಗ ರಾಜರ ವ್ಯವಸ್ಥೆ ಇಲ್ಲ, ನಾನೂ ಜನರ ಜೊತೆ ಬೆರೆಯುತ್ತೇನೆ ಎಂದು ಯದುವೀರ್ ಸ್ಪಷ್ಟನೆ ನೀಡುತ್ತಲೇ ಪ್ರಚಾರ ಕೈಗೊಂಡಿದ್ದರು. ಇದೀಗ ಫಲಿತಾಂಶ ಪ್ರಕಟವಾಗಿದ್ದು, ಮೈಸೂರಿನ ಯುವ ರಾಜರಾದ ಯದುವೀರ್ ಅವರನ್ನೇ ಮತದಾರ ಸಂಸತ್ ಭವನಕ್ಕೆ ತಮ್ಮ ಪ್ರತಿನಿಧಿಯಾಗಿ ಆಯ್ಕೆ ಮಾಡಿದ್ದಾರೆ.

ಬಿಜೆಪಿಗೆ ಅಚ್ಚರಿಯ ಲೀಡ್

ಬಿಜೆಪಿಯ ಯದುವೀರ್ ಅವರಿಗೆ 7,95,503 ಮತಗಳು ಲಭಿಸಿದ್ದರೆ, ಕಾಂಗ್ರೆಸ್‌ನ ಎಂ.ಲಕ್ಷ್ಮಣ 6,56,241 ಮತಗಳನ್ನು ಪಡೆದರು. 2014ರ ಚುನಾವಣೆಯಲ್ಲಿ ಪ್ರತಾಪ್ ಸಿಂಹ 31,608 ಮತಗಳ ಲೀಡ್ ಪಡೆದಿದ್ದು, 2019ರಲ್ಲಿ 1,38,647 ಮತಗಳ ಲೀಡ್ ಪಡೆದಿದ್ದರು. ಆದರೆ, ಈ ಬಾರಿ ಆ ಲೀಡ್‌ಗಳನ್ನೂ ಮೀರಿ ಯದುವೀರ್ 1,39,262 ಮತಗಳ ಲೀಡ್ ಪಡೆಯುವಲ್ಲಿ ಸಫಲರಾಗಿದ್ದಾರೆ. ಕ್ಷೇತ್ರದಲ್ಲಿ 5 ಕಾಂಗ್ರೆಸ್ ಶಾಸಕರಿದ್ದರೂ ಬಿಜೆಪಿಯ ಗೆಲುವು ಅಚ್ಚರಿ ಮೂಡಿಸಿದೆ. ಕ್ಷೇತ್ರದಲ್ಲಿ ಜೆಡಿಎಸ್ ಮತದಾರರೂ ಮೈತ್ರಿ ಅಭ್ಯರ್ಥಿಗೆ ಮತ ಹಾಕಿದ್ದು ಕೂಡ ಯದುವೀರ್ ಗೆಲುವಿಗೆ ಕಾರಣ ಎನ್ನಲಾಗಿದೆ. 42 ವರ್ಷಗಳ ಬಳಿಕ ಒಕ್ಕಲಿಗ ಸಮುದಾಯದ ಅಭ್ಯರ್ಥಿಯನ್ನೇ ಕಾಂಗ್ರೆಸ್ ಕಣಕ್ಕಿಳಿಸಿದ್ದರೂ ಈ ತಂತ್ರ ಒಕ್ಕಲಿಗರ ಮತ ಸೆಳೆಯುವಲ್ಲಿ ಸಫಲವಾಗಲಿಲ್ಲ ಎಂಬ ಮಾತುಗಳು ರಾಜಕೀಯ ಪಡಸಾಲೆಯಲ್ಲಿ ಕೇಳಿ ಬರುತ್ತಿದೆ.

ಕುಶಾಲನಗರದಲ್ಲಿ ಬಿಜೆಪಿ ಕಾರ್ಯಕರ್ತರ ಸಂಭ್ರಮಾಚರಣೆ



ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಯದುವೀರ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ಕುಶಾಲನಗರದಲ್ಲಿ ಸಂಭ್ರಮಾಚರಿಸಿದರು.

ಕುಶಾಲನಗರ, ಜೂ.4–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಯದುವೀರ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮಂಗಳವಾರ ಬಿಜೆಪಿ ಕಾರ್ಯಕರ್ತರು ಪಟ್ಟಣದಲ್ಲಿ ಸಂಭ್ರಮ ಆಚರಿಸಿದರು. ಪಟ್ಟಣದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಕುಣಿದು ಸಂತಸಪಟ್ಟರು.

ಬಿಜೆಪಿ ನಗರಾಧ್ಯಕ್ಷ ಎಂ.ಎಂ.ಚರಣ್ ಮಾತನಾಡಿ, ಕೇಂದ್ರದಲ್ಲಿ ಎನ್‌ಡಿಎ ಒಕ್ಕೂಟ ಅಧಿಕಾರಕ್ಕೆ ಬಂದಿದೆ. ಕೊಡಗು–ಮೈಸೂರು ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಗೆ ಕೊಡಗಿನಿಂದ 73 ಸಾವಿರಕ್ಕೂ ಅಧಿಕ ಮತಗಳ ಲೀಡ್ ನೀಡಿದ್ದು, ಯದುವೀರ್ ಅಭೂತಪೂರ್ವ ಗೆಲುವು ಸಾಧಿಸಿದ್ದಾರೆ. ಇದಕ್ಕೆ ಬಿಜೆಪಿ ಹಾಗೂ ಜೆಡಿಎಸ್ ಮತದಾರರು, ಕಾರ್ಯಕರ್ತರು ಶ್ರಮಿಸಿದ್ದಾರೆ ಎಂದು ತಿಳಿಸಿದರು. ಪುರಸಭೆ ಸದಸ್ಯ ಬಿ.ಜೈ ವರ್ಧನ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಯನ್ನು ಕ್ಷೇತ್ರದ ಮತದಾರರು ಸ್ಮರಿಸಿದ್ದಾರೆ. ನಿರೀಕ್ಷೆಯಂತೆ ಯದುವೀರ್ ಅವರು ಗೆಲುವು ಸಾಧಿಸಿದ್ದು, ಕೊಡಗಿನ ಮಾಜಿ ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ ಹಾಗೂ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರ ಪಾತ್ರ ಪ್ರಮುಖವಾಗಿದೆ ಎಂದರು.

ಇದೇ ವೇಳೆ ಕುಶಾಲನಗರದ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸಚಿನ್, ಮುಖಂಡರಾದ ಮಧುಸೂದನ್, ಉಮಾಶಂಕರ್, ಡಿ.ಕೆ.ತಿಮ್ಮಪ್ಪ, ನಾರಾಯಣ, ಪುಂಡರೀಕಾಕ್ಷ, ಎಂ.ಡಿ.ಕೃಷ್ಣಪ್ಪ, ಚಂದ್ರಶೇಖರ್ ಹೆರೂರು, ವೈಶಾಖ್, ಪ್ರವೀಣ್, ಬಾಲಾಜಿ, ಮಣಿ, ರಾಮನಾಥನ್, ಅವಿನಾಶ್, ಸಂತೋಷ್, ನವನೀತ್, ಬೋಸ್ ಮೊಣ್ಣಪ್ಪ, ಆದರ್ಶ್, ಜೆಡಿಎಸ್‌ನ ಎಂ.ಬಿ.ಸುರೇಶ್, ಚಂದ್ರು ಹಾಗೂ ವಿವಿಧ ಘಟಕಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಲೀಡ್ ಹೆಚ್ಚಳಕ್ಕೆ ಕೊಡಗು ಜಿಲ್ಲೆ ಪಾತ್ರ

ಮಡಿಕೇರಿ, ಜೂ.4– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ 1.39 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದು, ಕೊಡಗು ಜಿಲ್ಲೆಯಲ್ಲಿ ಯದುವೀರ್‌ಗೆ 73 ಸಾವಿರ ಮತಗಳ ಲೀಡ್ ದೊರಕಿದೆ. ಇದು ಅವರ ಗೆಲುವಿನ ಲೀಡ್ ಹೆಚ್ಚಳವಾಗುವಲ್ಲಿ ಕೊಡಗು ಜಿಲ್ಲೆ ಪ್ರಮುಖ ಪಾತ್ರ ವಹಿಸಿದೆ ಎಂದು ಕೊಡಗು ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಸಂತಸ ವ್ಯಕ್ತಪಡಿಸಿದರು.



ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ 32,451 ಮತಗಳ ಲೀಡ್ ಪಡೆದಿದ್ದರೆ, ಮಡಿಕೇರಿ ಕ್ಷೇತ್ರದಲ್ಲಿ 41,408 ಮತಗಳ ಲೀಡ್ ಪಡೆದುಕೊಂಡಿದೆ ಜಿಲ್ಲೆಯಲ್ಲಿ ಬಿಜೆಪಿಗೆ ಕಾಂಗ್ರೆಸ್‌ಗಿಂತ 73,859 ಲೀಡ್ ದೊರಕಿದೆ. ಆದ್ದರಿಂದ ಮತದಾರರು, ಬಿಜೆಪಿ, ಜೆಡಿಎಸ್ ನಾಯಕರು ಹಾಗೂ ಕಾರ್ಯಕರ್ತರಿಗೆ ಧನ್ಯವಾದ ತಿಳಿಸುವುದಾಗಿ ಹೇಳಿದರು.

ಕೊಡಗು ಜಿಲ್ಲೆಯ ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರಿದ್ದು, ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಜಾರಿಯಾಗಿದ್ದವು. ಹೀಗಿದ್ದರೂ ಕೊಡಗಿನ ಮತದಾರರು ಬಿಜೆಪಿ ಅಭ್ಯರ್ಥಿಗೆ ಮತ ನೀಡಿ ಗೆಲುವಿಗೆ ಕಾರಣರಾಗಿದ್ದಾರೆ. 2019ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪ್ರತಾಪ್ ಸಿಂಹ ಕೊಡಗಿನಲ್ಲಿ 82 ಸಾವಿರ ಲೀಡ್ ಪಡೆದಿದ್ದರು. ಈ ಬಾರಿ ಜಿಲ್ಲೆಯಲ್ಲಿ ಯದುವೀರ್‌ಗೆ 73 ಸಾವಿರ ಮತಗಳ ಲೀಡ್ ದೊರಕಿದೆ ಎಂದರು.

ಸುಂಟಿಕೊಪ್ಪದಲ್ಲಿ ಬಿಜೆಪಿ ವಿಜಯೋತ್ಸವ



ಸುಂಟಿಕೊಪ್ಪ, ಜೂ.4– ಇಲ್ಲಿನ ಕನ್ನಡ ವೃತ್ತದಲ್ಲಿ ಜಮಾವಣೆಗೊಂಡ ಬಿಜೆಪಿ ಕಾರ್ಯಕರ್ತರು, ಎನ್‌ಡಿಎ ಅಭ್ಯರ್ಥಿ ಯದುವೀರ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು. ಬಿಜೆಪಿ ಕಾರ್ಯಕರ್ತರು ಪಕ್ಷದ ಧ್ವಜ ಹಿಡಿದು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಜೆಡಿಎಸ್ ಹಾಗೂ ಎನ್‌ಡಿಎ ಪರ ಘೋಷಣೆ ಕೂಗಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು. ಈ ಸಂದರ್ಭ ಗ್ರಾಪಂ ಅಧ್ಯಕ್ಷ ಪಿ.ಆರ್.ಸುನೀಲ್ ಕುಮಾರ್, ಸುಂಟಿಕೊಪ್ಪ ಸ್ಥಾನೀಯ ಸಮಿತಿ ಅಧ್ಯಕ್ಷ ಧನು ಕಾವೇರಪ್ಪ, ಕಾರ್ಯದರ್ಶಿ ವಿ.ಕೆ.ರಾಜ, ಅಧ್ಯಕ್ಷ ಪ್ರಶಾಂತ್(ಕೋಕ), ಗ್ರಾಪಂ ಸದಸ್ಯರಾದ ಬಿ.ಎಂ.ಸುರೇಶ್, ಗೀತಾ, ಪಕ್ಷದ ಹಿರಿಯ ಮುಖಂಡ ಡಿ.ನರಸಿಂಹ, ಗ್ರಾಪಂ ಮಾಜಿ ಅಧ್ಯಕ್ಷೆ ಬಿ.ಐ.ಭವಾನಿ, ಮಾಜಿ ಉಪಾಧ್ಯಕ್ಷ ಬಿ.ಕೆ.ಮೋಹನ, ಮಾಜಿ ಸದಸ್ಯರಾದ ಗೀತಾ, ಆನಂದ, ಹರೀಶ್, ಸಹನಾ ಹಾಜರಿದ್ದರು.

ಜಿಲ್ಲಾಧಿಕಾರಿ, ಎನ್‌ಡಿಆರ್‌ಎಫ್ ತಂಡ ಚರ್ಚೆ



ಎನ್‌ಡಿಆರ್‌ಎಫ್ ತಂಡ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರೊಂದಿಗೆ ಮುಂಗಾರು ಮಳೆಯ ಮುನ್ನೆಚ್ಚರಿಕೆ ಅಗತ್ಯ ಕ್ರಮಗಳ ಕುರಿತು ಚರ್ಚಿಸಿತು.

ಮಡಿಕೇರಿ ಜೂ.4– ಜಿಲ್ಲೆಗೆ ಆಗಮಿಸಿರುವ ಎನ್‌ಡಿಆರ್‌ಎಫ್ ತಂಡ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರನ್ನು ಸೋಮವಾರ ಭೇಟಿ ಮಾಡಿ, ಮುಂಗಾರು ಮಳೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಅಗತ್ಯ ಕ್ರಮಗಳ ಕುರಿತು ಚರ್ಚಿಸಿತು. ಮಳೆಗಾಲದಲ್ಲಿ ಅನುಸರಿಸಬೇಕಾದ ರಕ್ಷಣಾ ಕಾರ್ಯ, ಪ್ರಕೃತಿ ವಿಕೋಪ ಎದುರಿಸುವುದು ಸೇರಿದಂತೆ ವಿವಿಧ ಚಟುವಟಿಕೆ ಕುರಿತು ಎನ್‌ಡಿಆರ್‌ಎಫ್‌ನ ಅಜಯ್ ಕುಮಾರ್ ನೇತೃತ್ವದ ತಂಡ ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಿತು.

ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ಮಳೆ ಕುರಿತು ಹವಾಮಾನ ಇಲಾಖೆಯಿಂದ ಕಾಲಕಾಲಕ್ಕೆ ಬಿಡುಗಡೆ ಆಗುವ ಮಾಹಿತಿಯನ್ನು ಅಪ್‌ಡೇಟ್ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಎಚ್ಚರವಹಿಸಿ, ರಕ್ಷಣಾ ಕಾರ್ಯಗಳನ್ನು ಕೈಗೊಳ್ಳಬೇಕು ಎಂದರು.

ಇದೇ ವೇಳೆ ಜಿಲ್ಲಾ ವಿಪತ್ತು ನಿರ್ವಹಣಾ ಪರಿಣತ ಅನನ್ಯ ವಾಸುದೇವ, ಎನ್‌ಡಿಆರ್‌ಎಫ್ ತಂಡ ಪ್ರಮುಖರು ಇದ್ದರು. ಎನ್‌ಡಿಆರ್‌ಎಫ್ ತಂಡ ಬೆಂಗಳೂರಿನ ಆರ್‌ಆರ್‌ಸಿ ವಿಭಾಗದಿಂದ ಆಗಮಿಸಿದೆ.

ಚಾಮರಾಜನಗರ ಸುನೀಲ್ ಬೋಸ್ 'ಕೈ' ವಶ

ಕಾಂಗ್ರೆಸ್ ಅಭ್ಯರ್ಥಿಗೆ 1,88,453 ಮತಗಳ ದಾಖಲೆ ಅಂತರದ ಜಯ

ಚಾಮರಾಜನಗರ, ಜೂ.4– ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ತೀವ್ರ ಹಣಾಹಣಿಗೆ ವೇದಿಕೆಯಾಗಿದ್ದ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ದಾಖಲಿಸಿದ್ದು, ಕ್ಷೇತ್ರದ ನೂತನ ಸಂಸದರಾಗಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್ ಆಯ್ಕೆಯಾಗಿದ್ದಾರೆ.

ಲೋಕಸಭಾ ಚುನಾವಣೆಯ ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ 7,48,885 ಮತಗಳನ್ನು ಪಡೆಯುವ ಮೂಲಕ ಎದುರಾಳಿ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ವಿರುದ್ಧ 1,88,453 ಮತಗಳ ಅಂತರದಲ್ಲಿ ದಾಖಲೆಯ ಗೆಲುವು ದಾಖಲಿಸಿದ್ದಾರೆ.



ಚಾಮರಾಜನಗರದಲ್ಲಿ ಕಾಂಗ್ರೆಸ್ ವಿಜೇತ ಅಭ್ಯರ್ಥಿ ಸುನೀಲ್ ಬೋಸ್ ಅವರನ್ನು ಪಕ್ಷದ ಕಾರ್ಯಕರ್ತರು ಹೊತ್ತು ಸಂಭ್ರಮಿಸಿದರು.

> ಕ್ಷೇತ್ರದ ಮತದಾರರು ನನಗೆ ಹೊಸ ಜವಾಬ್ದಾರಿಯನ್ನು ನೀಡಿದ್ದಾರೆ. ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುವ ಪ್ರಯತ್ನವನ್ನು ಮಾಡುತ್ತೇನೆ. ಜನರಿಗೆ ಉದ್ಯೋಗ ಕಲ್ಪಿಸುವುದು, ಕಾಡಾಂಚಿನ ಪ್ರದೇಶಗಳಲ್ಲಿನ ಜನರ ಆರೋಗ್ಯ ತಪಾಸಣೆಗಾಗಿ ಸಂಚಾರಿ ಆಂಬುಲೆನ್ಸ್ ವ್ಯವಸ್ಥೆ ಕಲ್ಪಿಸಲು ಶ್ರಮಿಸಲಾಗುವುದು.
> **-ಸುನೀಲ್ ಬೋಸ್,** ವಿಜೇತ ಕಾಂಗ್ರೆಸ್ ಅಭ್ಯರ್ಥಿ

ಚುನಾವಣೆ ಘೋಷಣೆಯಾದ ಬಳಿಕ ಜಿಲ್ಲೆಯಲ್ಲಿ ಕಾಂಗ್ರೆಸ್ ಗೆಲ್ಲಿಸುವ ಹಠದೊಂದಿಗೆ ಚುನಾವಣಾ ಕಣಕ್ಕೆ ಇಳಿದ ಕ್ಷೇತ್ರದ 7 ಕಾಂಗ್ರೆಸ್ ಶಾಸಕರು ಪಕ್ಷದ ಅಭ್ಯರ್ಥಿ ಗೆಲುವಿಗಾಗಿ ಸಾಕಷ್ಟು ಶ್ರಮಿಸಿದರು. ಅಲ್ಲದೇ, ಚುನಾವಣೆಗೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲಾ ಕ್ಷೇತ್ರದ ಪಕ್ಷದ ಶಾಸಕರನ್ನು ಕರೆಸಿ ಹೆಚ್ಚಿನ ಮತಗಳ ಅಂತರದಿಂದ ಅಭ್ಯರ್ಥಿ ಗೆಲ್ಲಿಸುವಂತೆ ಸೂಚನೆ ನೀಡಿದ್ದರು. ಇದರ ಪರಿಣಾಮವಾಗಿ ಕಾಂಗ್ರೆಸ್ ಗೆಲುವಿಗೆ ಅನುಕೂಲವಾಯಿತು.

ಚಾಮುಂಡೇಶ್ವರಿ ದರ್ಶನ ಪಡೆದ ಬೋಸ್: ಮತ ಎಣಿಕೆ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರು ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

ನಂತರ ತಮ್ಮ ಗೆಲುವು ಖಾತರಿಯಾಗುತ್ತಿದ್ದಂತೆ ಚಾಮರಾಜನಗರಕ್ಕೆ ಬಂದು ಕಾಂಗ್ರೆಸ್ ಮುಖಂಡರೊಂದಿಗೆ ಎಣಿಕೆ ಕೇಂದ್ರಕ್ಕೆ ತೆರಳಿ ಜಿಲ್ಲಾ ಚುನಾವಣಾಧಿಕಾರಿ ಸಿ.ಟಿ.ಶಿಲ್ಪನಾಗ್ ಅವರಿಂದ ಆಯ್ಕೆ ಪತ್ರ ಪ್ರಮಾಣ ಪಡೆದರು.

ಮೊದಲ ಸುತ್ತಿನಿಂದಲೂ ಮುನ್ನಡೆ: ನಗರದ ನಂಜನಗೂಡು ರಸ್ತೆಯ ಬೇಡರಪುರದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬೆಳಗ್ಗೆ 8 ರಿಂದ ಮಧ್ಯಾಹ್ನ 3 ಗಂಟೆವರೆಗೆ ನಡೆದ ಮತ ಎಣಿಕೆಯ ಎಲ್ಲಾ 21 ಸುತ್ತಿನಲ್ಲೂ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾದರು.

ಮೊದಲ ಸುತ್ತಿನಲ್ಲಿ ಕಾಂಗ್ರೆಸ್ 40,480, ಬಿಜೆಪಿ 35,217 ಮತಗಳನ್ನು ಪಡೆಯಿತು. ಈ ಮೂಲಕ ಕಾಂಗ್ರೆಸ್ 5263 ಮತಗಳ ಮುನ್ನಡೆ ಸಾಧಿಸುವ ಜೊತೆಗೆ ಉಳಿದ 20 ಸುತ್ತಿನಲ್ಲಿಯೂ ಬಿಜೆಪಿಗಿಂತ ಕಾಂಗ್ರೆಸ್ 8 ರಿಂದ 12 ಸಾವಿರದಷ್ಟು ಅಂತರದ ಮುನ್ನಡೆಯನ್ನು ಕಾಯ್ದುಕೊಳ್ಳುವ ಮೂಲಕ ಅಂತಿಮವಾಗಿ ದಾಖಲೆಯ ಗೆಲುವು ಸಾಧಿಸಿತು.

ಮರು ಕಳಿಸಿದ ಲಕ್ಷ ಮತದ ಅಂತರ: 2014ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರು ಬಿಜೆಪಿ ಅಭ್ಯರ್ಥಿ ವಿರುದ್ಧ 1,41,182 ಮತಗಳ ಅಂತರದಿಂದ ಗೆಲುವು ಸಾಧಿಸುವ ಮೂಲಕ ಕ್ಷೇತ್ರದ ಲೋಕಸಭಾ ಚುನಾವಣೆ ಇತಿಹಾಸದಲ್ಲಿ ಭಾರಿ ಅಂತರದ ಗೆಲುವು ದಾಖಲಿಸಿದ್ದರು. ಈ ಬಾರಿ 1,88,453 ಮತಗಳ ಅಂತರ ಪಡೆಯುವ ಮೂಲಕ ಈ ದಾಖಲೆಯನ್ನು ಸುನೀಲ್‌ಬೋಸ್ ಸರಿಗಟ್ಟಿದ್ದಾರೆ.

ಮೇಲುಗೈ ಸಾಧಿಸಿದ ಸಿದ್ದರಾಮಯ್ಯ, ಹೆಚ್‌ಸಿಎಂ: ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ವಕ್ಷೇತ್ರ ವರುಣ ಕ್ಷೇತ್ರ ಒಳಪಡುವುದರಿಂದ ಸಿದ್ದರಾಮಯ್ಯ ಅವರಿಗೆ ಹಾಗೂ ಮಗನನ್ನು ಗೆಲ್ಲಿಸಬೇಕೆಂಬ ಹಠಕ್ಕೆ ಬಿದ್ದಿದ್ದ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ತಮ್ಮ ಕ್ಷೇತ್ರವೂ ಪ್ರತಿಷ್ಠೆಯ ಕಣವಾಗಿತ್ತು. ಹೀಗಾಗಿ, ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಿಸಲು ನಾನಾ ಕಸರತ್ತು ನಡೆಸಿ ಅಂತಿಮವಾಗಿ ಪಕ್ಷ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಎಲ್ಲಾ 8 ವಿಧಾನಸಭೆ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಮುನ್ನಡೆ

ಚಾಮರಾಜನಗರ, ಜೂ.4–ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಎಲ್ಲಾ 8 ವಿಧಾನಸಭಾ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಭರ್ಜರಿ ಮುನ್ನಡೆ ಸಾಧಿಸಿದ್ದಾರೆ. ಸುನೀಲ್ ಬೋಸ್ ಎದುರಾಳಿ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ವಿರುದ್ಧ 1.88 ಲಕ್ಷ ಮತಗಳ ಅಂತರದಲ್ಲಿ ದಾಖಲೆಯ ಗೆಲುವು ದಾಖಲಿಸುವ ಮೂಲಕ ಜಿಲ್ಲೆ ಕಾಂಗ್ರೆಸ್‌ನ ಭದ್ರಕೋಟೆ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.

ಚಾಮರಾಜನಗರ: ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು 70,733 ಮತ ಪಡೆದರೆ, ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ 91,059 ಮತ ಪಡೆಯುವ ಮೂಲಕ 20,374 ಮತಗಳ ಮುನ್ನಡೆ ಸಾಧಿಸಿದ್ದಾರೆ.

ಗುಂಡ್ಲುಪೇಟೆ: ಗುಂಡ್ಲುಪೇಟೆ ಕ್ಷೇತ್ರದಲ್ಲಿ ಬಿಜೆಪಿಗೆ 76,380 ಹಾಗೂ ಕಾಂಗ್ರೆಸ್ 94,362 ಮತ ಪಡೆಯುವ ಮೂಲಕ 17,982 ಮತಗಳ ಮುನ್ನಡೆ ಸಾಧಿಸಿದೆ.

ಕೊಳ್ಳೇಗಾಲ: ಕೊಳ್ಳೇಗಾಲದಲ್ಲಿ ಬಿಜೆಪಿ 62,212 ಮತ ಪಡೆದರೆ, ಕಾಂಗ್ರೆಸ್ 95,228 ಮತ ಪಡೆಯುವ ಮೂಲಕ 33,016 ಮತಗಳ ಮುನ್ನಡೆ ಸಾಧಿಸಿದೆ.

ಹನೂರು: ಹನೂರು ಕ್ಷೇತ್ರದಲ್ಲಿ ಬಿಜೆಪಿ 59,253 ಮತ ಪಡೆದರೆ, ಕಾಂಗ್ರೆಸ್ 96,210 ಮತ ಪಡೆಯುವ ಮೂಲಕ 36,957 ಮತಗಳ ಮುನ್ನಡೆ ಸಾಧಿಸಿತು.

ಎಚ್.ಡಿ.ಕೋಟೆ: ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ ಬಿಜೆಪಿ 72,977 ಹಾಗೂ ಕಾಂಗ್ರೆಸ್ 96,735 ಮತ ಪಡೆಯುವ ಮೂಲಕ 23,758 ಮತಗಳ ಮುನ್ನಡೆ ಸಾಧಿಸಿದೆ.

ನಂಜನಗೂಡು: ನಂಜನಗೂಡು ಕ್ಷೇತ್ರದಲ್ಲಿ ಬಿಜೆಪಿ 72,977 ಹಾಗೂ ಕಾಂಗ್ರೆಸ್ 92,407 ಮತ ಪಡೆಯುವ ಮೂಲಕ 20,578 ಮತಗಳ ಮುನ್ನಡೆ ಸಾಧಿಸಿದೆ.

ವರುಣ: ವರುಣ ಕ್ಷೇತ್ರದಲ್ಲಿ ಬಿಜೆಪಿ 73,851 ಹಾಗೂ ಕಾಂಗ್ರೆಸ್ 1,07,203 ಮತ ಪಡೆಯುವ ಮೂಲಕ 33,352 ಮತಗಳ ಮುನ್ನಡೆ ಪಡೆದುಕೊಂಡಿದೆ.

ತಿ.ನರಸೀಪುರ: ತಿ.ನರಸೀಪುರ ಕ್ಷೇತ್ರದಲ್ಲಿ ಬಿಜೆಪಿ 73,801 ಮತ ಪಡೆದರೆ, ಕಾಂಗ್ರೆಸ್ 76,722 ಮತ ಪಡೆದು 2921 ಮತಗಳ ಮುನ್ನಡೆ ಸಾಧಿಸಿದೆ.

ನೋಟಾಗೆ 8143 ಮತಗಳು ಚಲಾವಣೆ

ಚಾಮರಾಜನಗರ, ಜೂ.4– ಚಾಮರಾಜನಗರ ಲೋಕಸಭಾ ಕ್ಷೇತ್ರದ ಫಲಿತಾಂಶ ಪ್ರಕಟವಾಗಿದ್ದು, ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಒಟ್ಟು 7,51,671 ಮತಗಳನ್ನು ಪಡೆಯುವ ಮೂಲಕ ಭಾರತೀಯ ಜನತಾ ಪಾರ್ಟಿ ಅಭ್ಯರ್ಥಿ ಎಸ್.ಬಾಲರಾಜು ವಿರುದ್ಧ 1,88,706 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.




ಕ್ಷೇತ್ರದಲ್ಲಿ ನೋಟಾಗೆ 8143 ಮತಗಳು ಚಲಾವಣೆಯಾಗಿವೆ. ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು 5,62,965, ಬಹುಜನ ಸಮಾಜ ಪಾರ್ಟಿ ಅಭ್ಯರ್ಥಿ ಎಂ.ಕೃಷ್ಣಮೂರ್ತಿ 15,903, ಡಾ.ಅಂಬೇಡ್ಕರ್ ಪೀಪಲ್ಸ್ ಪಾರ್ಟಿ ಅಭ್ಯರ್ಥಿ ಸಿ.ಎಂ.ಕೃಷ್ಣ 8,089, ಕರ್ನಾಟಕ ಜನತಾ ಪಕ್ಷದ ಅಭ್ಯರ್ಥಿ ಎಸ್.ನಿಂಗರಾಜು 1411, ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ) ಅಭ್ಯರ್ಥಿ ಬಿ.ಪ್ರಸನ್ನಕುಮಾರ್ 978, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿ ಕಂದಳ್ಳಿ ಮಹೇಶ್ 1252, ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ಅಭ್ಯರ್ಥಿ ಎಸ್.ಸುಮಾ 3826 ಮತಗಳನ್ನು ಪಡೆದಿದ್ದಾರೆ.

ಪಕ್ಷೇತರ ಅಭ್ಯರ್ಥಿಗಳಾದ ಕದಂಬ ನಾ.ಅಂಬರೀಷ್ 1743, ಜಿ.ನಿಂಗರಾಜು 1247, ಪಟಾಸ್ ಎಂ.ಪ್ರದೀಪ್ ಕುಮಾರ್ 1986, ಬಿ.ಎಂಮಹದೇವಸ್ವಾಮಿ (ಪಂಪಿ) 3421, ಜಿ.ಡಿ.ರಾಜಗೋಪಾಲ (ಹೆಚ್.ಡಿ.ಕೋಟೆ) 3954, ಹೆಚ್.ಕೆ.ಸ್ವಾಮಿ ಹರದನಹಳ್ಳಿ 3208 ಮತ ಪಡೆದಿದ್ದಾರೆ.

ಮೀಸಲು ಕ್ಷೇತ್ರ ಕಳೆದುಕೊಂಡ ಬಿಜೆಪಿ

ಚಾಮರಾಜನಗರ, ಜೂ.4– 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಮೊದಲ ಬಾರಿಗೆ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ದಾಖಲಿಸುವ ಮೂಲಕ ಜಿಲ್ಲೆಯ ಕಾಂಗ್ರೆಸ್ ಕೋಟೆಯನ್ನು ಛಿದ್ರಗೊಳಿಸಿತ್ತು. ಆದರೆ, ಈ ಬಾರಿ 1.88 ಲಕ್ಷ ಮತಗಳ ಭಾರಿ ಅಂತರದಲ್ಲಿ ಸೋಲು ಕಾಣುವ ಮೂಲಕ ಕ್ಷೇತ್ರವನ್ನು ಕಳೆದುಕೊಂಡಿದೆ.

ಈ ಬಾರಿ ಬಿಜೆಪಿ ಮಾಜಿ ಶಾಸಕ ಎಸ್.ಬಾಲರಾಜು ಅವರನ್ನು ಅಭ್ಯರ್ಥಿಯಾಗಿ ಮಾಡಲಾಗಿತ್ತು. ಹಿರಿಯ, ಸರಳ ಹಾಗೂ ಸಜ್ಜನಿಕೆಯ ರಾಜಕಾರಣಿ ಎಂದೇ ಗುರುತಿಸಿಕೊಂಡಿದ್ದ ಬಾಲರಾಜು ಕ್ಷೇತ್ರದಲ್ಲಿ ಗೆಲುವು ಸಾಧಿಸಲಿದ್ದರೇ ಜಿಲ್ಲೆಯಲ್ಲಿ 2ನೇ ಬಾರಿಗೆ ಕಮಲ ಅರಳಲಿದೆ ಎಂದು ವಿಶ್ವಾಸವನ್ನು ಬಿಜೆಪಿಗರು ಇಟ್ಟುಕೊಂಡಿದ್ದರು. ಆದರೆ, ಇದು ಸಾಧ್ಯವಾಗಲಿಲ್ಲ. ಮತ್ತೊಮ್ಮೆ ಜಿಲ್ಲೆಯಲ್ಲಿ ಕಾಂಗ್ರೆಸ್ ಗೆಲುವು ದಾಖಲಿಸುವ ಮೂಲಕ ಬಿಜೆಪಿಗೆ ಭಾರಿ ಮುಖಭಂಗ ಉಂಟು ಮಾಡಿದೆ.

> ನಿರೀಕ್ಷಿತ ಫಲಿತಾಂಶ ಬಂದಿಲ್ಲ. ನಾನು ಗೆಲ್ಲುವ ನಿರೀಕ್ಷೆ ಇತ್ತು. ಜನರ ಆದೇಶಕ್ಕೆ ತಲೆ ಬಾಗುತ್ತೇನೆ. ಸೋಲನ್ನೇ ಗೆಲುವಿನ ಮೆಟ್ಟಿಲನ್ನಾಗಿ ಮಾಡಿಕೊಳ್ಳುತ್ತೇನೆ. ಕಳೆದ 30 ವರ್ಷಗಳಿಂದ ಪ್ರಾಮಾಣಿಕವಾಗಿ ಜನ ಸೇವೆ ಮಾಡುತ್ತಿದ್ದೇನೆ. ಜನಸೇವೆ ಮಾಡಲು ಅಧಿಕಾರ ಬೇಕಿಲ್ಲ. ಸೋತಿದ್ದರೂ ಕ್ಷೇತ್ರದ ಜನರ ಸೇವೆ ಮುಂದುವರಿಸುತ್ತೇನೆ.
>
> 
>
> **-ಎಸ್.ಬಾಲರಾಜು,** ಎನ್‌ಡಿಎ ಅಭ್ಯರ್ಥಿ

ಶ್ರೀನಿವಾಸಪ್ರಸಾದ್ ನಿವೃತ್ತಿ: ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಜಿಲ್ಲೆಯ ಹಿರಿಯ ರಾಜಕಾರಣಿ, ದಲಿತ ನಾಯಕ ದಿ.ವಿ.ಶ್ರೀನಿವಾಸಪ್ರಸಾದ್ ಅವರು ಜಿಲ್ಲೆಯಲ್ಲಿ ಮೊದಲ ಬಾರಿಗೆ ಕಮಲ ಅರಳಿಸುವಲ್ಲಿ ಯಶಸ್ವಿಯಾಗಿದ್ದರು. ಈ ಮೂಲಕ ಕಾಂಗ್ರೆಸ್ ಕೋಟೆಯಲ್ಲಿ ಬಿಜೆಪಿಗೆ ಭದ್ರಬುನಾದಿ ಹಾಕಿಕೊಟ್ಟಿದ್ದರು. ಆದರೆ, ಅವರು ರಾಜಕೀಯ ನಿವೃತ್ತಿ ಘೋಷಣೆ ಮಾಡಿದ ಬಳಿಕ, ಬಿಜೆಪಿಯಲ್ಲಿ ಮತ್ತೆ ಅಭದ್ರತೆ ಉಂಟಾಯಿತು. ಇದರಿಂದ ಪಕ್ಷದ ಸಂಘಟನೆಯಲ್ಲಿ ಹಿನ್ನಡೆಯಾಯಿತು. ಇದು ಕೂಡ ಬಿಜೆಪಿ ಸೋಲಿಗೆ ಕಾರಣ ಎಂದು ಹೇಳಲಾಗುತ್ತಿದೆ.

ಸ್ಥಳೀಯ ನಾಯಕರ ಪಕ್ಷಾಂತರ: ಮಾಜಿ ಸಂಸದ ವಿ.ಶ್ರೀನಿವಾಸಪ್ರಸಾದ ಅವರು ರಾಜಕೀಯ ನಿವೃತ್ತಿ ಘೋಷಣೆ ಮಾಡಿದ ಬಳಿಕ ಅವರ ಕೆಲ ಬೆಂಬಲಿಗರು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು. ಇದರಿಂದ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಡೆದಿದ್ದ ಮತಗಳನ್ನು ಲೋಕಸಭಾ ಕ್ಷೇತ್ರದಲ್ಲಿ ಪಡೆಯಲು ವಿಫಲವಾಯಿತು.

ಕ್ಷೇತ್ರದಲ್ಲಿ ವರ್ಚಸ್ಸು ಕಳೆದುಕೊಂಡ ಬಿಎಸ್‌ಪಿ

ಚಾಮರಾಜನಗರ, ಜೂ.4– ಈ ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಭಾರಿ ನಿರೀಕ್ಷೆಯಲ್ಲಿದ್ದ ಬಿಎಸ್‌ಪಿಗೆ ನಿರಾಸೆಯುಂಟಾಗಿದೆ. ಕಳೆದ ಬಾರಿ ಪಡೆದಿದ್ದ ಮತಗಳಿಗಿಂತ ಈ ಭಾರಿ ಸಾಕಷ್ಟು ಕಡಿಮೆ ಮತಗಳನ್ನು ಪಡೆಯುವ ಮೂಲಕ ತನ್ನ ವರ್ಚಸ್ಸು ಕಳೆದುಕೊಂಡಿದೆ.

ಕಳೆದ 2019ರ ಲೋಕಸಭಾ ಚುನಾವಣೆಯಲ್ಲಿ ಬಿಎಸ್‌ಪಿ 87,631 ಮತಗಳನ್ನು ಪಡೆಯುವ ಮೂಲಕ ರಾಷ್ಟ್ರೀಯ ಪಕ್ಷಗಳಿಗೆ ಪ್ರಬಲ ಪೈಪೋಟಿ ನೀಡಿ, ಕ್ಷೇತ್ರದಲ್ಲಿ 3ನೇ ದೊಡ್ಡ ಪಕ್ಷ ಎಂಬ ಖ್ಯಾತಿಗೆ ಪಾತ್ರವಾಗಿತ್ತು. ಆದರೆ, ಈ ಬಾರಿ ಬಿಎಸ್‌ಪಿ ಕೇವಲ 15,808 ಮತಗಳನ್ನು ಪಡೆಯುವ ಮೂಲಕ ನಿರಾಶದಾಯಕವಾಗಿದೆ. ಇಂದಿನ ಫಲಿತಾಂಶದಿಂದ ಮುಂದಿನ ದಿನಗಳಲ್ಲಿ ಪಕ್ಷದ ಮೇಲೆ ಯಾವ ರೀತಿ ವ್ಯತಿರಿಕ್ತ ಪರಿಣಾಮ ಬೀರಲಿದೆ ಪಕ್ಷದ ಮುಖಂಡರು ಯಾವ ರೀತಿ ನಿಭಾಯಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಪ್ರತಿ ಚುನಾವಣೆಯಲ್ಲೂ ಬಿಎಸ್‌ಪಿ ರಾಷ್ಟ್ರೀಯ ಪಕ್ಷಗಳಿಗೆ ಪ್ರಬಲ ಪೈಪೋಟಿ ನೀಡುವ ಮೂಲಕ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳ ಸೋಲು–ಗೆಲುವಿನ ಮೇಲೆ ಪ್ರಾಬಲ್ಯ ಸಾಧಿಸುತ್ತಿತ್ತು. ಆದರೆ, ಈ ಬಾರಿ ಬಿಎಸ್‌ಪಿ ಸದ್ದಿಲ್ಲದಂತಾಗಿದೆ.

ಚುನಾವಣೆ ಘೋಷಣೆಯಾದ ಬಳಿಕ ಪಕ್ಷ ನಿವೃತ್ತ ತಹಸೀಲ್ದಾರ್ ಮಹದೇವಯ್ಯ ಅವರನ್ನು ಅಭ್ಯರ್ಥಿಯಾಗಿ ಘೋಷಣೆ ಮಾಡಿತ್ತು. ಇವರ ಪರವಾಗಿ ಪ್ರಚಾರ ಕಾರ್ಯವನ್ನು ಆರಂಭಿಸಿತ್ತು. ಆದರೆ, ನಾಮಪತ್ರ ಸಲ್ಲಿಕೆಯ ಕೊನೆ ಕ್ಷಣದಲ್ಲಿ ದಿಢೀರನೇ ಉಂಟಾದ ರಾಜಕೀಯ ಬದಲಾವಣೆಯಿಂದ ಅಭ್ಯರ್ಥಿಯ ಬದಲಾವಣೆ ಮಾಡಿ, ಸಿ.ಎಂ.ಕೃಷ್ಣಮೂರ್ತಿಯನ್ನು ಅಭ್ಯರ್ಥಿಯಾಗಿಸಿ ನಾಮಪತ್ರ ಸಲ್ಲಿಕೆ ಮಾಡಲಾಯಿತು.

ಬಳಿಕ ಮಹದೇವಯ್ಯ ಕೊಳ್ಳೇಗಾಲದಲ್ಲಿ ನಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರ್ಯಕ್ರಮದಲ್ಲಿ ಬಿಎಸ್‌ಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು. ಇದೆಲ್ಲಾ ರಾಜಕೀಯ ವಿದ್ಯಮಾನಗಳಿಂದ ಬಿಎಸ್‌ಪಿಗೆ ಈ ಬಾರಿ ನಿರೀಕ್ಷೆಯಷ್ಟು ಮತಗಳು ಬಂದಿಲ್ಲ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ. ಆದರೂ ಈ ಬಾರಿ ಬಿಎಸ್‌ಪಿ ಭಾರಿ ಹಿನ್ನಡೆಯನ್ನು ಅನುಭವಿಸಿದೆ.

ಒಂದನೇ ಪುಟದಿಂದ

ಎನ್‌ಡಿಎ 292 ಇಂಡಿಯಾ 233

ಜಯ ಗಳಿಸಿದ್ದು, ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ 233 ಸ್ಥಾನಗಳನ್ನು ಹೊಂದಿದೆ. ಅಲ್ಲದೇ 18 ಇತರ ಸಂಸದರಿದ್ದಾರೆ. ಕಳೆದ ಬಾರಿ 303 ಸ್ಥಾನಗಳನ್ನು ಪಡೆದಿದ್ದ ಬಿಜೆಪಿಗೆ ಈ ಚುನಾವಣೆಯಲ್ಲಿ ಹಿನ್ನಡೆಯಾಗಿದೆ. ಬಿಜೆಪಿಯ ಭದ್ರಕೋಟೆಯಾಗಿರುವ ಉತ್ತರಪ್ರದೇಶದಲ್ಲಿ ಇಂಡಿಯಾ ಮೈತ್ರಿಕೂಟದ ಸಮಾಜವಾದಿ ಪಕ್ಷ 37 ಸ್ಥಾನ ಹಾಗೂ ಕಾಂಗ್ರೆಸ್ 6 ಸ್ಥಾನ ಪಡೆದು ಮೇಲುಗೈ ಸಾಧಿಸಿದ್ದರೆ, ಬಿಜೆಪಿ 33 ಸ್ಥಾನಗಳನ್ನು ಮಾತ್ರ ಪಡೆದು ಹಿನ್ನಡೆ ಅನುಭವಿಸಿದೆ. ಇದರ ಮೈತ್ರಿಕೂಟದ ಪಕ್ಷಗಳದ್ದೂ ಕೂಡ ಉತ್ತರಪ್ರದೇಶದಲ್ಲಿ ಅಂತಹ ಸಾಧನೆ ಏನಿಲ್ಲ. ಆದರೆ ಉತ್ತರಾಖಂಡದ ಎಲ್ಲಾ 4 ಸ್ಥಾನಗಳನ್ನು ಬಿಜೆಪಿ ಗೆದ್ದಿದೆ. ಬಿಹಾರದಲ್ಲಿ ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಕೂಟದ ಜೆಡಿಯು ತಲಾ 12 ಸ್ಥಾನ ಹೊಂದಿದ್ದು, ಕಾಂಗ್ರೆಸ್ ಕೇವಲ 3ಕ್ಕೆ ತೃಪ್ತಿಪಟ್ಟುಕೊಂಡಿದೆ. ಮಧ್ಯಪ್ರದೇಶದ ಎಲ್ಲಾ 29 ಕ್ಷೇತ್ರಗಳನ್ನು ಬಿಜೆಪಿ ಗೆದ್ದುಕೊಂಡಿದೆ. ಗುಜರಾತ್‌ನ 26ರ ಪೈಕಿ 25 ಕ್ಷೇತ್ರ ಬಿಜೆಪಿ ವಶವಾಗಿದೆ. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್‌ಗೆ 13 ಸ್ಥಾನ ದೊರೆತರೆ, ಬಿಜೆಪಿ 10ಕ್ಕೆ ತೃಪ್ತಿಪಟ್ಟುಕೊಂಡಿದೆ. ತಮಿಳುನಾಡು ಮತ್ತು ಪಾಂಡಿಚೇರಿಯ ಎಲ್ಲಾ 40 ಕ್ಷೇತ್ರಗಳು ಇಂಡಿಯಾ ಮೈತ್ರಿಕೂಟದ ಪಾಲಾಗಿವೆ. ಕೇರಳದಲ್ಲಿ 1 ಸ್ಥಾನ ಗೆಲ್ಲುವ ಮೂಲಕ ಬಿಜೆಪಿ ಖಾತೆ ತೆರೆದಿದೆ. ಗಾಂಧಿನಗರದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 7 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಜಯ ಗಳಿಸಿದ್ದರೆ, ವಾರಣಾಸಿಯಲ್ಲಿ ಪ್ರಧಾನಿ ಮೋದಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೇರಳದ ವೈಯನಾಡು ಮತ್ತು ಈ ಹಿಂದೆ ತಮ್ಮ ತಾಯಿ ಸೋನಿಯಾ ಗಾಂಧಿ ಪ್ರತಿನಿಧಿಸುತ್ತಿದ್ದ ರಾಯಬರೇಲಿಯಲ್ಲಿ ಗೆಲುವಿನ ನಗೆ ಬೀರಿದ್ದಾರೆ. ಕಳೆದ ಚುನಾವಣೆಯಲ್ಲಿ ಅಮೇಥಿಯಲ್ಲಿ ರಾಹುಲ್ ಗಾಂಧಿಯವರನ್ನು ಮಣಿಸಿದ್ದ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಈ ಬಾರಿ ಸೋಲುಂಡಿದ್ದಾರೆ. ಆಂಧ್ರದಲ್ಲಿ ಟಿಡಿಪಿ 16, ಬಿಜೆಪಿ 3 ಸ್ಥಾನ ಗೆದ್ದಿವೆ. ರಾಜಸ್ಥಾನ ಬಿಜೆಪಿ 14, ಇಂಡಿಯಾ ಒಕ್ಕೂಟ 11 ಸ್ಥಾನ ಗಳಿಸಿವೆ.

28ರಲ್ಲಿ ಬಿಜೆಪಿ 17; ಕಾಂಗ್ರೆಸ್ 9; ಜೆಡಿಎಸ್ 2

14 ಕ್ಷೇತ್ರಗಳ ಪೈಕಿ 12ರಲ್ಲಿ ಎನ್‌ಡಿಎ ಜಯಭೇರಿ ಭಾರಿಸಿ ದ್ದರೆ, ಕಾಂಗ್ರೆಸ್‌ಗೆ ಎರಡು ಕ್ಷೇತ್ರಗಳಲ್ಲಿ ಮಾತ್ರ ಜಯ ದೊರೆತಿದೆ. ಎರಡನೇ ಹಂತದ ಚುನಾವಣೆಯಲ್ಲಿ ಉತ್ತರ ಕರ್ನಾಟಕದ 14 ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ತಲಾ ಏಳು ಸ್ಥಾನಗಳನ್ನು ಹಂಚಿಕೊಂಡಿವೆ, ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗದ ಐದು ಲೋಕಸಭಾ ಕ್ಷೇತ್ರಗಳು ಕಾಂಗ್ರೆಸ್ ಪಾಲಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ಮೈಸೂರು-ಕೊಡಗು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿನಿಧಿಸುವ ಬೆಂಗಳೂರು ಗ್ರಾಮಾಂತರ ಕ್ಷೇತ್ರಗಳು ಬಿಜೆಪಿ ಪಾಲಾಗಿ, ಉಭಯ ನಾಯಕರಿಗೆ ಮುಖಭಂಗ ಉಂಟು ಮಾಡಿದೆ. ಚಾಮರಾಜನಗರವನ್ನು ಗೆಲ್ಲಿಸಿಕೊಳ್ಳುವ ಮೂಲಕ ಸಿದ್ದರಾಮಯ್ಯ ತೃಪ್ತಿಪಟ್ಟುಕೊಂಡರೂ, ಹಳೇ ಮೈಸೂರು ಭಾಗದಲ್ಲಿ ಶಿವಕುಮಾರ್ ಜೊತೆ ಕೈಜೋಡಿಸಿ ಹೆಚ್ಚು ಸ್ಥಾನ ಗಳಿಸುವಲ್ಲಿ ವಿಫಲರಾಗಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮ ತವರು ಕ್ಷೇತ್ರದಲ್ಲಿ ಅಳಿಯ ರಾಧಾಕೃಷ್ಣ ಅವರನ್ನು ಗೆಲ್ಲಿಸುವ ಜೊತೆಗೆ ಕಲ್ಯಾಣ ಕರ್ನಾಟಕದ ಎಲ್ಲಾ ಐದು ಕ್ಷೇತ್ರಗಳನ್ನು ಕಾಂಗ್ರೆಸ್ ಬುಟ್ಟಿಗೆ ಹಾಕಿಸಿದ್ದಾರೆ. ಬಿಜೆಪಿಯ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಧಾರವಾಡ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್ ಬೆಳಗಾವಿ, ಬಸವರಾಜ ಬೊಮ್ಮಾಯಿ ಹಾವೇರಿ, ವಿಶ್ವೇಶ್ವರ ಹೆಗಡೆ ಕಾಗೇರಿ ಉತ್ತರ ಕನ್ನಡ, ಬಿ.ವೈ.ರಾಘವೇಂದ್ರ ಶಿವಮೊಗ್ಗ, ಗೋವಿಂದ ಕಾರಜೋಳ್ ಚಿತ್ರದುರ್ಗ, ವಿ.ಸೋಮಣ್ಣ ತುಮಕೂರು, ರಮೇಶ್ ಜಿಗಜಿಣಗಿ ವಿಜಾಪುರ, ಪಿ.ಸಿ.ಗದ್ದಿಗೌಡರ್ ಬಾಗಲಕೋಟೆ. ಡಾ.ಕೆ.ಸುಧಾಕರ್ ಚಿಕ್ಕಬಳ್ಳಾಪುರ, ಶೋಭಾ ಕರಂದ್ಲಾಜೆ ಬೆಂಗಳೂರು ಉತ್ತರ, ಡಾ.ಮಂಜುನಾಥ್ ಬೆಂಗಳೂರು ಗ್ರಾಮಾಂತರ, ಪಿ.ಸಿ. ಮೋಹನ್ ಬೆಂಗಳೂರು ಕೇಂದ್ರ, ತೇಜಸ್ವಿ ಸೂರ್ಯ ಬೆಂಗಳೂರು ದಕ್ಷಿಣ, ಯದುವೀರ ಒಡೆಯರ್ ಮೈಸೂರು-ಕೊಡಗು, ಕೋಟಾ ಶ್ರೀನಿವಾಸ ಪೂಜಾರಿ ಉಡುಪಿ-ಚಿಕ್ಕಮಗಳೂರು, ಕ್ಯಾಪ್ಟನ್ ಬ್ರಿಜೇಶ್ ಚೌಟ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದಾರೆ. ಎನ್‌ಡಿಎ ಮೈತ್ರಿಕೂಟದ ಜೆಡಿಎಸ್‌ನ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಮಂಡ್ಯ ಹಾಗೂ ಮಲ್ಲೇಶ್ ಬಾಬು ಕೋಲಾರ ಕ್ಷೇತ್ರಗಳಲ್ಲಿ ಜಯ ಗಳಿಸಿದ್ದಾರೆ. ಇನ್ನು ಕಾಂಗ್ರೆಸ್‌ನ ಸುನೀಲ್ ಬೋಸ್ ಚಾಮರಾಜನಗರ, ಶ್ರೇಯಸ್ ಪಟೇಲ್ ಹಾಸನ, ಪ್ರಭಾ ಮಲ್ಲಿಕಾರ್ಜುನ್ ದಾವಣಗೆರೆ, ಪ್ರಿಯಾಂಕ ಜಾರಕಿಹೊಳಿ ಚಿಕ್ಕೋಡಿ. ರಾಧಾಕೃಷ್ಣ ದೊಡ್ಡಮನಿ ಗುಲ್ಬರ್ಗ, ಕುಮಾರ ನಾಯಕ್ ರಾಯಚೂರು, ಸಾಗರ್ ಖಂಡ್ರೆ ಬೀದರ್, ರಾಜಶೇಖರ ಬಸವರಾಜ ಇಟ್ನಾಳ್ ಕೊಪ್ಪಳ, ತುಕಾರಾಂ ಬಳ್ಳಾರಿ ಕ್ಷೇತ್ರಗಳಿಂದ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಜಯ ಗಳಿಸಿದ್ದಾರೆ.

ಕಾಂಗ್ರೆಸ್‌ನಿಂದ ಗೆದ್ದಿರುವ ಒಂಭತ್ತು ಮಂದಿಯೂ ಇದೇ ಮೊದಲ ಬಾರಿಗೆ ಲೋಕಸಭೆ ಪ್ರವೇಶ ಮಾಡುತ್ತಿದ್ದಾರೆ, ಇವರಲ್ಲಿ ಎಲ್ಲರೂ ಪ್ರಬಲ ರಾಜಕೀಯ ಕುಟುಂಬಗಳಿಂದ ಬಂದವರೇ ಆಗಿದ್ದಾರೆ. ಗ್ಯಾರಂಟಿಗಳನ್ನೇ ನಂಬಿದ್ದ ಕಾಂಗ್ರೆಸ್‌ಗೆ ಅದರ ಪೂರ್ಣ ಲಾಭ ದೊರೆತಿಲ್ಲ, ಕುಟುಂಬ ರಾಜಕಾರಣಕ್ಕೆ ಮಣೆ ಹಾಕದಿದ್ದರೆ ಇಷ್ಟು ಸ್ಥಾನ ಗೆಲ್ಲಲೂ ಸಾಧ್ಯವಿರುತ್ತಿರಲಿಲ್ಲ. ಕಳೆದ ಬಾರಿಯಂತೆ ಪ್ರಧಾನಿ ಮೋದಿ ಅವರ ಅಲೆ ಈ ಬಾರಿ ಕರ್ನಾಟಕದಲ್ಲಿ ಬಿಜೆಪಿಗೆ ಪೂರ್ಣ ಮತ ತಂದು ಕೊಟ್ಟಿಲ್ಲ.

ಕೌಟುಂಬಿಕ ರಾಜಕಾರಣಕ್ಕೆ ಮಣೆ ಹಾಕಿದ ಮತದಾರ!

ಬೆಂಗಳೂರು: ಕರ್ನಾಟಕ ಲೋಕಸಭಾ ಚುನಾವಣೆಯಲ್ಲಿ ಕುಟುಂಬ ರಾಜಕಾರಣಕ್ಕೆ ಮತದಾರರು ಮಣೆ ಹಾಕಿದ್ದಾರೆ. ಆಡಳಿತಾರೂಢ ಕಾಂಗ್ರೆಸ್ ಕುಟುಂಬ ರಾಜಕಾರಣಕ್ಕೆ ಒತ್ತು ನೀಡಿದ್ದರಿಂದ ಐದು ಲೋಕಸಭಾ ಕ್ಷೇತ್ರಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡಿದೆ. ಗೆದ್ದ ಸ್ಥಾನಗಳಲ್ಲಿ ಶೇಕಡ 50ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸಚಿವರ ಮಕ್ಕಳು, ಪತ್ನಿ ಇಲ್ಲವೇ ಪಕ್ಷದ ಮುಖಂಡರ ಕುಟುಂಬದವರು ಲೋಕಸಭೆ ಪ್ರವೇಶಿಸಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕುಟುಂಬದಿಂದ ಅವರ ಪುತ್ರ ಎಚ್.ಡಿ.ಕುಮಾರಸ್ವಾಮಿ ಮಂಡ್ಯದಿಂದಲೂ, ಅವರ ಅಳಿಯ ಹೃದಯ ತಜ್ಞ ಡಾ.ಮಂಜುನಾಥ್ ಬಿಜೆಪಿ ಅಭ್ಯರ್ಥಿಯಾಗಿ ಬೆಂಗಳೂರು ಗ್ರಾಮಾಂತರದಿಂದ ಜಯಭೇರಿ ಭಾರಿಸಿ ಲೋಕಸಭೆ ಪ್ರವೇಶಿಸಿದ್ದಾರೆ.

ಕಾಂಗ್ರೆಸ್ ಆರು ಸಚಿವರ ಕುಟುಂಬದ ಮಕ್ಕಳು ಹಾಗೂ ಪತ್ನಿಯರಿಗೆ ಟಿಕೆಟ್ ನೀಡಿದ ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಗೆಲುವು ಸಾಧಿಸಿದ್ದಾರೆ.

ಚಾಮರಾಜನಗರದಲ್ಲಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್ ಭರ್ಜರಿ ಜಯ ಸಾಧಿಸಿದರೆ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕ ಜಾರಕಿಹೊಳಿ ಚಿಕ್ಕೋಡಿ, ಬೀದರ್‌ನಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಪುತ್ರ ಸಾಗರ್ ಖಂಡ್ರೆ, ದಾವಣಗೆರೆಯಲ್ಲಿ ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಪತ್ನಿ ಪ್ರಭಾಮಲ್ಲಿಕಾರ್ಜುನ್ ಇದೇ ಮೊದಲ ಬಾರಿಗೆ ಲೋಕಸಭೆ ಪ್ರವೇಶಿಸಿದ್ದಾರೆ. ಸಚಿವರಾದ ರಾಮಲಿಂಗಾ ರೆಡ್ಡಿ ಪುತ್ರಿ ಸೌಮ್ಯಾ ರೆಡ್ಡಿ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಹೆಬ್ಬಾಳ್ಕರ್ ಬೆಳಗಾವಿಯಲ್ಲಿ, ಶಿವಾನಂದ ಪಾಟೀಲ್ ಪುತ್ರಿ ಸಂಯುಕ್ತಾ ಪಾಟೀಲ್ ಬಾಗಲಕೋಟೆಯಲ್ಲಿ ಕಣಕ್ಕಿಳಿದು ಸೋಲನನುಭವಿಸಿದ್ದಾರೆ. ಕೊಪ್ಪಳದಲ್ಲಿ ಶಾಸಕ ರಾಘವೇಂದ್ರ ಹಿಟ್ನಾಳ್ ಸಹೋದರ ಕೆ.ರಾಜಶೇಖರ ಬಸವರಾಜ ಹಿಟ್ನಾಳ್ ಲೋಕಸಭೆ ಪ್ರವೇಶಿಸಿದ್ದಾರೆ. ಇನ್ನು ಎಐಸಿಸಿ ಮಲ್ಲಿಕಾರ್ಜುನ ಖರ್ಗೆ ಅಳಿಯ ರಾಧಾಕೃಷ್ಣ ಗುಲ್ಬರ್ಗದಿಂದ ಇದೇ ಮೊದಲ ಬಾರಿಗೆ ಲೋಕಸಭೆ ಸದಸ್ಯರಾಗುತ್ತಿದ್ದಾರೆ.

ಇನ್ನು ಬಿಜೆಪಿಯಿಂದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ.ರಾಘವೇಂದ್ರ ಶಿವಮೊಗ್ಗದಿಂದ ಲೋಕಸಭೆ ಪ್ರವೇಶಿಸಿದ್ದಾರೆ.

ದಿವಂಗತ ಮಾಜಿ ಮುಖ್ಯಮಂತ್ರಿ ಎಸ್.ಆರ್.ಬೊಮ್ಮಾಯಿ ಪುತ್ರ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾವೇರಿಯಿಂದ ಇದೇ ಮೊದಲ ಬಾರಿಗೆ ದೆಹಲಿ ರಾಜಕಾರಣ ಪ್ರವೇಶಿಸಿದ್ದಾರೆ. ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಹೋದರ ಹಾಲಿ ಸಂಸದ ಡಿ.ಕೆ.ಸುರೇಶ್ ಹೀನಾಯ ಸೋಲು ಕಂಡಿದ್ದರೆ, ದೇವೇಗೌಡರ ಮೊಮ್ಮಗ ಪ್ರಜ್ವಲ್ ರೇವಣ್ಣ ಹಾಸನದಲ್ಲಿ ಪೆನ್‌ಡ್ರೈವ್‌ಗೆ ಬಲಿಯಾಗಿದ್ದರೆ, ಶಿವಮೊಗ್ಗದಲ್ಲಿ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಬಂಗಾರಪ್ಪ ಪುತ್ರಿ ಗೀತಾ ಶಿವರಾಜ್‌ಕುಮಾರ್ ಸೋತಿದ್ದಾರೆ. ಒಟ್ಟಾರೆ ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ ಶೇಕಡ 50ರಷ್ಟು ಕುಟುಂಬ ರಾಜಕಾರಣ ಅಭ್ಯರ್ಥಿಗಳೇ ಜಯಭೇರಿ ಭಾರಿಸಿದ್ದಾರೆ.


ಮಾವನ ಸೋಲಿನ ಸೇಡು ತೀರಿಸಿಕೊಂಡ ಅಳಿಯ

ಕಲ್ಬುರ್ಗಿ: ಲೋಕಸಭಾ ಕ್ಷೇತ್ರದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಳಿಯ ರಾಧಾಕೃಷ್ಣ ದೊಡ್ಡಮನಿ ಆಯ್ಕೆಯಾಗಿದ್ದಾರೆ. ಈ ಮೂಲಕ ಕಳೆದ ಬಾರಿ ತಮ್ಮ ಮಾವ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಲಿಸಿದ್ದ ಉಮೇಶ್ ಜಾದವ್ ವಿರುದ್ಧ ಅಳಿಯ ಸೇಡು ತೀರಿಸಿಕೊಂಡಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಸೋಲಿಲ್ಲದ ಸರದಾರನಂತೆ ಇದೇ ಕ್ಷೇತ್ರದಿಂದ ನಿರಂತರವಾಗಿ ಆಯ್ಕೆ ಆಗುತ್ತಾ ಬಂದಿದ್ದರು. ಆದರೆ ಕಳೆದ ಬಾರಿ ಬಿಜೆಪಿಯ ಉಮೇಶ್ ಜಾದವ್ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಲಿಸಿದ್ದರು. ಆದರೆ ಈ ಬಾರಿ ಖರ್ಗೆ ಸೋಲಿಸಿದ್ದ ಉಮೇಶ್ ಜಾದವ್ ಅವರನ್ನು ಅಳಿಯ ರಾಧಾಕೃಷ್ಣ ದೊಡ್ಡಮನಿ ಸೋಲಿಸಿದ್ದಾರೆ. ರಾಧಾಕೃಷ್ಣ ದೊಡ್ಡಮನಿ 652321 ಮತಗಳ ಗಳಿಸಿದರೆ, ಉಮೇಶ್ ಜಾದವ್ 625116 ಮತ ಗಳಿಸಿ ಪರಾಭವಗೊಂಡಿದ್ದಾರೆ. ಕಲ್ಬುರ್ಗಿಗೆ ಪ್ರಚಾರಕ್ಕೆ ಬಂದಿದ್ದ ವೇಳೆ ಭಾವನಾತ್ಮಕವಾಗಿ ಭಾಷಣ ಮಾಡಿದ್ದ ಖರ್ಗೆ, ನನ್ನ ಅಳಿಯನನ್ನು ಗೆಲ್ಲಿಸಿ, ಇಲ್ಲಾ ಅಂದರೆ ನಾನು ಸತ್ತ ಮೇಲೆ ಬಂದು ಮಣ್ಣು ಹಾಕಿ ಎಂದು ಹೇಳಿದ್ದರು. ಮಲ್ಲಿಕಾರ್ಜುನ ಖರ್ಗೆ ಅವರ ಇಂತಹ ಭಾವನಾತ್ಮಕ ಮಾತುಗಳು ಅಳಿಯನ ಗೆಲುವಿಗೆ ಸಹಕಾರಿಯಾಗಿದೆ ಎಂದೇ ಹೇಳಲಾಗುತ್ತಿದೆ.



ನನ್ನ ಗೆಲುವು ಬಿಜೆಪಿ-ಜೆಡಿಎಸ್‌ನ ಎಲ್ಲಾ ಕಾರ್ಯಕರ್ತರ ಗೆಲುವು

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಜಯಶೀಲರಾದ ಎನ್‌ಡಿಎ ಅಭ್ಯರ್ಥಿ ಯದುವೀರ್ ಬಿಜೆಪಿ-ಜೆಡಿಎಸ್ ಮುಖಂಡರೊಂದಿಗೆ ಗೆಲುವಿನ ನಗೆ ಬೀರಿದರು. ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಮೈಸೂರು, ಜೂ.4(ಎಂಕೆ)- ಈ ಗೆಲುವು ಬರೀ ನನ್ನದಲ್ಲ. ಬಿಜೆಪಿ-ಜೆಡಿಎಸ್ ಪಕ್ಷದ ಎಲ್ಲಾ ಕಾರ್ಯಕರ್ತರು, ಮುಖಂಡರು, ರಾಜ್ಯ ಮತ್ತು ರಾಷ್ಟ್ರ ನಾಯಕರ ಗೆಲುವಾಗಿದ್ದು, ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆ. ಅಲ್ಲದೆ ಈ ವಿಜಯವನ್ನು ತಾಯಿ ಚಾಮುಂಡೇಶ್ವರಿ, ಕಾವೇರಮ್ಮ, ಅಯೋಧ್ಯೆ ಬಾಲರಾಮರಿಗೆ ಅರ್ಪಿಸುತ್ತೇನೆ ಎಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ವಿಜೇತ ಎನ್‌ಡಿಎ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಮೈಸೂರಿನ ವಾಲ್ಮೀಕಿ ರಸ್ತೆಯ ಮತ ಎಣಿಕಾ ಕೇಂದ್ರದ(ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು) ಬಳಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ವಿಜೇತರಾದ ಬಳಿಕ ಮಾಧ್ಯಮಗಳಿಗೆ ಮೊದಲ ಪ್ರತಿಕ್ರಿಯೆ ನೀಡಿದ ಅವರು, ಈ ಗೆಲುವು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಜನತೆಯ ಗೆಲುವಾಗಿದೆ. ಮುಂದಿನ ಐದು ವರ್ಷ ಭಾರತೀಯ ಪರಂಪರೆಯ ಸಂರಕ್ಷಣೆ ಜೊತೆಗೆ ದೇಶದ ಅಭಿವೃದ್ಧಿ ಹಾಗೂ ಎಲ್ಲರ ಹಿತರಕ್ಷಣೆ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು.

ಲಕ್ಷಕ್ಕೂ ಅಧಿಕ ಮತಗಳ ಅಂತರದ ಗೆಲುವಿನ ಕುರಿತು ಪ್ರತಿಕ್ರಿಯಿಸಿ, 80 ರಿಂದ 1 ಲಕ್ಷ ಲೀಡ್‌ನಲ್ಲಿ ಗೆಲ್ಲಬಹುದು ಎಂದು ನಿರೀಕ್ಷೆ ಮಾಡಿದ್ದೇವು. ಆದರೆ, ಅದಕ್ಕೂ ಮೀರಿ ಲೀಡ್ ದೊರೆತಿದೆ. ಇದಕ್ಕೆ ಪ್ರಧಾನ ಮಂತ್ರಿಗಳು ಕಳೆದ 10 ವರ್ಷದಲ್ಲಿ ಮಾಡಿರುವ ಅಭಿವೃದ್ಧಿ ಮತ್ತು ಸಮಾಜಮುಖಿ ಕೆಲಸ, ಭಾರತದ ಪರಂಪರೆಯ ಸಂರಕ್ಷಣೆ ಜೊತೆಗೆ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿನ ಮೈತ್ರಿಯೂ ಲಾಭವಾಗಿದೆ. ಅಷ್ಟೇ ಅಲ್ಲದೆ ಈ ಹಿಂದೆ ಮೈಸೂರು ಮಹಾರಾಜರು ನೀಡಿದ ಜನಪರ ಕಾರ್ಯಗಳು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತವನ್ನು ಸ್ಮರಣೆ ಮಾಡಿ ಬಹುಮತದೊಂದಿಗೆ ಗೆಲ್ಲಿಸಿದ್ದಾರೆ ಎಂದರು.

ಭಾರತಕೋಸ್ಕರ ಚುನಾವಣೆ: ಜಾತಿ ರಾಜಕಾರಣ ಕುರಿತು ಪ್ರತಿಕ್ರಿಯಿಸಿದ ಯದುವೀರ್, ಚುನಾವಣಾ ಪ್ರಚಾರದ ವೇಳೆ ಜಾತಿ, ಧರ್ಮ, ವರ್ಗವೆಂಬ ಪದಗಳನ್ನು ಬಳಸದೆಯೇ ಭಾರತೀಯರಾಗಿ ಭಾರತ ಕೋಸ್ಕರ ಚುನಾವಣೆ ನಡೆಸಿದ್ದೇವೆ. ಅದೇ ರೀತಿ ಜನರು ಕೂಡ ಸ್ಪಂದಿಸಿದ್ದಾರೆ. ಚುನಾವಣಾ ಸಂದರ್ಭದಲ್ಲಿ ರಾಜಕೀಯ ಸಹಜ. ಆದರೆ ಎಲ್ಲ ಸಹಕಾರದಿಂದ, ಎಲ್ಲರಿಗಾಗಿ ಶ್ರಮಿಸುತ್ತೇನೆ. ವಿರೋಧ ಪಕ್ಷಗಳ ನಡುವೆ ಸಮಸ್ಯೆ ಎದುರಾಗುವುದು ಸಾಮಾನ್ಯ ಆದರೆ ಅಭಿವೃದ್ಧಿಗಾಗಿ ಪರಸ್ಪರ ಕೈ ಜೋಡಿಸಿ ಕೆಲಸ ಮಾಡಬೇಕು. ರಾಷ್ಟ್ರ ಮತ್ತು ರಾಜ್ಯದಲ್ಲಿ ನಿರೀಕ್ಷೆ ಮಾಡಿದಷ್ಟು ಸೀಟುಗಳು ಸಿಕ್ಕಿಲ್ಲವಾದರೂ ನಮ್ಮದೇ ಸರ್ಕಾರ ರೂಪುಗೊಳ್ಳಲಿದೆ. ಪ್ರಧಾನಿಗಳು ಮತ್ತೊಮ್ಮೆ ಪ್ರಧಾನಿಯಾಗುತ್ತಾರೆ ಎಂದು ಹೇಳಿದರು.

ಪ್ರಜಾಪ್ರಭುತ್ವದ ಗೆಲುವು...

ಈ ಗೆಲುವು ಯದುವೀರ್, ಬಿಜೆಪಿ-ಜೆಡಿಎಸ್ ಪಕ್ಷಗಳ ಹಾಗೂ ಮುಖ್ಯವಾಗಿ ಪ್ರಜಾಪ್ರಭುತ್ವದ ಗೆಲುವಾಗಿದೆ. ರಾಜ್ಯ ಮತ್ತು ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಲಾಗುವುದು. ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಶುಭಾಶಯಗಳೊಂದಿಗೆ ಅವರು ವಹಿಸಿದ್ದ ನಾಯಕತ್ವ, ಮಾಡಿದ ಜನಪರ ಕೆಲಸಗಳ ದಾರಿಯಲ್ಲಿ ನಾವು ಕೂಡ ಜನಪರವಾಗಿ ಕೆಲಸ ಮಾಡುತ್ತೇವೆ.

- ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಜೇತ ಅಭ್ಯರ್ಥಿ, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ

ನಾಲ್ವಡಿ ಜಯಂತಿಯಂದೇ ಯದುವೀರ್ ಗೆಲುವು ಶುಭ ಸಮಾಚಾರ ತಂದಿದೆ

ಪ್ರಮೋದಾದೇವಿ ಸಂತಸ



ಮೈಸೂರು, ಜೂ.4(ಎಂಕೆ)- ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನ ಶುಭ ದಿನದಂದೇ ಯದುವೀರ್ ಗೆಲುವು ಪಡೆದಿರುವುದು ಶುಭ ಸಮಾಚಾರವಾಗಿದ್ದು, ಸಮಾಜದ ಅಭಿವೃದ್ಧಿಗೆ, ಎಲ್ಲರ ಒಳಿತಿಗೆ ಪ್ರಾಮುಖ್ಯತೆ ನೀಡುವಂತೆ ಸದಾ ಸಲಹೆ ನೀಡುತ್ತೇವೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಂತಸ ವ್ಯಕ್ತಪಡಿಸಿದರು.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಮತ ಎಣಿಕಾ ಕೇಂದ್ರಕ್ಕೆ ತಮ್ಮ ಪುತ್ರರೂ ಆದ ವಿಜೇತ ಅಭ್ಯರ್ಥಿ ಯದುವೀರ್ ಜೊತೆಗೆ ಆಗಮಿಸಿದ ಅವರು, ಶುಭ ದಿನದಂದೇ ಯದುವೀರ್ ಗೆಲುವು ಪಡೆದಿದ್ದಾರೆ. ಮುಂದಿನ ದಿನಗಳಲ್ಲಿ ಅವರು, ಜನಪರ ಕೆಲಸಗಳನ್ನು ಮಾಡಲು ಎಲ್ಲರ ಸಹಕಾರ, ಸಲಹೆ ಬಹಳ ಮುಖ್ಯವಾಗಿದೆ ಎಂದರು.

ಕುಟುಂಬದ 2ನೇ ಇನ್ನಿಂಗ್ಸ್..!: ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ನಂತರ ಯದುವೀರ್ ಅವರು ಸಂಸದರಾಗಿದ್ದಾರೆ. ಇದು ನಿಮ್ಮ ಕುಟುಂಬದ 2ನೇ ಇನ್ನಿಂಗ್ಸ್ ಆಗಿದೆ ಎಂಬ ಪತ್ರಕರ್ತರ ಮಾತಿಗೆ ಪ್ರತಿಕ್ರಿಯಿಸಿ, ಮೊದಲ ಇನ್ನಿಂಗ್ಸ್‌ನಲ್ಲಿ ನಾನು ಭಾಗವಹಿಸಿದ್ದೆ. ತುಂಬಾ ವರ್ಷಗಳ ಬಿಡುವಾಗಿದ್ದರಿಂದ 2ನೇ ಇನ್ನಿಂಗ್ಸ್‌ನಲ್ಲಿ ಭಾಗವಹಿಸುವುದು ಸ್ವಲ್ಪ ಕಡಿಮೆಯಾಯಿತು. ನೂತನ ಸಂಸದರಿಗೆ ಚುನಾವಣೆ ಪ್ರಚಾರದ ಸಂದರ್ಭದಲ್ಲಿಯೂ ಸಲಹೆಗಳನ್ನು ನೀಡುತ್ತಿದ್ದೆ. ಮುಂದೆಯೂ ನೀಡುತ್ತೇನೆ ಎಂದು ತಿಳಿಸಿದರು.

ಮನೆಯೊಳಗೆ ಏನು ನಡೆಯಬೇಕೋ ಅದೆಲ್ಲವೂ ನಡೆಯುತ್ತಲೇ ಇರುತ್ತದೆ. ಆದರೆ ಹೊರಗೆ ಬಂದರೆ ಸಮಾಜ ಮುಖ್ಯವಾಗುತ್ತದೆ. ಅದರಲ್ಲಿಯೂ ಯಾವ ಯಾವ ಅಭಿವೃದ್ಧಿ ವಿಚಾರಗಳಿಗೆ ಪ್ರಾಮುಖ್ಯತೆ ನೀಡಬೇಕು ಎಂಬುದರ ಸಲಹೆ ನೀಡುತ್ತೇನೆ. ಟೀಕೆಗಳು ಬರುವುದು ಸಹಜ. ಸಕಾರಾತ್ಮಕ ಮತ್ತು ನಕಾರಾತ್ಮಕ ಟೀಕೆಗಳನ್ನು ಸಮಾನವಾಗಿ ಸ್ವೀಕರಿಸಿ, ತಪ್ಪುಗಳನ್ನು ತಿದ್ದಿಕೊಂಡು ಮುನ್ನಡೆಯಬೇಕು ಎಂದರು.

ಸ್ವ ಸಾಮರ್ಥ್ಯದಿಂದ ಕೇಂದ್ರ ಮಂತ್ರಿಗಳಾಗಲಿ: ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು 4 ಬಾರಿ ಸಂಸದರಾದರೂ ಕೇಂದ್ರದಲ್ಲಿ ಮಂತ್ರಿಗಳಾಗಲಿಲ್ಲ. ನಿಮ್ಮ ಪುತ್ರ ಆಗಬಹುದೇ ಎಂಬುದಕ್ಕೆ ಪ್ರತಿಕ್ರಿಯಿಸಿ, ಕೇಂದ್ರದಲ್ಲಿ ಮಂತ್ರಿಗಳಾಗುವುದು ಅವರ ಕಾರ್ಯಕ್ಷಮತೆ ಮೇಲೆ ನಿಂತಿದೆ. ಸ್ವಶಕ್ತಿಯಿಂದ ಮೇಲೆ ಬಂದು ಸಚಿವರಾಗಲಿ. ನಮ್ಮ ಕಡೆಯಿಂದ ಜನಪರ ಕೆಲಸ ಮಾಡಿ ಎಂದಷ್ಟೇ ಹೇಳುತ್ತೇನೆ ಎಂದು ಅವರು ಹೇಳಿದರು.

ವ್ಯಾಜ್ಯ ವೈಯಕ್ತಿಕ...

ಸರ್ಕಾರದೊಂದಿಗಿರುವ ವ್ಯಾಜ್ಯಕ್ಕೂ ಸಂಸದರ ಚುನಾವಣೆಗೂ ಇವತ್ತಿನ ದಿನಕ್ಕೆ ಯಾವುದೇ ಸಂಬಂಧವಿಲ್ಲ. ಈ ಸರ್ಕಾರ, ಆ ಸರ್ಕಾರ ಎಂತಲ್ಲಾ.. ಸರ್ಕಾರದೊಂದಿಗೆ ಮೊದಲಿನಿಂದಲೂ ವ್ಯಾಜ್ಯವಿದೆ. ಅದನ್ನು ಎದುರಿಸುವುದು ನಮ್ಮ ಮುಂದಿದೆ. ಚಾಮುಂಡಿಬೆಟ್ಟಕ್ಕೆ ನೀರು ಸರಬರಾಜು ಮಾಡಲು ಈ ಹಿಂದೆಯೂ ಸ್ಥಳಾವಕಾಶ ಕೊಟ್ಟಿದ್ದೆವು. ಜಾಗವೇ ನಿಮ್ಮದಲ್ಲ ಎಂದ ಮೇಲೆ ಕೇಳುವ ಅಗತ್ಯವಿಲ್ಲ. ನಮ್ಮಿಂದ ಅಭಿಪ್ರಾಯ ಪಡೆಯುವುದು ಅವರದ್ದೇ(ರಾಜ್ಯ ಸರ್ಕಾರದ್ದೇ) ಜವಾಬ್ದಾರಿ.

- ಪ್ರಮೋದಾದೇವಿ ಒಡೆಯರ್, ರಾಜವಂಶಸ್ಥೆ

ಕೃಷ್ಣರಾಜ ಕ್ಷೇತ್ರದಲ್ಲಿ ಯದುವೀರ್‌ಗೆ ಲೀಡ್

ಶಾಸಕ ಶ್ರೀವತ್ಸ ಹರ್ಷ



ಮೈಸೂರು, ಜೂ.4(ಎಸ್‌ಬಿಡಿ)- ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮತದಾರರು ಎನ್‌ಡಿಎ ಅಭ್ಯರ್ಥಿಗೆ ದಾಖಲೆ ಲೀಡ್ ನೀಡಿದ್ದಾರೆ ಎಂದು ಸ್ಥಳೀಯ ಶಾಸಕ ಟಿ.ಎಸ್.ಶ್ರೀವತ್ಸ ಹರ್ಷ ವ್ಯಕ್ತಪಡಿಸಿದ್ದಾರೆ.

ಮೈಸೂರು ಮಹಾರಾಜರ ಮೇಲಿನ ಗೌರವ, ಅಭ್ಯರ್ಥಿ ಯದುವೀರ್ ಒಡೆಯರ್ ಮೇಲಿನ ನಂಬಿಕೆ ಹಾಗೂ ನರೇಂದ್ರ ಮೋದಿ ಅವರ ಕೈ ಬಲಪಡಿಸುವ ಉದ್ದೇಶದಿಂದ ಮತದಾರರು ಬೆಂಬಲಿಸಿದ್ದಾರೆ. ರಾಜ್ಯದಲ್ಲಿ ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿದ್ದು ಉತ್ತಮ ಫಲ ನೀಡಿದೆ. ಎಲ್ಲಕ್ಕಿಂತ ಮುಖ್ಯವಾಗಿ ರಣಬಿಸಿಲಿನಲ್ಲೂ ಮನೆ ಮನೆಗೆ ತೆರಳಿ ನಮ್ಮ ಅಭ್ಯರ್ಥಿಯನ್ನು ಪರಿಚಯಿಸಿದ ಕಾರ್ಯಕರ್ತರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕಾರ್ಯಕರ್ತರೇ ಈ ಗೆಲುವಿನ ನಿಜವಾದ ರೂವಾರಿಗಳಾಗಿದ್ದಾರೆ. ಇವರಿಗೆ ಹಾಗೂ ಮತದಾರರಿಗೆ ಅನಂತಾನಂತ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಮತದಾರರು ಮೋದಿ ಮೇಲಿನ ನಂಬಿಕೆ ಹಾಗೂ ಅಭಿವೃದ್ಧಿಪರ ಮತ ನೀಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸ್ವಕ್ಷೇತ್ರದಲ್ಲಿ ಮುಖಭಂಗವಾಗಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸೋದರನ ಸೋಲಾಗಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೃಷ್ಣರಾಜ ಕ್ಷೇತ್ರದ ಜನ ನನಗೆ 7,300 ಮತಗಳ ಲೀಡ್ ನೀಡಿದ್ದರು. ಇದೀಗ ಯದುವೀರ್ ಅವರಿಗೆ 54 ಸಾವಿರಕ್ಕೂ ಹೆಚ್ಚು ಲೀಡ್ ನೀಡಿ, ಆಶೀರ್ವದಿಸಿದ್ದಾರೆ. 2019ರ ಲೋಕಸಭಾ ಚುನಾವಣೆಗಿಂತಲೂ ಹೆಚ್ಚು ಮತಗಳು ಸಿಕ್ಕಿವೆ. ಬಿಜೆಪಿ-ಜೆಡಿಎಸ್ ಮೈತ್ರಿಕೂಟ ರಾಜ್ಯದ 19 ಕ್ಷೇತ್ರಗಳಲ್ಲಿ ಗೆದ್ದಿದೆ. ದೇಶದಲ್ಲಿ ಸೀಟ್‌ಗಳ ಸಂಖ್ಯೆ ಕಡಿಮೆಯಾಗಿದೆ. ಪ್ರತಿಪಕ್ಷಗಳು ಮೋದಿ ವಿರುದ್ಧ ಮಾಡಿದ ಅಪಪ್ರಚಾರವನ್ನು ಉತ್ತರ ಭಾರತದ ಜನ ಎಲ್ಲೋ ಒಂದು ಕಡೆ ನಂಬಿದರಾ ಎನ್ನುವ ಬಗ್ಗೆ ಅವಲೋಕಿಸಬೇಕಿದೆ ಎಂದು ತಿಳಿಸಿದರು.

ಹೋಟೆಲ್ ಮಾಲೀಕರ ಸಂಘದಿಂದ ನಾಲ್ವಡಿ ಪ್ರತಿಮೆಗೆ ಮಾಲಾರ್ಪಣೆ



ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನದ ಪ್ರಯುಕ್ತ ಮೈಸೂರಿನ ಕೆ.ಆರ್.ವೃತ್ತದಲ್ಲಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಮೈಸೂರು ಹೋಟೆಲ್ ಮಾಲೀಕರ ಸಂಘದ ವತಿಯಿಂದ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸಂಘದ ಟ್ರಸ್ಟ್ ಅಧ್ಯಕ್ಷ ರವಿಶಾಸ್ತ್ರಿ, ಸಂಘದ ಸೊಸೈಟಿ ಅಧ್ಯಕ್ಷ ಎನ್.ವಿ.ಹೆಗಡೆ, ಪ್ರಭಾಕರ, ಅರುಣ್, ಹೇಮಂತ್, ಪ್ರವೀಣ ಶೆಟ್ಟಿ, ಸುಬ್ರಮಣ್ಯತಂತ್ರಿ, ಮಂಜುನಾಥ, ಮರಿದೇವರು, ಗಿರೀಶ್, ಮಹದೇವ, ಟಿ.ಆರ್.ಸುರೇಶ್, ಕುಳ್ಳೇಗೌಡ, ಓ.ಪ್ರತಾಪಕುಮಾರ್, ಆನಂದಶೆಟ್ಟಿ, ಎ.ಸಿ.ರವಿ, ಚಂದ್ರಶೇಖರ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ನಾಲ್ವಡಿ ಜನ್ಮದಿನದಂದೇ ಯದುವೀರ್‌ಗೆ ಜಯದ ಸಂತಸ

ಮೈಸೂರು, ಜೂ.4(ಎಸ್‌ಬಿಡಿ)- ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನದಂದೇ ಯದುವೀರ್ ಒಡೆಯರ್ ಅವರಿಗೆ ವಿಜಯ ಮಾಲೆ ಒಲಿದಿದೆ.

ಇದು ಕಾಕತಾಳೀಯವಾದರೂ ಒಡೆಯರ್ ಕುಟುಂಬದಲ್ಲಿ ಸಂಭ್ರಮವನ್ನು ಇಮ್ಮಡಿಗೊಳಿಸಿದೆ. ಮೈಸೂರು ರಾಜ್ಯದ ಅಭಿವೃದ್ಧಿ ಜೊತೆಗೆ ಸಮಾಜದ ಸುಧಾರಣೆ ನಿಟ್ಟಿನಲ್ಲೂ ಮಹತ್ವದ ಕೊಡುಗೆ ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜನಮಾನಸದಲ್ಲಿ ಅಜರಾಮರರಾಗಿದ್ದಾರೆ. ಅವರ ಜನ್ಮದಿನದಂದೇ ಲೋಕಸಭಾ ಚುನಾವಣೆ ಫಲಿತಾಂಶ ಪ್ರಕಟಗೊಂಡಿದ್ದು, ರಾಜವಂಶಸ್ಥ ಯದುವೀರ್ ಒಡೆಯರ್ ಮೈಸೂರು-ಕೊಡಗು ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದಾರೆ. ಪೂರ್ವಜನರ ಜನ್ಮದಿನದಂದೇ ಅವರ ಜೀವನ ಮಹತ್ವದ ತಿರುವು ಪಡೆದಿದೆ. ನಾಲ್ವಡಿ ಅವರಂತೆ ಜನರ ಸೇವೆಗೆ ಅಧಿಕೃತ ಮೊಹರು ಬಿದ್ದಿದೆ. ಜನರ ನಿರೀಕ್ಷೆಯಂತೆ ಅವರ ಸೇವೆ ಮಾಡುವ ಮಹತ್ವದ ಜವಾಬ್ದಾರಿಯೂ ಯದುವೀರ್ ಅವರ ಹೆಗಲೇರಿದೆ.

ಮೈಸೂರು ರಾಜವಂಶಸ್ಥರ ಕೊಡುಗೆ ಮನ್ನಿಸಿ ಮತ ನೀಡಿದ್ದಾರೆ: ಶಾಸಕ ಹರೀಶ್‌ಗೌಡ



ಮೈಸೂರು, ಜೂ.4(ಎಸ್‌ಬಿಡಿ)- ಮೈಸೂರು ರಾಜವಂಶಸ್ಥರು ಎಂಬ ಒಂದೇ ಕಾರಣದಿಂದ ಯದುವೀರ್ ಅವರಿಗೆ ಗೆಲುವಾಗಿದೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಮೋದಿ ಅವರ ಪ್ರಭಾವ ನಡೆದಿಲ್ಲ. ಮೈಸೂರು ಕಟ್ಟಿದ ಮಹಾರಾಜರ ಮೇಲಿನ ಗೌರವದಿಂದ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿ ಯದುವೀರ್ ಅವರಿಗೆ ಮತ ನೀಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮಾರ್ಗದರ್ಶನ ಹಾಗೂ ಸಚಿವ ಕೆ.ವೆಂಕಟೇಶ್ ಅವರ ನೇತೃತ್ವದಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಚುನಾವಣೆ ಎದುರಿಸಿದೆವು. ರಾಜಮನೆತನದೊಂದಿಗಿನ ಭಾವನಾತ್ಮಕ ವಿಚಾರದಿಂದ ಮತದಾರರು ಯದುವೀರ್ ಅವರಿಗೆ ಆಶೀರ್ವದಿಸಿದ್ದಾರೆ. ಜನರ ತೀರ್ಪನ್ನು ತಲೆಬಾಗಿ ಸ್ವೀಕರಿಸುತ್ತೇವೆ. ಮುಂದಿನ ದಿನಗಳಲ್ಲಿ ಇನ್ನೂ ಉತ್ತಮವಾಗಿ ಪಕ್ಷ ಸಂಘಟಿಸಿ, ಜನರ ವಿಶ್ವಾಸ ಗಳಿಸುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯದುವೀರ್ ಒಳ್ಳೆಯ ಅಭ್ಯರ್ಥಿ; ಸಹಜವಾಗಿಯೇ ಗೆಲುವು ನಮ್ಮದೆ

ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರ ಪ್ರತಿಕ್ರಿಯೆ

ಮೈಸೂರು, ಜೂ.4(ಎಂಕೆ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಗೆಲುವಿಗಾಗಿ ಶ್ರಮಿಸಿದ ಎಲ್ಲಾ ಜೆಡಿಎಸ್-ಬಿಜೆಪಿ ಕಾರ್ಯಕರ್ತರು, ಮುಖಂಡರು, ರಾಜ್ಯ ಮತ್ತು ರಾಷ್ಟ್ರ ನಾಯಕರುಗಳಿಗೆ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷನಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡರು ತಿಳಿಸಿದರು.

ನಗರದ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಬಳಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಯದುವೀರ್ ಅವರು ಚುನಾವಣೆಯನ್ನು ಅತ್ಯಂತ ಸರಳತೆಯಿಂದ ಎದುರಿಸಿ, ಜನರ ಪ್ರೀತಿಗೆ ಪಾತ್ರರಾಗಿ ಗೆದ್ದು ಸಂಸದರಾಗಿದ್ದಾರೆ. ಆರಂಭದಲ್ಲಿ ಮಹಾರಾಜರು ಅರಮನೆಯಲ್ಲಿದ್ದವರು, ಸಾಮಾನ್ಯರ ಜೊತೆಗೆ ಸೇರುತ್ತಾರೆಯೇ, ಬೆರೆಯುತ್ತಾರೆಯೇ ಎಂಬ ಭಾವನೆಗಳೇನಿತ್ತು ಅದೆಲ್ಲವನ್ನು ದೂರ ಮಾಡಿ, ಎಲ್ಲರೊಂದಿಗೆ ಬೆರೆತು ಪ್ರತ್ಯುತ್ತರ ಕೊಟ್ಟಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ದೇಶದಲ್ಲಿ ಬಿಜೆಪಿಯ ಭದ್ರಕೋಟೆ ಎನ್ನಲಾಗಿದ್ದ ಉತ್ತರ ಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರಗಳಲ್ಲಿ ಹಿನ್ನಡೆಯಾಗಿದ್ದರೂ ಎನ್‌ಡಿಎ ಮೈತ್ರಿಕೂಟ ಸರ್ಕಾರವನ್ನು ರಚನೆ ಮಾಡಲಿದೆ. ಕಾಂಗ್ರೆಸ್ ಕೂಡ ಅಡ್ಡದಾರಿಯನ್ನು ಹಿಡಿದು ಸರ್ಕಾರ ರಚನೆ ಮಾಡುವ ಪ್ರಯತ್ನದಲ್ಲಿದೆ. ಕರ್ನಾಟಕದಲ್ಲಿ 135 ಶಾಸಕರಿದ್ದು, 5 ಗ್ಯಾರಂಟಿಗಳನ್ನು ಘೋಷಣೆ ಮಾಡಿದ್ದರು. ಆದರೆ ಅದೆಲ್ಲದರ ಪ್ರಭಾವ ಕಡಿಮೆಯಾಗಿದೆ ಎಂಬುದನ್ನು ಜನರೇ ಸಾಬೀತು ಮಾಡಿದ್ದಾರೆ ಎಂದರು.

ತಕ್ಕ ಪಾಠ ಕಲಿಸಿದ್ದಾರೆ: ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಒಂದು ಲಕ್ಷ ಬಾಂಡ್ ಕೊಡುತ್ತೇವೆ ಎಂದರು. ಎರಡ್ಮೂರು ತಿಂಗಳಿಂದ ಕೊಡದೆ ಬಾಕಿ ಉಳಿಸಿಕೊಂಡಿದ್ದ ಗ್ಯಾರಂಟಿ ಯೋಜನೆ ಹಣವನ್ನು ಒಮ್ಮೆಗೆ ಕೊಟ್ಟು ಮತ ಸೆಳೆಯುವ ಪ್ರಯತ್ನವನ್ನೂ ಮಾಡಿದ್ದರು. ಆದರೆ ಕರ್ನಾಟಕ ಜನತೆ ಮೈತ್ರಿಗೆ ಬೆಂಬಲ ನೀಡಿದ್ದಾರೆ. ಅದರಲ್ಲಿಯೂ ಮಂಡ್ಯದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಅತ್ಯಂತ ಹೆಚ್ಚಿನ ಮತಗಳಿಂದ ಗೆಲ್ಲಿಸಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕಪಾಠ ಕಲಿಸಿದ್ದಾರೆ. ಅವರ ಮುಂದೆ ಎಚ್ಚರಿಕೆ ಗಂಟೆಯನ್ನಿಟ್ಟಿದ್ದಾರೆ ಎಂಬುದನ್ನರಿತು ರಾಜ್ಯದ ಅಭಿವೃದ್ಧಿ ಮಾಡಲಿ ಎಂದು ಬಯಸುತ್ತೇನೆ ಎಂದು ಹೇಳಿದರು.

ಮತ್ತೊಂದು ಸೋಲು: ಸಿದ್ದರಾಮಯ್ಯ ಅವರಿಗೆ ತವರಿನಲ್ಲಿ ಮತ್ತೊಂದು ಸೋಲಾಯಿತಾ ಎಂಬ ಮಾಧ್ಯಮಗಳ ಮಾತಿಗೆ ಪ್ರತಿಕ್ರಿಯಿಸಿದ ಜಿಟಿಡಿ, ಸಿದ್ದರಾಮಯ್ಯ ಅವರಿಗೆ ತವರಿನಲ್ಲಿ ಸೋಲಾಗಿದೆ ಎಂದು ಹೇಳಲ್ಲ. ಬೇರೊಬ್ಬರ ಮೇಲೆ ಹೊರಿಸಲೂ ಹೋಗುವುದಿಲ್ಲ. ಯದುವೀರ್ ಒಡೆಯರ್ ಅವರು ಒಳ್ಳೆಯ ಅಭ್ಯರ್ಥಿ. ಎನ್‌ಡಿಎ ಮೈತ್ರಿಕೂಟ ಹಾಗೂ ರಾಜ್ಯದಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಗಟ್ಟಿಯಾಗಿದೆ ಎಂಬುದನ್ನು ಸಾಬೀತಾಗಿದೆ ಎಂದರು.

ಸಿದ್ದರಾಮಯ್ಯ ರಾಜೀನಾಮೆ ಕೊಡುತ್ತಾರಾ...!



ಸೂರ್ಯ-ಚಂದ್ರ ಇರೋದು ಎಷ್ಟು ಸತ್ಯವೋ ಮಂಡ್ಯದಲ್ಲಿ ಕುಮಾರಸ್ವಾಮಿ ಗೆಲ್ಲಲ್ಲ ಎಂಬುದು ಅಷ್ಟೇ ಸತ್ಯವೆಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, 1985 ರಿಂದಲೂ ಶಾಸಕರಾಗಿ, ಸಚಿವರಾಗಿ, ಉಪ ಮುಖ್ಯಮಂತ್ರಿ, ಮುಖ್ಯಮಂತ್ರಿಗಳು ಆಗಿರುವ ಸಿದ್ದರಾಮಯ್ಯ ಅವರು ರಾಜಕೀಯ ಮುತ್ಸದ್ದಿತನದಿಂದ ಮಾತನಾಡಬೇಕು. ಈಗ ಕುಮಾರಸ್ವಾಮಿ ಅವರು ಗೆದ್ದಿದ್ದಾರೆಂದು ರಾಜೀನಾಮೆ ಕೊಡ್ತಾರಾ... ಅವರ ಹೇಳಿಕೆಯನ್ನು ಒಪ್ಪುವುದಾದರೆ ರಾಜೀನಾಮೆ ಕೊಡಬೇಕು. ಆದ್ದರಿಂದ ಸಿದ್ದರಾಮಯ್ಯ ಅವರು ಈ ರೀತಿ ಮಾತನಾಡುವುದನ್ನು ಬಿಡಬೇಕು.

- ಜಿ.ಟಿ.ದೇವೇಗೌಡರು, ಅಧ್ಯಕ್ಷ, ಜೆಡಿಎಸ್ ಕೋರ್ ಕಮಿಟಿ

ಲೋಕಸಭಾ ಚುನಾವಣೆ: ಕರ್ನಾಟಕದ 28 ಕ್ಷೇತ್ರಗಳಲ್ಲಿ ಗೆದ್ದವರು; ಸೋತವರು; ಗಳಿಸಿದ ಮತಗಳ ವಿವರ

ಮೈಸೂರು-ಕೊಡಗು

ಯದುವೀರ್ – ಗೆಲುವು 7,95,503
Vs
ಎಂ.ಲಕ್ಷ್ಮಣ – ಸೋಲು 6,56,241

ಚಾಮರಾಜನಗರ

ಸುನೀಲ್ ಬೋಸ್ – ಗೆಲುವು 7,51,671
Vs
ಎಸ್.ಬಾಲರಾಜು – ಸೋಲು 5,62,965

ಮಂಡ್ಯ

ಹೆಚ್.ಡಿ.ಕುಮಾರಸ್ವಾಮಿ – ಗೆಲುವು 8,51,881
Vs
ವೆಂಕಟರಮಣೇಗೌಡ – ಸೋಲು 5,67,261

ಹಾಸನ

ಶ್ರೇಯಸ್ ಪಟೇಲ್ – ಗೆಲುವು 6,72,988
Vs
ಪ್ರಜ್ವಲ್ ರೇವಣ್ಣ – ಸೋಲು 6,30,339

ಬೆಂಗಳೂರು ಕೇಂದ್ರ

ಪಿ.ಸಿ.ಮೋಹನ್ – ಗೆಲುವು 6,58,915
Vs
ಮನ್ಸೂರ್ ಅಲಿ ಖಾನ್ – ಸೋಲು 6,26,208

ಬೆಂಗಳೂರು ಉತ್ತರ

ಶೋಭಾ ಕರಂದ್ಲಾಜೆ – ಗೆಲುವು 9,86,049
Vs
ರಾಜೀವ್ ಗೌಡ – ಸೋಲು 7,26,573

ಬೆಂಗಳೂರು ದಕ್ಷಿಣ

ತೇಜಸ್ವಿ ಸೂರ್ಯ – ಗೆಲುವು 7,50,830
Vs
ಸೌಮ್ಯ ರೆಡ್ಡಿ – ಸೋಲು 4,73,747

ಬೆಂಗಳೂರು ಗ್ರಾಮಾಂತರ

ಡಾ.ಸಿ.ಎನ್.ಮಂಜುನಾಥ್ – ಗೆಲುವು 10,79,002
Vs
ಡಿ.ಕೆ.ಸುರೇಶ್ – ಸೋಲು 8,09,355

ಬಾಗಲಕೋಟೆ

ಗದ್ದಿಗೌಡರ್ ಚಂದನಗೌಡ – ಗೆಲುವು 6,71,039
Vs
ಸಂಯುಕ್ತ ಪಾಟೀಲ್ – ಸೋಲು 6,02,640

ಬೆಳಗಾವಿ

ಜಗದೀಶ್ ಶೆಟ್ಟರ್ – ಗೆಲುವು 7,62,029
Vs
ಮೃಣಾಲ್ ಹೆಬ್ಬಾಳ್ಕರ್ – ಸೋಲು 5,83,592

ಬೀದರ್

ಸಾಗರ್ ಖಂಡ್ರೆ – ಗೆಲುವು 6,66,317
Vs
ಭಗವಂತ್ ಖೂಬಾ – ಸೋಲು 5,37,442

ಬಿಜಾಪುರ

ರಮೇಶ್ ಜಿಗಜಿಣಗಿ – ಗೆಲುವು 6,72,181
Vs
ರಾಜು ಅಲಗೂರು – ಸೋಲು 5,95,552

ಚಿಕ್ಕಬಳ್ಳಾಪುರ

ಡಾ.ಕೆ.ಸುಧಾಕರ್ – ಗೆಲುವು 8,22,619
Vs
ರಕ್ಷಾ ರಾಮಯ್ಯ – ಸೋಲು 6,59,159

ಚಿಕ್ಕೋಡಿ

ಪ್ರಿಯಾಂಕ ಜಾರಕಿಹೊಳಿ – ಗೆಲುವು 7,13,461
Vs
ಅಣ್ಣಾ ಸಾಹೇಬ್ ಜೊಲ್ಲೆ – ಸೋಲು 6,22,627

ಚಿತ್ರದುರ್ಗ

ಗೋವಿಂದ ಕಾರಜೋಳ – ಗೆಲುವು 6,84,890
Vs
ಬಿ.ಎನ್.ಚಂದ್ರಪ್ಪ – ಸೋಲು 6,36,769

ದಕ್ಷಿಣ ಕನ್ನಡ

ಕ್ಯಾ. ಬ್ರಿಜೇಶ್‌ಚೌಟ – ಗೆಲುವು 7,64,132
Vs
ಪದ್ಮರಾಜ್ ಪೂಜಾರಿ – ಸೋಲು 6,14,924

ದಾವಣಗೆರೆ

ಡಾ.ಪ್ರಭಾ ಮಲ್ಲಿಕಾರ್ಜುನ – ಗೆಲುವು 6,33,059
Vs
ಗಾಯತ್ರಿ ಸಿದ್ದೇಶ್ವರ್ – ಸೋಲು 6,06,965

ಧಾರವಾಡ

ಪ್ರಹ್ಲಾದ್ ಜೋಷಿ – ಗೆಲುವು 7,16,231
Vs
ವಿನೋದ್ ಅಸೂಟಿ – ಸೋಲು 6,17,907

ಗುಲ್ಬರ್ಗ

ರಾಧಾಕೃಷ್ಣ – ಗೆಲುವು 6,52,321
Vs
ಉಮೇಶ್ ಜಾದವ್ – ಸೋಲು 6,25,116

ಹಾವೇರಿ

ಬಸವರಾಜ ಬೊಮ್ಮಾಯಿ – ಗೆಲುವು 7,05,538
Vs
ಆನಂದಸ್ವಾಮಿ – ಸೋಲು 6,62,025

ಕೋಲಾರ

ಎಂ.ಮಲ್ಲೇಶ್ ಬಾಬು – ಗೆಲುವು 6,91,481
Vs
ಗೌತಮ್ – ಸೋಲು 6,20,093

ಕೊಪ್ಪಳ

ರಾಜಶೇಖರ್ ಹಿಟ್ನಾಳ್ – ಗೆಲುವು 6,63,511
Vs
ಡಾ.ಬಸವರಾಜ್ ಕ್ಯಾವತರ್ – ಸೋಲು 6,17,154

ರಾಯಚೂರು

ಕುಮಾರನಾಯಕ್ – ಗೆಲುವು 6,70,966
Vs
ರಾಜಾ ಅಮರೇಶ್‌ನಾಯಕ್ – ಸೋಲು 5,91,185

ಶಿವಮೊಗ್ಗ

ಬಿ.ವೈ.ರಾಘವೇಂದ್ರ – ಗೆಲುವು 7,78,721
Vs
ಗೀತಾ ಶಿವರಾಜ್‌ಕುಮಾರ್ – ಸೋಲು 5,95,006

ತುಮಕೂರು

ವಿ.ಸೋಮಣ್ಣ – ಗೆಲುವು 7,20,946
Vs
ಮುದ್ದುಹನುಮೇಗೌಡ – ಸೋಲು 5,45,352

ಉಡುಪಿ-ಚಿಕ್ಕಮಗಳೂರು

ಕೋಟಾ ಶ್ರೀನಿವಾಸ ಪೂಜಾರಿ – ಗೆಲುವು 7,32,234
Vs
ಜಯಪ್ರಕಾಶ್ ಹೆಗಡೆ – ಸೋಲು 473059

ಉತ್ತರ ಕನ್ನಡ

ವಿಶ್ವೇಶ್ವರ ಹೆಗಡೆ ಕಾಗೇರಿ – ಗೆಲುವು 7,82,495
Vs
ಅಂಜಲಿ ನಿಂಬಾಳ್ಕರ್ – ಸೋಲು 4,45,067

ಬಳ್ಳಾರಿ

ತುಕಾರಾಂ – ಗೆಲುವು 7,30,845
Vs
ಶ್ರೀರಾಮುಲು – ಸೋಲು 6,31,853

ತಮಿಳುನಾಡಿನಲ್ಲಿ ಇಂಡಿಯಾ ಬಲ


ನವದೆಹಲಿ: ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಕಾಂಗ್ರೆಸ್ ತಮ್ಮ ಹಿಡಿತ ಕಾಪಾಡಿಕೊಂಡಿವೆ. ತೆಲಂಗಾಣದಲ್ಲಿ ಇಂಡಿಯಾ ಮತ್ತು ಎನ್‌ಡಿಎ ಸಮಬಲದ ಹೋರಾಟ ನಡೆಸಿವೆ. ಕರ್ನಾಟಕದಲ್ಲಿ ಬಿಜೆಪಿ ತನ್ನ ಕೆಲ ಸ್ಥಾನಗಳನ್ನು ಕಳೆದು ಕೊಂಡಿದ್ದರೂ, ಕಾಂಗ್ರೆಸ್‌ಗೆ ಹೆಚ್ಚಿನ ಸ್ಥಾನ ಗೆಲ್ಲುವುದನ್ನು ತಡೆಯುವಲ್ಲಿ ಜೆಡಿಎಸ್ ಜೊತೆಗಿನ ಮೈತ್ರಿ ನೆರವಾಗಿದೆ.

ಈ ಎಲ್ಲದರ ಪರಿಣಾಮ ಕೇಂದ್ರದಲ್ಲಿ ಎನ್‌ಡಿಎ 294 ಸ್ಥಾನಗಳನ್ನು ಪಡೆದಿದೆ. ಸರ್ಕಾರ ರಚಿಸಲು 272 ಸ್ಥಾನಗಳು ಅಗತ್ಯ. ಹೀಗಾಗಿ ಸರ್ಕಾರ ರಚನೆಗೆ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸಿದ್ಧತೆ ನಡೆಸಿದೆ. ಈ ಬಾರಿ 400 ಸೀಟುಗಳನ್ನು ಗೆಲ್ಲುವ ಉಮೇದಿನಲ್ಲಿದ್ದ ಬಿಜೆಪಿಗೆ ಉತ್ತರ ಪ್ರದೇಶ, ಮಹಾರಾಷ್ಟ್ರ ಹಾಗೂ ರಾಜಸ್ಥಾನದಲ್ಲಿ ತೀವ್ರ ಹಿನ್ನಡೆ ಉಂಟಾಯಿತು. ಇದರ ಪರಿಣಾಮವಾಗಿ ಅದು 295 ಸ್ಥಾನಗಳ ಆಸುಪಾಸಿಗೆ ಸರಳ ಬಹುಮತಕ್ಕೆ ತೃಪ್ತಿಪಡಬೇಕಾಗಿದೆ.

ಮತ್ತೊಂದೆಡೆ ಇಂಡಿಯಾ ಬಣ 231 ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಿ, ಅಧಿಕಾರ ಹಿಡಿಯುವ ತಂತ್ರ ರಚಿಸಿದೆ. ಜೂನ್ 1ರಂದು ವಿವಿಧ ಸಂಸ್ಥೆಗಳು ಪ್ರಕಟಿಸಿದ ಚುನಾವಣೋತ್ತರ ಸಮೀಕ್ಷೆ ಯಲ್ಲಿ 180 ಕ್ಷೇತ್ರಗಳಲ್ಲಿ ಇಂಡಿಯಾ ಬಣ ಗೆಲುವು ಸಾಧಿಸಬಹುದು ಎಂದು ಅಂದಾಜಿಸಲಾಗಿತ್ತು. ಆದರೆ ಹೆಚ್ಚುವರಿ ಕ್ಷೇತ್ರಗಳನ್ನು ಗೆಲ್ಲುವ ಮೂಲಕ ಸರ್ಕಾರ ರಚನೆಯ ಕಸರತ್ತು ಒಕ್ಕೂಟದೊಳಗೆ ಆರಂಭಗೊಂಡಿದೆ. ಪ್ರಮುಖ ಪಕ್ಷಗಳಾದ ಮತ್ತು ಎನ್‌ಡಿಎ ಕೂಟದಲ್ಲಿರುವ ಆಂಧ್ರದ ಟಿಡಿಪಿ ಮತ್ತು ಬಿಹಾರದ ಜೆಡಿಯು ಜತೆ ಮಾತುಕತೆಗೆ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಇಂದೋರ್‌ನಲ್ಲಿ ನೋಟಾಗೆ 2ನೇ ಸ್ಥಾನ

ಇಂದೋರ್: ಮಧ್ಯಪ್ರದೇಶದ ಇಂದೋರ್ ಲೋಕ ಸಭಾ ಕ್ಷೇತ್ರದಲ್ಲಿ 1.7 ಲಕ್ಷ ಜನರು 'ಮೇಲಿನ ಯಾರೂ ಅಲ್ಲ' (ನೋಟಾ) ಆಯ್ಕೆಯನ್ನು ಒತ್ತಿದ್ದಾರೆ. ಇದರೊಂದಿಗೆ




ಚುನಾವಣಾ ಇತಿಹಾಸದಲ್ಲೇ ಕ್ಷೇತ್ರವೊಂದರಲ್ಲಿ ಅತಿಹೆಚ್ಚು ನೋಟಾ ಮತ ಪ್ರಯೋಗವಾದಂತಾಗಿದೆ. ಮಾಹಿತಿ ಪ್ರಕಾರ, ಬಿಜೆಪಿ ಅಭ್ಯರ್ಥಿ ಶಂಕರ್ ಲಲ್ವಾನಿ ಅವರು 9,90,698 ಮತ ಗಳಿಸಿದ್ದಾರೆ. ಅವರ ಪ್ರತಿಸ್ಪರ್ಧಿ ಬಹುಜನ ಸಮಾಜವಾದಿ ಪಕ್ಷದ ಸಂಜಯ್ ಅವರು 42,095 ಮತಗಳನ್ನು ಗಳಿಸಿದ್ದಾರೆ. ಸಂಜಯ್ ಅವರಿಗಿಂತಲೂ ಹೆಚ್ಚು (1,72,798) 'ನೋಟಾ' ಮತಗಳು ಬಿದ್ದಿರುವುದು ವಿಶೇಷ. 10 ಲಕ್ಷಕ್ಕೂ ಹೆಚ್ಚು ಮತಗಳಿಂದ 'ಇಂದೋರ್' ಗೆಲ್ಲುವ ಯೋಜನೆ ಹಾಕಿಕೊಂಡಿದ್ದ ಬಿಜೆಪಿ, 9,48,603 ಮತಗಳ ಅಂತರದಿಂದ ಮುಂದಿದೆ.

ಚುನಾವಣಾ ಇತಿಹಾಸದಲ್ಲೇ ಅತೀ ಹೆಚ್ಚು ನೋಟಾ ಮತಗಳಿಗೆ ಇಂದೋರ್ ಸಾಕ್ಷಿಯಾಗಿದೆ. 2019ರಲ್ಲಿ ಬಿಹಾರದ ಎಸ್‌ಸಿ ಮೀಸಲು ಕ್ಷೇತ್ರ ಗೋಪಾಲಗಂಜ್‌ನಲ್ಲಿ 51,660 ನೋಟಾ ಮತಗಳನ್ನು ಹಾಕಲಾಗಿತ್ತು. ಇದು ಈವರೆಗೆ ದಾಖಲೆಯಾಗಿತ್ತು. ಜೆಡಿ(ಯು) ಅಭ್ಯರ್ಥಿ ಡಾ.ಅಲೋಕ್ ಕುಮಾರ್ ಸುಮನ್ ಅವರು 5,68,160 ಮತಗಳನ್ನು ಗಳಿಸಿ ಗೆಲುವು ಸಾಧಿಸಿದ್ದರು. 2014ರಲ್ಲಿ ತಮಿಳುನಾಡಿನ ನೀಲಗಿರಿಯಲ್ಲಿ 46,559 ನೋಟಾ ಮತ ಹಾಕಲಾಗಿತ್ತು.

ಎನ್‌ಡಿಎ ಸರ್ಕಾರ ರಚನೆ ವಿಶ್ವಾಸವಿದೆ

ಹಾವೇರಿ: ನರೇಂದ್ರ ಮೋದಿ ನೇತೃತ್ವದಲ್ಲಿ ಎನ್‌ಡಿಎ



ಸರ್ಕಾರ ರಚನೆ ಆಗಲಿದೆ ಎಂದು ಹಾವೇರಿ-ಗದಗ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಈ ಚುನಾವಣೆಯಲ್ಲಿ ಬಿಜೆಪಿಗೆ ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಹಿನ್ನಡೆ ಆಗಿದೆ. ಆದರೆ, ಮತ ಎಣಿಕೆ ಪೂರ್ಣಗೊಳ್ಳುವ ವೇಳೆಗೆ ಈಗಿರುವ ಸಂಖ್ಯೆ ಹೆಚ್ಚಾಗುವ ನಿರೀಕ್ಷೆ ಇದೆ. ಎನ್‌ಡಿಎ ಮೈತ್ರಿಕೂಟಕ್ಕೆ ಮುನ್ನೂರಕ್ಕಿಂತ ಹೆಚ್ಚು ಸ್ಥಾನಗಳು ಸಿಗಲಿವೆ ಎಂದರು.

ಕೆಲವು ರಾಜ್ಯಗಳಲ್ಲಿ ನಮ್ಮ ನಿರೀಕ್ಷೆಗಿಂತ ಕಡಿಮೆ ಸ್ಥಾನಗಳು ಬಂದಿವೆ. ಅದಕ್ಕೆ ಕಾರಣಗಳು ಹಲವು ಇದ್ದು, ಅದನ್ನು ಮುಂದಿನ ದಿನಗಳಲ್ಲಿ ವಿಶ್ಲೇಷಣೆ ಮಾಡಲಾಗುವುದು. ಕೊರತೆಗಳನ್ನು ಸರಿಪಡಿಸಿ ಮೋದಿ ನೇತೃತ್ವದಲ್ಲಿ ದೇಶವನ್ನು ಮುನ್ನಡೆಸಲಾಗುವುದು ಎಂದರು.

ಕಲ್ಯಾಣ ಕರ್ನಾಟಕದಲ್ಲಿ ಬಿಜೆಪಿಗೆ ಹಿನ್ನಡೆ ಆಗಿರುವುದು ಸತ್ಯ. ನನ್ನ ಪ್ರಕಾರ ಕರ್ನಾಟಕದಲ್ಲಿ ಇನ್ನೂ ನಾಲ್ಕೈದು ಸ್ಥಾನಗಳನ್ನು ಗೆಲ್ಲಬೇಕಿತ್ತು. ಆದರೆ, ಕಡಿಮೆ ಅಂತರದಲ್ಲಿ ಅವುಗಳನ್ನು ಕಳೆದುಕೊಂಡೆವು. ಅದರ ಬಗ್ಗೆಯೂ ಚಿಂತನೆ ಮಾಡಲಾಗುವುದು ಎಂದರು.

ಗುಜರಾತ್‌ನಲ್ಲಿ ದಶಕಗಳ ನಂತರ ಖಾತೆ ತೆರೆದ ಕಾಂಗ್ರೆಸ್!

ಅಹಮದಾಬಾದ್: ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ತವರು ರಾಜ್ಯದಲ್ಲಿ ದಶಕಗಳ ಕಾಲ ಪ್ರಾಬಲ್ಯ ಮೆರೆದಿದ್ದ ಬಿಜೆಪಿ ಗೆಲುವಿನ ಓಟಕ್ಕೆ ಕಾಂಗ್ರೆಸ್ ಅಂಕುಶ ಹಾಕಿದ್ದು, ಕೊನೆಗೂ ಖಾತೆ ತೆರೆದಿದೆ. ಬನಸ್ಕಾಂತ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಗೆನಿಬೆನ್ ಠಾಕೂರ್ 20,000 ಮತಗಳ ಅಂತರದಿಂದ ತಮ್ಮ ಸಮೀಪದ ಬಿಜೆಪಿ ಅಭ್ಯರ್ಥಿ ರೇಣುಕಾ ಚೌಧರಿ ಅವರನ್ನು ಸೋಲಿಸಿದ್ದಾರೆ.

ಆರಂಭದ ಸುತ್ತಿನಿಂದಲೂ ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳ ನಡುವೆ ನೇರಾ ನೇರ ಪೈಪೋಟಿ ನಡೆಯಿತು. ಅಂತಿಮವಾಗಿ ಕಾಂಗ್ರೆಸ್ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಯಿತು. ಕ್ಷೇತ್ರದೊಂದಿಗೆ ನಿರಂತರ ಸಂಪರ್ಕ, ಕ್ರೌಡ್ ಫಂಡಿಂಗ್ ಮತ್ತಿತರ ಕಾರ್ಯಕ್ರಮಗಳು ಕಾಂಗ್ರೆಸ್ ಪಕ್ಷಕ್ಕೆ ಅನುಕೂಲ ಮಾಡಿವೆ.

ಈ ಮಧ್ಯೆ ಗುಜರಾತಿನ 26 ಕ್ಷೇತ್ರಗಳ ಪೈಕಿ 25ರಲ್ಲಿ ಬಿಜೆಪಿ ಗೆಲುವು ಸಾಧಿಸಿದೆ.

ಗಾಂಧಿನಗರದಲ್ಲಿ ಅಮಿತ್ ಶಾ 6 ಲಕ್ಷ ಮತಗಳಿಂದ ಗೆಲುವು ಸಾಧಿಸಿದ್ದರೆ, ನವಸಾರಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಸಿ.ಆರ್. ಪಾಟೀಲ್ ನಾಲ್ಕು ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಪೋರ್ ಬಂದರ್ ಕ್ಷೇತ್ರದಿಂದ ಕೇಂದ್ರ ಸಚಿವ ಮನ್ಸುಖ್ ಮಾಂಡವೀಯಾ ಜಯ ಗಳಿಸಿದ್ದಾರೆ.

2019ರ ಲೋಕಸಭಾ ಚುನಾವಣೆಯ ಹಿನ್ನೋಟ

ನವದೆಹಲಿ: 2019ರ ಮೇ 23ರಂದು ಪ್ರಕಟಗೊಂಡಿದ್ದ 17ನೇ ಲೋಕಸಭೆಗೆ ನಡೆದಿದ್ದ ಚುನಾವಣಾ ಫಲಿತಾಂಶದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟ ಭಾರೀ ಬಹುಮತ ಪಡೆದಿತ್ತು. ಆಗ ಎನ್‌ಡಿಎ 353 ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಿತ್ತು. ಯುಪಿಎ ಕೇವಲ 93 ಕ್ಷೇತ್ರಗಳನ್ನಷ್ಟೇ ಗೆದ್ದುಕೊಂಡಿತ್ತು. ಆಗ ಬಿಜೆಪಿ 303 ಸ್ಥಾನಗಳನ್ನು ಗೆದ್ದಿದ್ದರೆ, ಕಾಂಗ್ರೆಸ್ ಕೇವಲ 52 ಕ್ಷೇತ್ರಗಳನ್ನಷ್ಟೇ ಗೆದ್ದಿತ್ತು.

ಈ ಬಾರಿ 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಜೂನ್ 1ರಂದು ನಡೆದಿದ್ದ 7ನೇ ಹಾಗೂ ಅಂತಿಮ ಹಂತದ ಮತದಾನದ ನಂತರ ಪ್ರಕಟಗೊಂಡ ವಿವಿಧ ಸಂಸ್ಥೆಗಳ ಚುನಾವಣೋತ್ತರ ಸಮೀಕ್ಷೆಗಳಲ್ಲಿ ಇಂಡಿಯಾ ಟುಡೆ ಮೈ ಆಕ್ಸಿಸ್, ಟುಡೇಸ್ ಚಾಣಕ್ಯ ಸಮೀಕ್ಷಾ ತಂಡಗಳು ಎನ್‌ಡಿಎ ಈ ಬಾರಿ 400ಕ್ಕೂ ಅಧಿಕ ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಲಿದೆ ಎಂದೇ ಹೇಳಿದ್ದವು. ಎಬಿಪಿ-ಸಿವೋಟರ್ಸ್ 353ರಿಂದ 383 ಕ್ಷೇತ್ರಗಳನ್ನು ಎನ್‌ಡಿಎಗೆ ನೀಡಿತ್ತು. ಜನ್ ಕಿ ಬಾತ್ 362-392 ಸ್ಥಾನಗಳನ್ನು ಎನ್‌ಡಿಎ ಗೆಲ್ಲಬಹುದು ಎಂದಿತ್ತು. ಸ್ವತಂತ್ರ ಭಾರತದಲ್ಲಿ 1951-52ರಲ್ಲಿ 44 ದಿನಗಳ ಸುದೀರ್ಘ ಅವಧಿಗೆ ಚುನಾವಣೆ ನಡೆದಿತ್ತು. ಇದಾದ ನಂತರ 82 ದಿನಗಳ ಕಾಲ ಚುನಾವಣೆ ನಡೆದಿದ್ದು 2024ರಲ್ಲೇ. ಒಟ್ಟು 543 ಕ್ಷೇತ್ರಗಳಿಗೆ ಮಾರ್ಚ್ 14ರಂದು ಚುನಾವಣೆ ಘೋಷಣೆಯಾಗಿತ್ತು. ಏ. 19ರಿಂದ ಜೂನ್ 1ರವರೆಗೆ 7 ಹಂತಗಳಲ್ಲಿ ಮತದಾನ ನಡೆಯಿತು. ಈ ಇಡೀ ಪ್ರಕ್ರಿಯೆಯಲ್ಲಿ ಒಟ್ಟು 1.5 ಕೋಟಿ ಅಧಿಕಾರಿಗಳು ಪಾಲ್ಗೊಂಡಿದ್ದರು. 10.5 ಲಕ್ಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ಹಬ್ಬ ಎಂದೇ ಕರೆಯಲಾಗುವ ಭಾರತದ ಸಾರ್ವತ್ರಿಕ ಚುನಾವಣೆಯಲ್ಲಿ 96 ಕೋಟಿ ಮತದಾರರಲ್ಲಿ 64 ಕೋಟಿಗೂ ಹೆಚ್ಚು ಜನ ತಮ್ಮ ಹಕ್ಕುಗಳ ಚಲಾವಣೆ ಮಾಡಿದ್ದರು.

ವಿರಾಮ ಕೊಟ್ಟಿದ್ದಕ್ಕೆ ಜನತೆಗೆ ಧನ್ಯವಾದ

ಬೆಂಗಳೂರು: ಹಾಲಿ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ತೀವ್ರ ಕುತೂಹಲ ಕೆರಳಿಸಿದ್ದ ಕ್ಷೇತ್ರಗಳಲ್ಲಿ ಒಂದಾದ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್‌ಗೆ ಸೋಲಾಗಿದ್ದು, ಫಲಿತಾಂಶ ಪ್ರಕಟ ಬಳಿಕ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದಾರೆ.



ಬೆಂಗಳೂರು ಗ್ರಾಮಾಂತರ ಕ್ಷೇತ್ರ ಈ ಬಾರಿ ರಾಜ್ಯದ ಹೈವೋಲ್ಟೇಜ್ ಕ್ಷೇತ್ರಗಳಲ್ಲಿ ಒಂದಾಗಿತ್ತು. ಜಯದೇವ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿ ಲಕ್ಷಾಂತರ ಜನರ ಹೃದಯ ಗೆದ್ದಿರುವ ಡಾ. ಮಂಜುನಾಥ್ ಹಾಲಿ ಸಂಸದ ಡಿಕೆ ಸುರೇಶ್ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಎರಡು ಬಾರಿ ಸಂಸದರಾಗಿರುವ ಡಿ.ಕೆ. ಸುರೇಶ್, ಹ್ಯಾಟ್ರಿಕ್ ಗೆಲುವು ಸಾಧಿಸುವ ಹುಮ್ಮಸ್ಸಿನಲ್ಲಿದ್ದರು. ಆದರೆ, ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿ ಡಾ.ಮಂಜುನಾಥ್ ಭರ್ಜರಿ ಗೆಲುವು ಸಾಧಿಸಿದ್ದಾರೆ.

ಮಂಡ್ಯದಲ್ಲಿ ಕುಮಾರಸ್ವಾಮಿಗೆ ಅಭೂತಪೂರ್ವ ಗೆಲುವು

ಕೆ.ಆರ್.ನಗರದಲ್ಲಿ ಜೆಡಿಎಸ್, ಬಿಜೆಪಿ ಕಾರ್ಯಕರ್ತರ ವಿಜಯೋತ್ಸವ



ಕುಮಾರಸ್ವಾಮಿ ಜಯಗಳಿಸಿದ ಹಿನ್ನೆಲೆಯಲ್ಲಿ ಕೆ.ಆರ್.ನಗರದಲ್ಲಿ ಜೆಡಿಎಸ್, ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಕೆ.ಆರ್.ನಗರ, ಜೂ.4– ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಅಭೂತ ಪೂರ್ವ ಜಯಗಳಿಸಿದ ಹಿನ್ನೆಲೆಯಲ್ಲಿ ಕೆ.ಆರ್.ನಗರದಲ್ಲಿ ಜೆಡಿಎಸ್, ಬಿಜೆಪಿ ಕಾರ್ಯರ್ತರು ಸಿಹಿ ಹಂಚಿ ಅದ್ದೂರಿಯಾಗಿ ವಿಜಯೋತ್ಸವ ಆಚರಿಸಿದರು.

ಮಂಗಳವಾರ ಬೆಳಗ್ಗೆ ಮತ ಎಣಿಕೆ ಆರಂಭವಾದ ಮೊದಲ ಸುತ್ತಿನಿಂದಲೂ ಮುನ್ನಡೆ ಕಾಯ್ದುಕೊಂಡಿದ್ದ ಕುಮಾರಸ್ವಾಮಿ ಗೆಲುವಿಗೆ ಪಟ್ಟಣದಲ್ಲಿ ಮುಖಂಡ ರುದ್ರೇಶ್ ನೇತೃತ್ವದಲ್ಲಿ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಮತ್ತು ಕುಮಾರಸ್ವಾಮಿ ಅಭಿಮಾನಿಗಳು ವಿವಿಧ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.


ಅಂತಿಮವಾಗಿ ಮಧ್ಯಾಹ್ನದ ವೇಳೆಗೆ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ವಿರುದ್ಧ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಅವರು 2,84,620 ಮತಗಳ ಅಂತರದಲ್ಲಿ ಗೆಲುವು ಸಾಧಿಸುತ್ತಿದ್ದಂತೆಯೇ ಜೆಡಿಎಸ್, ಬಿಜೆಪಿ ಕಾರ್ಯಕರ್ತರು ಪಟ್ಟಣದ ಬಸವೇಶ್ವರ ಸರ್ಕಲ್ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಾರ್ವಜನಿಕರಿಗೆ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಅಲ್ಲದೇ ರುದ್ರೇಶ್ ನೇತೃತ್ವದಲ್ಲಿ ಕಾರ್ಯಕರ್ತರು ಪಟ್ಟಣದ ವಿವಿಧ ವಾರ್ಡ್‌ಗಳಿಗೆ ತೆರಳಿ ಸಿಹಿ ಹಂಚಿ ಕೇಂದ್ರದಲ್ಲಿ ಮತ್ತೊಮ್ಮೆ ಬಿಜೆಪಿ, ಮತ್ತೊಮ್ಮೆ ಪ್ರಧಾನಿ ಮೋದಿ ಹಾಗೂ ಕೇಂದ್ರ ಕೃಷಿ ಸಚಿವ ಹೆಚ್.ಡಿ.ಕುಮಾರಸ್ವಾಮಿ ಎಂದು ಘೋಷಣೆ ಕೂಗಿ ಸಂಭ್ರಮಿಸಿದರು.

ತಾಲೂಕಿನಲ್ಲಿ 144 ಸೆಕ್ಷನ್ ಜಾರಿಗೊಳಿಸಿದ್ದ ಹಿನ್ನೆಲೆಯಲ್ಲಿ ಸಿಪಿಐ ಸಂತೋಷ್ ನೇತೃತ್ವದಲ್ಲಿ ಸೂಕ್ತ ಬಿಗಿ ಬಂದೋಬಸ್ತ್ ಕೈಗೊಂಡು, ಪಟ್ಟಣದ ಎಲ್ಲಾ ವೃತ್ತಗಳಲ್ಲೂ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು. ಅಲ್ಲದೇ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸುವುದಕ್ಕೆ ತಡೆಯೊಡ್ಡಲಾಗಿತ್ತು.

ಈ ವೇಳೆ ಜೆಡಿಎಸ್ ಜಿಲ್ಲಾ ಮಹಿಳಾ ಅಧ್ಯಕ್ಷೆ ದಾಕ್ಷಾಯಿಣಿ, ತಾಲೂಕು ಅಧ್ಯಕ್ಷೆ ರಾಜಲಕ್ಷ್ಮಿ, ಮಾಜಿ ಗ್ರಾಪಂ ಅಧ್ಯಕ್ಷ ಅನಿಫ್, ಮುಖಂಡರಾದ ಧರ್ಮ, ಶ್ರೀನಿವಾಸ್, ಮೋಹನ್, ಅಭಿ, ಚಂದ್ರು, ಹರೀಶ, ರಾಘು ಸೇರಿದಂತೆ ನೂರಾರು ಕಾರ್ಯಕರ್ತರಿದ್ದರು.

ಮತದಾರರಿಗೆ ಸಾರಾ ಅಭಿನಂದನೆ



ಕೆ.ಆರ್.ನಗರ, ಜೂ.4– ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ, ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಅವರು 2.84 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಲ್ಲು ಕಾರಣರಾದ ಮಂಡ್ಯ ಲೋಕಸಭಾ ಕ್ಷೇತ್ರದ ಮತದಾರರು ಹಾಗೂ ಬಿಜೆಪಿ, ಜೆಡಿಎಸ್ ಕಾರ್ಯಕರ್ತರು, ಮುಖಂಡರಿಗೆ ಮಾಜಿ ಸಚಿವ ಸಾ.ರಾ.ಮಹೇಶ್ ಅಭಿನಂದನೆ ಸಲ್ಲಿಸಿದ್ದಾರೆ.

ಮಂಡ್ಯ ಲೋಕಸಭಾ ಕ್ಷೇತ್ರದ ಫಲಿತಾಂಶ ಹೊರ ಬೀಳುತ್ತಿದ್ದಂತೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೇಸತ್ತಿದ್ದ ಮಂಡ್ಯ ಲೋಕಸಭಾ ಕ್ಷೇತ್ರದ ಮಹಾಜನತೆ ಸತ್ಯಕ್ಕೆ ಜಯ ಸುಳ್ಳಿಗೆ ಅಪಜಯ ಎಂಬಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿ ಅವರನ್ನು ಭಾರಿ ಬಹುಮತದಿಂದ ಆಯ್ಕೆ ಮಾಡಿದ್ದಾರೆ ಎಂದರು.

ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸೇರಿದಂತೆ ಏಳು ಶಾಸಕರು ಹಾಗೂ ಇಬ್ಬರು ವಿಧಾನ ಪರಿಷತ್ ಸದಸ್ಯರು ಬಾರಿ ಹಣವಂತನಾದ ವೆಂಕಟರಮಣೇಗೌಡ(ಸ್ಟಾರ್ ಚಂದ್ರು) ಗುತ್ತಿಗೆದಾರನನ್ನು ಕರೆತಂದು ನಿಲ್ಲಿಸುವ ಜೊತೆಗೆ ಆತನನ್ನು ಹರಕೆಯ ಕುರಿ ಮಾಡಿ ಅಪಪ್ರಚಾರ, ಕುತಂತ್ರ ಮಾಡಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರನ್ನು ಸೋಲಿಸಲೇಬೇಕೆಂಬ ತಂತ್ರಗಾರಿಕೆಗೆ 8 ತಾಲೂಕಿನ ಮತದಾರರು ತಕ್ಕ ಉತ್ತರ ನೀಡಿದ್ದಾರೆ ಎಂದರು.

ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ನನ್ನ ವಿರುದ್ಧ 27400 ಮತಗಳ ಅಂತರದಲ್ಲಿ ಗೆದ್ದಿದ್ದ ಕಾಂಗ್ರೆಸ್ ಅಭ್ಯರ್ಥಿಯ ಒಂದು ವರ್ಷದ ಆಡಳಿತ ಹಾಗೂ ವರ್ಗಾವಣೆ, ಭ್ರಷ್ಟಾಚಾರ, ದ್ವೇಷದ ರಾಜಕಾರಣ ನೋಡಿದ ಎರಡೂ ತಾಲೂಕಿನ ಮಹಾಜನತೆ ಲೋಕಸಭಾ ಚುನಾವಣೆಯಲ್ಲಿ ಕುಮಾರಸ್ವಾಮಿ ಅವರಿಗೆ 7500 ಮತಗಳ ಲೀಡ್ ನೀಡುವ ಮೂಲಕ ಎಚ್ಚರಿಕೆ ನೀಡಿದ್ದಾರೆ ಎಂದರು.

ಇತಿಹಾಸ ನಿರ್ಮಾಣ: ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ ಮಂಡ್ಯ ಲೋಕಸಭಾ ವ್ಯಾಪ್ತಿಗೆ ಸೇರಿದಾಗಿನಿಂದ ಇಲ್ಲಿವರೆಗೆ ಜೆಡಿಎಸ್ ಅಭ್ಯರ್ಥಿಗೆ ಹೆಚ್ಚು ಲೀಡ್ ನೀಡಿರಲಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಜಯಗಳಿಸಿದ್ದ ಪಕ್ಷೇತರ ಅಭ್ಯರ್ಥಿ ಸುಮಲತಾ ಅವರಿಗೆ 2 ಸಾವಿರಕ್ಕಿಂತ ಹೆಚ್ಚು ಲೀಡ್ ಸಿಕ್ಕಿತ್ತು. ಆದರೆ ಈ ಬಾರಿಯ ಚುನಾವಣೆಯಲ್ಲಿ ಕೆ.ಆರ್.ನಗರ ಕ್ಷೇತ್ರದ ಜನತೆ ಕುಮಾರಸ್ವಾಮಿ ಅವರಿಗೆ 7500 ಮತಗಳ ಲೀಡ್ ನೀಡುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ ಎಂದರು.

ಯದುವೀರ್‌ಗೆ ಜಯ: ಜೆಡಿಎಸ್ ಕಾರ್ಯಕರ್ತರ ವಿಜಯೋತ್ಸವ



ಚುನಾವಣೆಯಲ್ಲಿ ಯದುವೀರ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಹುಣಸೂರಿನಲ್ಲಿ ಜೆಡಿಎಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಹುಣಸೂರು, ಜೂ.4– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಭರ್ಜರಿ ಜಯ ಗಳಿಸಿದ ಹಿನ್ನೆಲೆಯಲ್ಲಿ ನಗರದ ಹಳೇ ಬಸ್ ನಿಲ್ದಾಣದ ಬಳಿಯ ಜೆಡಿಎಸ್ ಕಚೇರಿ ಎದುರು ಕಾರ್ಯಕರ್ತರು ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಈ ವೇಳೆ ಚಿಕ್ಕಹುಣಸೂರು ಗೋವಿಂದೇಗೌಡ, ಅಸ್ವಾಳ್ ಕೆಂಪೇಗೌಡ, ಹೆಚ್.ಎಸ್.ಲೋಕೇಶ್, ವೆಂಕಟೇಶ್, ಮಾಜಿ ಪುರಸಭಾಧ್ಯಕ್ಷ ಹೆಚ್.ಎನ್.ಚಂದ್ರಶೇಖರ್, ಟಿಎಪಿಸಿಎಂಎಸ್ ಅಧ್ಯಕ್ಷ ಬಸವಲಿಂಗಯ್ಯ, ಮಾಜಿ ಉಪಾಧ್ಯಕ್ಷರಾದ ಹೆಚ್.ಟಿ.ಬಾಬು, ವಾಸು, ವೆಂಕಟೇಶ್ ಗೌಡ, ಜ್ಯೋತಿಕುಮಾರ್, ಕುಮಾರ್, ಸಿ.ಪಿ.ಸಿದ್ದಯ್ಯ, ಗೋವಿಂದೇಗೌಡ, ನಂಜುಂಡೇಗೌಡ, ಸಮಿವುಲ್ಲಾ ಸೇರಿದಂತೆ ನೂರಾರು ಜೆಡಿಎಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ತಂದೆ–ತಾಯಿ ಆಶೀರ್ವಾದ ಪಡೆದ ಬೋಸ್....





ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ಕಾಂಗ್ರೆಸ್ ವಿಜೇತ ಅಭ್ಯರ್ಥಿ ಸುನೀಲ್ ಬೋಸ್ ಅವರು ತಂದೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಹಾಗೂ ತಾಯಿ ಆಶೀರ್ವಾದ ಪಡೆದರು.

ಗೆದ್ದು ಬೀಗಿದ ಶ್ರೇಯಸ್: ಕಾಂಗ್ರೆಸ್ ಹರ್ಷೋಲ್ಲಾಸ



ಹಾಸನ: ಹಲವು ಕಾರಣಗಳಿಗೆ ರಾಜ್ಯ ಹಾಗೂ ದೇಶದ ಗಮನ ಸೆಳೆದಿದ್ದ ಹಾಸನ ಲೋಕಸಭಾ ಕ್ಷೇತ್ರದಲ್ಲಿ ನಿರೀಕ್ಷೆಯಂತೆ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಗೆದ್ದು ಬೀಗಿದ್ದಾರೆ.

ತಮಗೆ ಟಿಕೆಟ್ ಘೋಷಣೆಯಾದ ದಿನದಿಂದಲೇ ಕಾರ್ಯಪ್ರವೃತ್ತರಾಗಿ ಚಿಕ್ಕಮಗಳೂರು ಜಿಲ್ಲೆ ಕಡೂರು ಸೇರಿದಂತೆ 8 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲೂ ಹಗಲು–ರಾತ್ರಿ ಎನ್ನದೆ ಸುತ್ತಾಡಿದ್ದ ಶ್ರೇಯಸ್ ಸ್ವಾಭಿಮಾನಕ್ಕೆ ಮತ ನೀಡಿ ಎಂದು ಮನವಿ ಮಾಡಿದ್ದರು. ಅದಕ್ಕೀಗ ಮತದಾರರು ಅಸ್ತು ಎಂದಿದ್ದಾರೆ.

ಲೋಕಸಭೆ ಚುನಾವಣೆಯ ಮತ ಎಣಿಕೆ ಇಂದು ನಗರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ನಡೆಯಿತು. ಆರಂಭ ದಲ್ಲಿ ಕೊಂಚ ಹಿನ್ನೆಲೆ ಕಾಯ್ದುಕೊಂಡಿದ್ದ ಶ್ರೇಯಸ್ ಪಟೇಲ್ ನಂತರದಲ್ಲಿ ನಿರಂತರವಾಗಿ ಮೇಲುಗೈ ಸಾಧಿಸುತ್ತಾ ಕಡೆಗೂ ಗೆಲುವಿನ ನಗೆ ಬೀರಿದರು.

ಅಂತಿಮವಾಗಿ ಶ್ರೇಯಸ್ ಪಟೇಲ್, 6,70,599 ಮತ ಪಡೆದರೆ, ಪ್ರತಿಸ್ಪರ್ಧಿ ಎನ್‌ಡಿಎ ಅಭ್ಯರ್ಥಿ ಪ್ರಜ್ವಲ್ ರೇವಣ್ಣ 6,26,843 ಮತ ಪಡೆದರು. ಶ್ರೇಯಸ್ ಪಟೇಲ್ 43,756 ಮತಗಳ ಅಂತರದಿಂದ ವಿಜಯಮಾಲೆ ಧರಿಸಿದರು.

ಮುಖಂಡರ ದೌಡು: ಶ್ರೇಯಸ್ ಗೆಲುವಿನ ಸುದ್ದಿ ತಿಳಿಯುತ್ತಿದ್ದಂತೆಯೇ ಶಾಸಕ ಕೆ.ಎಂ.ಶಿವಲಿಂಗೇಗೌಡ, ಮುಖಂಡರಾದ ಬಾಗೂರು ಮಂಜೇಗೌಡ, ಬನವಾಸೆ ರಂಗಸ್ವಾಮಿ, ಎಂ.ಟಿ.ಕೃಷ್ಣೇಗೌಡ, ಹೆಚ್.ಕೆ. ಮಹೇಶ್ ಹಾಗೂ ಶ್ರೇಯಸ್ ಅವರ ತಾಯಿ ಅನುಪಮಾ ಮೊದಲಾದವರು ಆಗಮಿಸಿ ಅಭಿನಂದಿಸಿದರು.

ಕೈ ಪಾಳೇಯದಲ್ಲಿ ಸಂತಸ–ಸಡಗರ: ಶ್ರೇಯಸ್ ಪಟೇಲ್ ಗೆಲುವು ಸಾಧಿಸುತ್ತಿದ್ದಂತೆಯೇ ನಗರ ಹಾಗೂ ಜಿಲ್ಲೆಯ ವಿವಿಧೆಡೆ ಕೈ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಂಭ್ರಮಾಚರಣೆ ಮಾಡಿದರು.

ಶ್ರೇಯಸ್ ಗೆಲುವು ಖಾತ್ರಿಯಾಗುತ್ತಿದ್ದಂತೆಯೇ ನೂರಾರು ಕಾರ್ಯಕರ್ತರು ಮತ ಎಣಿಕೆ ಕೇಂದ್ರದ ಬಳಿ ಜಮಾಯಿಸಿದ್ದರು. ತಮ್ಮ ನಿರೀಕ್ಷೆ ಫಲಿಸುತ್ತಿದ್ದಂತೆಯೇ ಕುಣಿದು ಕುಪ್ಪಳಿಸಿದರು. ಹಾಗೆಯೇ ಜಿಲ್ಲಾ ಕಾಂಗ್ರೆಸ್ ಕಚೇರಿ ಆವರಣದಲ್ಲಿಯೂ ಜಿಲ್ಲೆಯ ವಿವಿಧೆಡೆಗಳಿಂದ ಆಗಮಿಸಿದ್ದ ಹಲವು ಮುಖಂಡರು ಸಂಭ್ರಮಾಚರಣೆಯಲ್ಲಿ ಭಾಗಿಯಾಗಿದ್ದರು. ಹಾಗೆಯೇ ಹೊಳೆನರಸೀಪುರದಲ್ಲಿಯೂ ಹಲವರು ಪಟಾಟಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು.

ಕೈ ಹಿಡಿದ ಹಾಸನ, ಹೊ.ನ.ಪುರ–ಅರಕಲಗೂಡು: ನಿರೀಕ್ಷೆಯಂತೆಯೇ ಹಾಸನ, ಹೊಳೆನರಸೀಪುರ, ಅರಕಲಗೂಡು ಕ್ಷೇತ್ರದ ಜನರು ಹೆಚ್ಚಾಗಿ ಶ್ರೇಯಸ್ ಕೈ ಹಿಡಿದಿದ್ದಾರೆ. ಹಾಸನದಲ್ಲಿ ಶ್ರೇಯಸ್‌ಗೆ ಸುಮಾರು 20 ಸಾವಿರ ಲೀಡ್ ಸಿಕ್ಕಿದ್ದರೆ ಹೊಳೆನರಸೀಪುರ 17 ಸಾವಿರ ಹಾಗೂ ಅರಕಲಗೂಡಿನಲ್ಲಿ 15 ಸಾವಿರಕ್ಕೂ ಅಧಿಕ ಲೀಡ್ ಸಿಕ್ಕಿದೆ.

ಅರಸೀಕೆರೆಯಲ್ಲಿ ಅಚ್ಚರಿ: ಜಿಲ್ಲೆಯಲ್ಲಿ ಏಕೈಕ ಕಾಂಗ್ರೆಸ್ ಶಾಸಕರಿರುವ ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರೂ ಆಗಿರುವ ಕೆ.ಎಂ.ಶಿವಲಿಂಗೇಗೌಡ ಅವರು ಪ್ರತಿನಿಧಿಸುತ್ತಿರುವ ಅರಸೀಕೆರೆ ವಿಧಾನಸಭಾ ಕ್ಷೇತ್ರ ಕಾಂಗ್ರೆಸ್‌ಗೆ ಹೆಚ್ಚು ಲೀಡ್ ಕೊಡಲಿದೆ ಎಂದು ನಿರೀಕ್ಷೆ ಮಾಡಲಾಗಿತ್ತು. ಆದರೆ ಆರಂಭದಿಂದಲೂ ಇಲ್ಲಿ ಎನ್‌ಡಿಎ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಅವರೇ ಮುನ್ನಡೆ ಕಾಯ್ದುಕೊಂಡೇ ಬಂದಿದ್ದರು. ಕಡೆಯಲ್ಲಿ ಶ್ರೇಯಸ್ ಪಟೇಲ್ ಅವರಿಗೆ 3 ಸಾವಿರ ಮತ ಹೆಚ್ಚಾಗಿ ಬಂದಿವೆ. ಉಳಿದಂತೆ ಆರಂಭದಿಂದಲೂ ಕಡೂರು, ಸಕಲೇಶಪುರ ಮತ್ತು ಬೇಲೂರು ಎನ್‌ಡಿಎಗೆ ಲೀಡ್ ಕೊಟ್ಟಿದ್ದರು. ಕಡೆಯಲ್ಲಿ ಶ್ರವಣಬೆಳಗೊಳ ಮತ್ತು ಬೇಲೂರಿನಲ್ಲಿ ಕೊಂಚ ಅದಲು ಬದಲಾದವು.

ಪಿರಿಯಾಪಟ್ಟಣದಲ್ಲಿ ವಿಜಯೋತ್ಸವ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಯದುವೀರ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪಿರಿಯಾಪಟ್ಟಣದ ಬೆಟ್ಟದಪುರ ಸರ್ಕಲ್‌ನಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ರಾಜೇಂದ್ರ ನೇತೃತ್ವದಲ್ಲಿ ವಿಜಯೋತ್ಸವ ಆಚರಿಲಾಯಿತು. ಈ ವೇಳೆ ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ಮುಖಂಡರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಂ ಗಂ ಗಣೇಶ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗ್ಯಾಂಗ್ಸ್ ಆಫ್ ಗೋಧಾವರಿ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅರನ್‌ಮನೆ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಹಿಟ್‌ಲಿಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಗರುಡನ್ (ತ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನೈಟ್ ಕರ್ಫ್ಯೂ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಥಾಲವನ್ (ಮ): ಬೆ.11.15ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.2ಕ್ಕೆ, ಹಿಟ್ ಲಿಸ್ಟ್ (ತ): ಸಂ.4.15ಕ್ಕೆ, ಗ್ಯಾಂಗ್ಸ್ ಆಫ್ ಗೋಧಾವರಿ (ತೆ): ರಾ.7ಕ್ಕೆ, ಗಂ ಗಂ ಗಣೇಶ (ತೆ): ರಾ.9.55ಕ್ಕೆ
ಸ್ಕ್ರೀನ್ 2	ಗರುಡನ್ (ತ): ಬೆ.11ಕ್ಕೆ, ಮ.1.45ಕ್ಕೆ, ಭಜೆ ವಾಯು ವೇಗಂ (ತೆ): ಸಂ.4.35ಕ್ಕೆ, ಮಂದಾಕಿನಿ (ಮ): ರಾ.7.20ಕ್ಕೆ, ಅರನ್‌ಮನೈ 4 (ಹಿಂ): ರಾ.10ಕ್ಕೆ
ಸ್ಕ್ರೀನ್ 3	ಛೋಟಾ ಭೀಮ್ ಅಂಡ್ ದಿ ಕರ್ಸ್ (ಹಿಂ): ಬೆ.10.35ಕ್ಕೆ, ಸಂ.4.25ಕ್ಕೆ, ಟರ್ಬೋ (ಮ): ಮ.1.25ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.7.05ಕ್ಕೆ, ಒನ್ಸ್ ಅಪೋನ್ ಎ ಟೈಂ ಇನ್ ಕೊಚ್ಚಿ (ಮ): ರಾ.10ಕ್ಕೆ.
ಸ್ಕ್ರೀನ್ 4	ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಚಾ.ನಗರ ಲೋಕಸಭಾ ಕ್ಷೇತ್ರದಲ್ಲಿ ಸುನೀಲ್ ಬೋಸ್‌ಗೆ ಜಯ

ತಿ.ನರಸೀಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಂಭ್ರಮಾಚರಣೆ



ತಿ.ನರಸೀಪುರ, ಜೂ.4– ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರು ಒಂದು ಲಕ್ಷಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಭರ್ಜರಿ ಜಯ ಗಳಿಸಿದ ಹಿನ್ನೆಲೆಯಲ್ಲಿ ತಿ.ನರಸೀಪುರ ಪಟ್ಟಣ ಹಾಗೂ ತಾಲೂಕಿನ ಕನ್ನಹಳ್ಳಿ ಗ್ರಾಮದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ತಿ.ನರಸೀಪುರ: ಚಾಮರಾಜನಗರ ಲೋಕಸಭಾ ಕ್ಷೇತ್ರದ ಮತದಾರರು ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸುವ ಮೂಲಕ ಸಾಮಾಜಿಕ ನ್ಯಾಯ ಎತ್ತಿ ಹಿಡಿದಿದ್ದಾರೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಸುಧಾ ಮಹದೇವಯ್ಯ ತಿಳಿಸಿದರು.

ಸುನೀಲ್ ಬೋಸ್ ಜಯ ಗಳಿಸಿದ ಹಿನ್ನೆಲೆಯಲ್ಲಿ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸಿಹಿ ಹಂಚಿ ವಿಜಯೋತ್ಸವ ಆಚರಿಸಿ ಮಾತನಾಡಿದ ಅವರು, ಚಾಮರಾಜ ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳಲ್ಲಿ ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪನವರು ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಿದ ಪರಿಣಾಮ ಮೈತ್ರಿ ಅಭ್ಯರ್ಥಿ ಬಾಲರಾಜ್ ವಿರುದ್ಧ ಸುನೀಲ್ ಬೋಸ್ ಗೆಲುವು ಸಾಧಿಸಲು ಸಾಧ್ಯವಾಯಿತು ಎಂದರು.

ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಪಕ್ಷದ ಶಾಸಕರು, ಮುಖಂಡರು, ಕಾರ್ಯಕರ್ತರು ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸಿರುವುದು ಹಾಗೂ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿರುವುದರಿಂದ ಕಳೆದ ಬಾರಿಗಿಂತ ಈ ಬಾರಿ ಪಕ್ಷ ಹೆಚ್ಚಿನ ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಸುನೀಲ್ ಬೋಸ್ ಗೆಲುವಿಗೆ ಕಾರಣರಾದ ಸಚಿವರಾದ ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಶಾಸಕರಾದ ಕೃಷ್ಣಮೂರ್ತಿ, ಪುಟ್ಟರಂಗಶೆಟ್ಟಿ, ಗಣೇಶ್ ಪ್ರಸಾದ್, ದರ್ಶನ್, ಅನಿಲ್, ಮಾಜಿ ಶಾಸಕರಾದ ಕೋಟೆ ಎಂ.ಶಿವಣ್ಣ, ನರೇಂದ್ರ, ಡಾ.ಯತೀಂದ್ರ ಹಾಗೂ ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ಸುಧಾ ಅಭಿನಂದನೆ ಸಲ್ಲಿಸಿದರು.

ಈ ವೇಳೆ ಪಪಂ ಮಾಜಿ ಅಧ್ಯಕ್ಷ ಎನ್.ಮಹದೇವಸ್ವಾಮಿ, ಡೈರಿ ಮಾಜಿ ಅಧ್ಯಕ್ಷೆ ಕಲ್ಪನಾ, ತಾಲೂಕು ಕುರುಬರ ಸಂಘದ ನಿರ್ದೇಶಕ ಲೋಹಿತ್, ಚೌಹಳ್ಳಿ ಮಲ್ಲೇಶ್, ಭೈರಾಪುರ ಮಹದೇವಮ್ಮ, ವಿಜಯಲಕ್ಷ್ಮಿ, ಕುಮಾರ್, ದೇವರಾಜ್, ಶಿವಕುಮಾರ್, ಶಿವಪ್ರಸಾದ್ ಹಾಗೂ ಇನ್ನಿತರರಿದ್ದರು.

ಕನ್ನಹಳ್ಳಿಯಲ್ಲೂ ವಿಜಯೋತ್ಸವ



ತಿ.ನರಸೀಪುರ: ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಭರ್ಜರಿ ಜಯ ಗಳಿಸಿದ ಹಿನ್ನೆಲೆಯಲ್ಲಿ ತಾಲೂಕಿನ ಕನ್ನಹಳ್ಳಿ ಗ್ರಾಮದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಕನ್ನಹಳ್ಳಿ ಲಕ್ಷ್ಮಣ ಮಾತನಾಡಿ, ಬಿಜೆಪಿ ಷಡ್ಯಂತ್ರ ಬೆಂಬಲಿಸದೇ ಜನೋಪಯೋಗಿ ಕಾರ್ಯಕ್ರಮದ ಮೂಲಕ ಜನತೆ ಮನಗೆದ್ದಿರುವ ಸಿಎಂ ಸಿದ್ದರಾಮಯ್ಯ, ಸಚಿವ ಮಹದೇವಪ್ಪ ಅವರನ್ನು ಬೆಂಬಲಿಸಿ ಮತದಾರರು ಸುನೀಲ್ ಬೋಸ್‌ಗೆ ಜನಾದೇಶ ನೀಡಿದ್ದಾರೆ ಎಂದ ಅವರು, ಸುನೀಲ್ ಬೋಸ್ ಎಲ್ಲಾ ವರ್ಗಗಳ ನಾಯಕರಾಗಿದ್ದು, ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದ ಜನತೆ ಕಾಂಗ್ರೆಸ್ ಪಕ್ಷ ಗೆಲ್ಲಿಸುವ ಮೂಲಕ ಪ್ರಜಾಪ್ರಭುತ್ವದ ಆಶಯಕ್ಕೆ ಪೂರಕವಾಗಿದ್ದಾರೆ. ಡಾ.ಹೆಚ್.ಸಿ.ಮಹದೇವಪ್ಪನವರು ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡುವ ಧೀಮಂತ ನಾಯಕರಾಗಿದ್ದು, ಅವರ ಪುತ್ರನನ್ನು ಗೆಲ್ಲಿಸುವ ಮೂಲಕ ಜನರು ಉತ್ತಮ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದರು.

ಇದೇ ವೇಳೆ ಕಾಂಗ್ರೆಸ್ ಮುಖಂಡರು, ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಎಸ್‌ಸಿ ಎಸ್‌ಟಿ ಗುತ್ತಿಗೆದಾರ ಸಂಘದ ಜಿಲ್ಲಾಧ್ಯಕ್ಷ ಹೊಸಪುರ ಕೆ.ಮಲ್ಲು, ಗ್ರಾಪಂ ಮಾಜಿ ಅಧ್ಯಕ್ಷ ಮರಿಸ್ವಾಮಿ, ಸದಸ್ಯ ನಾಗೇಂದ್ರ, ಹಿರಿಯ ಮುಖಂಡ ಕನ್ನಳ್ಳಿ ಶಿವಕುಮಾರ್, ಮುಖಂಡರಾದ ಬಸವಣ್ಣ, ಪುಟ್ಟಸ್ವಾಮಿ, ಡಿಎಸ್‌ಎಸ್ ಸೋಮಣ್ಣ, ಬಸವರಾಜು, ದುಂಡಯ್ಯ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಧಾರಾಕಾರ ಮಳೆಗೆ ತಂಬಾಕು ಬ್ಯಾರನ್‌ಗಳು ಕುಸಿತ; ಕೆರೆಯಲ್ಲಿ ಕಟ್ಟಿದ್ದ ಹಸು ಸಾವು



ಹಿರೀಕ್ಯಾತನಹಳ್ಳಿ, ಜೂ.4– ಸೋಮವಾರ ಸುರಿದ ಧಾರಾಕಾರ ಮಳೆಗೆ ತಂಬಾಕು ಹದಗೊಳಿಸುವ 2 ಬ್ಯಾರನ್ ಕುಸಿದು ಬಿದ್ದಿವೆ.

ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದ ದೇವೇಗೌಡ ಹಾಗೂ ಕೃಷ್ಣೇಗೌಡ ಅವರಿಗೆ ಸೇರಿದ ತಂಬಾಕು ಹದಗೊಳಿಸುವ ಬ್ಯಾರನ್ ಕುಸಿದು ಬಿದ್ದಿದೆ. ಇನ್ನು ಬ್ಯಾರನ್‌ನಲ್ಲೇ ವಾಸವಾಗಿದ್ದ ದೇವೇಗೌಡ ಹಾಗೂ ಆತನ ಪತ್ನಿ ಪ್ರಾಣಾಪಾಯದಿಂದ ಪಾರಾಗಿದ್ದು, ಮನೆಯಲ್ಲಿದ್ದ ದವಸ ಧಾನ್ಯ ಸೇರಿದಂತೆ ಗೃಹೋಪಯೋಗಿ ವಸ್ತುಗಳು ನಾಶವಾಗಿ ಲಕ್ಷಾಂತರ ರೂ. ಸಂಭವಿಸಿದೆ.

ಮಳೆಯಿಂದಾಗಿ ತಂಬಾಕು ಹದ ಮಾಡುವ ಬ್ಯಾರನ್‌ಗಳು ಕುಸಿದು ಬಿದ್ದಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಸೂಕ್ತ ಪರಿಹಾರ ನೀಡುವಂತೆ ನಿವಾಸಿಗಳಾದ ದೇವೇಗೌಡ ಹಾಗೂ ಕೃಷ್ಣೇಗೌಡ ಒತ್ತಾಯಿಸಿದ್ದಾರೆ.

ಹಸು ಸಾವು: ಮರೂರು ಗ್ರಾಮದ ಸಮೀಪ ಕುಂತಿ ಕೆರೆಯಲ್ಲಿ ಮೇಯಲು ಕಟ್ಟಿ ಹಾಕಿದ್ದ ಹಸು ಧಾರಾಕಾರ ಮಳೆಗೆ ಸಾವನ್ನಪ್ಪಿದೆ. ರೈತ ಸ್ವಾಮಿ ನಾಯಕ ಅವರು ಹಸು ಕಟ್ಟಿ ಹಾಕಿ ಊಟಕ್ಕೆಂದು ಮನೆಗೆ ಆಗಮಿಸಿದ್ದರು. ಈ ವೇಳೆ ಸುರಿದ ಭಾರಿ ಮಳೆಗೆ ಕೆರೆಗೆ ಹರಿದು ಬಂದ ನೀರಿನಲ್ಲಿ ಸಿಲುಕಿ ಉಸಿರುಗಟ್ಟಿ ಸಾವನ್ನಪ್ಪಿದೆ. ಇದರಿಂದ 1 ಲಕ್ಷ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

PUBLIC NOTICE

Notice is hereby given that **SRI. K.H. SATHYANARAYANA,** son of Late K. Harihara Rao, is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at **DOOR No.2765/1A, D13/A1, "KEYANS", 5TH MAIN ROAD, V.V. PURAM (V.V. MOHALLA), MYSORE–570002,** within 07(Seven) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

House No.48, situated at 2nd Stage, Gokulam, (V.V.Puram), Devaraja Mohalla, Mysore City, site measuring East to West 60.00 feet and North to South 40.00 feet, with building thereon, bounded on: East: Road, West: Site No.35, North: Site No.47 and South: Road.

Sd/- **Dhirendra Kumar R. Mehta,**
Advocate, **KEY-ANS LAW SOLUTIONS**
Date: 04.06.2024, Place: Mysore

ಭಾವಪೂರ್ಣ ಶ್ರದ್ಧಾಂಜಲಿ



ಟಿ.ಕೆ.ನಾಗಪ್ಪ

ಇವರು ದಿನಾಂಕ 3–6–2024ರಂದು ದೈವಾಧೀನರಾಗಿದ್ದು ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 5–6–2024 ರಂದು ಬೆಳಗ್ಗೆ 10ಕ್ಕೆ ಸ್ವಗ್ರಾಮ ನಂಜನಗೂಡು ತಾಲ್ಲೂಕಿನ ತಗಡೂರಿನ ತೋಟದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಕುಟುಂಬವರ್ಗ

ಹಸಿರು ನಮ್ಮ ಉಸಿರು

26ನೇ ವರ್ಷದ ಸವಿನೆನಪು



ಎಸ್.ಮಹದೇವ
ಜ: 15–7–1977 – ಮ: 5–6–1998

ನೀವು ನಮ್ಮನ್ನಗಲಿ 26 ವರ್ಷ ಕಳೆದರೂ ಪ್ರತಿ ದಿನವೂ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ತಂದೆ, ತಾಯಿ ಸೋದರ, ಸೋದರಿ, ಅತ್ತಿಗೆ, ಕುಟುಂಬ ವರ್ಗದವರು, ಕುವೆಂಪುನಗರ, ಮೈಸೂರು

The Heritage Club(R)

#816/274, 'C' Block, 3rd stage, Vijayanagar, Mysuru-570030 ✆: 0821-2412377, 95912 28966
Email: heritageclubmys@gmail.com, www.heritageclubmys.in

L.No.08/98/99/21-04-98

TENDER NOTIFICATION

Sealed tenders are invited by the Secretary, The Heritage Club(R), Mysore for civil works, pertaining to the Construction of Second Floor Sports Complex at The Heritage Club(R), Mysore.

Tender forms can be obtained from the office of the Secretary The Heritage Club (R), Mysore on payment of Rs.5,000/- (Cost of tender is non refundable) through Demand Draft/Pay order in favour of The Secretary, The Heritage Club(R), Mysore.

Tender forms are issued in the office of the Secretary, The Heritage Club (R), Mysore from 08-06-2024 during office hours from 10.30 am to 5.30 pm.

Completed tenders shall be submitted to the office of the Secretary, The Heritage Club (R), Mysore, on or before 15-06-2024 within 5.30 pm.

The tenders shall be opened at 5.30 pm on 18-06-2024 thereafter in the office of the Secretary, The Heritage Club (R), Mysore.

Tenders will be issued to the eligible contractors registered and they have to furnish the definite proof from the appropriate authority of having satisfactorily completed three similar works during last Eight years.

Issued: by The Secretary, The Heritage Club (R), Mysore.
Dated : 05-06-2024

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ
ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ : ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್–1/103/2024–25 ದಿನಾಂಕ: 04–06–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

2021–22ನೇ ಸಾಲಿನಲ್ಲಿ **Milion Plus City (BBMP)** ಹಂಚಿಕೆಯಾದ 15ನೇ ಹಣಕಾಸು ಆಯೋಗದ ಘನತ್ಯಾಜ್ಯ ವಸ್ತು ನಿರ್ವಹಣೆಯ ಅನುದಾನವನ್ನು **Non-Million Plus City (BBMP)** ಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆಗೊಳಿಸಲಿರುವ ಅನುದಾನದಡಿ ಹಾಗೂ ಪಾಲಿಕೆ ಅನುದಾನದಡಿ ಮತ್ತು ಸೇವಾ ಟೆಂಡರ್‌ನ್ನು **KTPP** ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡತಿರುತ್ತದೆ.

ಕ್ರ ಸಂ.	ವಿವರ	ಕಾಮಗಾರಿ ಸಂಖ್ಯೆ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 4:30 ಗಂಟೆ ನಂತರ ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಬೆಳಗ್ಗೆ 11.00 ಗಂಟೆ ಟೆಂಡರ್‌ನ ಪೂರ್ವಭಾವಿ ಸಭೆ	ಸಂಜೆ 4:25 ಗಂಟೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 4:30 ಗಂಟೆಯ ನಂತರ ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	ಮೈಸೂರು ನಗರ ಕೆಸರೆ ಬಳಿ ಇರುವ ಮಲೀನ ನೀರು ಶುದ್ಧೀಕರಣ ಘಟಕದಿಂದ ಶುದ್ಧೀಕರಿಸಿದ ನೀರನ್ನು ದೇವನೂರು ಕೆರೆಗೆ ನೀರಿನ ಮರು ಬಳಕೆ ಮಾಡುವ ಸಲುವಾಗಿ ಶೇಖರಣಾ ತೊಟ್ಟಿ ನಿರ್ಮಾಣ ಮಾಡಿ, ಪಂಪಸೆಟ್ ಅಳವಡಿಸಿ, ಏರುಕೊಳವೆ ಮಾರ್ಗವನ್ನು ಅಳವಡಿಸುವ ಕಾಮಗಾರಿ.	1	450.00	05.06.2024	11.06.2024	12.06.2024	13.06.2024
2	ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಲುವಾಗಿ ಕುವೆಂಪುನಗರ ಎಂ.ಬಿ.ಆರ್.ನಲ್ಲಿ 4.0 ಎಂ.ಎಲ್.ಡಿ ಸಾಮಾರ್ಥ್ಯದ ಜಲಸಂಗ್ರಹಾಗಾರವನ್ನು ನಿರ್ಮಿಸಿ 200 ಕೆ.ವಿ. ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾಮಗಾರಿ	1	468.50	05.06.2024	11.06.2024	12.06.2024	13.06.2024
3	Kw-1 & KW-2	11	156.62	06.06.2024	-	14.06.2024	15.06.2024
4	KC-7	7	-	07.06.2024	-	15.06.2024	18.06.2024

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– **ಕಾರ್ಯಪಾಲಕ ಅಭಿಯಂತರರು,** ನೀಸ&ಒಚ(ಪೂರ್ವ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಭಾವಪೂರ್ಣ ಶ್ರದ್ಧಾಂಜಲಿ



ಸ್ಟೀಟ್ ನಂಜಪ್ಪನವರ ಧರ್ಮಪತ್ನಿ
ಶ್ರೀಮತಿ **ಚೆನ್ನಮ್ಮ**
ಪಡುವಾರಹಳ್ಳಿ, ಮೈಸೂರು
ನಿಧನ: 03–06–2024
ದುಃಖತಪ್ತರು: ಕುಟುಂಬವರ್ಗದವರು